

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 3 ಶುಕ್ರವಾರ 2023


ಸಂಪುಟ: 43 | ಸಂಚಿಕೆ: 286 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4





ಅಭ್ಯರ್ಥಿಗಳ ಆಯ್ಕೆಗೆ ದಿನವಿಡೀ ಕಾಂಗ್ರೆಸ್ ವ್ಯರ್ಥ ಕಸರತ್ತು

● ವೀಕ್ಷಕ ಮಾಹಿತಿ ಆಧರಿಸಿ ರೆಸಾರ್ಟ್‌ನಲ್ಲಿ ನಾಯಕರ ಸಭೆ ● ಬಿಜೆಪಿ ಮೊದಲ ಪಟ್ಟಿ ಬಿಡುಗಡೆ ನಂತರ ಪಟ್ಟಿ ಪ್ರಕಟಿಸಲು ನಾಯಕರ ನಿರ್ಧಾರ ● ಹಾಲಿ ಶಾಸಕರೆಲ್ಲರಿಗೂ ಟಿಕೆಟ್ ಸಿಗುವ ವಿಶ್ವಾಸ



ಬೆಂಗಳೂರು, ಫೆ.2(ಕೆಎಂಶಿ)– ದಿನವಿಡೀ ಕಸರತ್ತು ನಡೆಸಿದರೂ ಒಂದೇ ಒಂದು ಕ್ಷೇತ್ರದ ಅಭ್ಯರ್ಥಿಯ ಆಯ್ಕೆಯನ್ನು ಅಂತಿಮಗೊಳಿಸಲು ಪ್ರದೇಶ ಕಾಂಗ್ರೆಸ್‌ಗೆ ಸಾಧ್ಯವಾಗಿಲ್ಲ.

ನಗರದ ಹೊರವಲಯದ ರೆಸಾರ್ಟ್‌ನಲ್ಲಿ ರಾಜ್ಯ ನಾಯಕರು ಅಭ್ಯರ್ಥಿಗಳ ಆಯ್ಕೆಗೆ ಸಂಬಂಧಿಸಿದಂತೆ ಸುದೀರ್ಘ ಚರ್ಚೆ ನಡೆಸಿದರೇ ಹೊರತು ಅಭ್ಯರ್ಥಿಗಳ ಪಟ್ಟಿ ಅಂತಿಮವಾಗಿಲ್ಲ. ಯಾವಾಗ ಬಿಡುಗಡೆ ಮಾಡಬೇಕೆಂಬುದು ಇತ್ಯರ್ಥವಾಗಲಿಲ್ಲ. ರಾಜ್ಯ ಉಸ್ತುವಾರಿ ಹೊಣೆ ಹೊತ್ತ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್‌ಸಿಂಗ್ ಸುರ್ಜೆವಾಲ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಧಾನಸಭೆ ಪ್ರತಿಪಕ್ಷದ ನಾಯಕರಾದ ಸಿದ್ದರಾಮಯ್ಯ, ಬಿ.ಕೆ.ಹರಿಪ್ರಸಾದ್, ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ್ ಸೇರಿದಂತೆ ಹಿರಿಯ ನಾಯಕರು ಪ್ರತಿ ಜಿಲ್ಲೆಯ ಆಕಾಂಕ್ಷಿಗಳ ಜೊತೆ ಚರ್ಚೆಮಾಡಿ ಹೆಸರುಗಳನ್ನು ಶಿಫಾರಸ್ಸು ಮಾಡಿರುವ ಪಕ್ಷದ ಕಾರ್ಯದರ್ಶಿಗಳು ಹಾಗೂ ಚುನಾವಣಾ ಸಮಿತಿ ಸದಸ್ಯರೊಟ್ಟಿಗೆ ಸುದೀರ್ಘ ಚರ್ಚೆ ನಡೆಸಿದರು. ರಾಜ್ಯದ 224 ವಿಧಾನಸಭಾ ಕ್ಷೇತ್ರಗಳ ಪೈಕಿ 130 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಲು ಇಂದು ಸಭೆ ನಡೆಸಲಾಯಿತು. ವೀಕ್ಷಕರಿಂದ ಪೂರ್ಣ ಮಾಹಿತಿ ಪಡೆದ ರಾಜ್ಯ ನಾಯಕರು, ಶಿಫಾರಸ್ಸು ಮಾಡಿದ ಅಭ್ಯರ್ಥಿಗಳಿಗೆ ಟಿಕೆಟ್ ನೀಡಿದರೆ ಅವರ ಗೆಲುವಿನ ಸಾಧ್ಯತೆ ಹೇಗಿದೆ. ಆ ಕ್ಷೇತ್ರದಲ್ಲಿ ನಮಗೆ ಹತ್ತಿರದ ವಿರೋಧಿ ಯಾರು, ನೇರ ಸ್ಪರ್ಧೆ ಇದೆಯೇ, ಇಲ್ಲವೇ ತ್ರಿಕೋನ ಸ್ಪರ್ಧೆಯೋ ಎಂಬ ಬಗ್ಗೆ ಪೂರ್ಣ ಮಾಹಿತಿ ಪಡೆದರು.

ನೀವು ಶಿಫಾರಸು ಮಾಡಿರುವ ಕೆಲವು ಕ್ಷೇತ್ರಗಳಲ್ಲಿ ನಮ್ಮ ಪಕ್ಷದ ಆಕಾಂಕ್ಷಿಗಳಿಗೆ ಗೆಲುವಿನ ಸಾಮರ್ಥ್ಯ ▶ 9ನೇ ಪುಟಕ್ಕೆ

ಮೀಸಲು ಕ್ಷೇತ್ರಗಳ ಅಭ್ಯರ್ಥಿ ಆಯ್ಕೆ ನಮಗೆ ಬಿಡಿ

● ಪರಿಶಿಷ್ಟ ಜಾತಿ, ಪಂಗಡದ ನಾಯಕರ ಹಕ್ಕು ಮಂಡನೆ
● ಕಾಂಗ್ರೆಸ್ ನಾಯಕರಿಗೆ ಅಭ್ಯರ್ಥಿ ಆಯ್ಕೆ ಈಗ ಬಿಸಿತುಪ್ಪ

ಬೆಂಗಳೂರು, ಫೆ.2(ಕೆಎಂಶಿ)–ರಾಜ್ಯ ವಿಧಾನಸಭಾ ಚುನಾವಣೆಗೆ ಮೀಸಲು ಕ್ಷೇತ್ರಗಳಲ್ಲಿನ ಅಭ್ಯರ್ಥಿಗಳ ಆಯ್ಕೆ ಅಧಿಕಾರವನ್ನು ನಮಗೆ ನೀಡಬೇಕು ಎಂದು ಪರಿಶಿಷ್ಟ ಜಾತಿ ಮತ್ತು ಪಂಗಡದ ನಾಯಕರು ಹಕ್ಕು ಮಂಡಿಸಿದ್ದಾರೆ.

ರಾಜ್ಯ ಉಸ್ತುವಾರಿ ಹೊಣೆ ಹೊತ್ತ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೆವಾಲ, ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಮುಂದೆ ಈ ಪ್ರಸ್ತಾಪವಿಟ್ಟಿದ್ದಾರೆ. ಕಾಂಗ್ರೆಸ್ ಪಕ್ಷ ಬಹುಮತ ಗಳಿಸಿದರೆ ಮುಖ್ಯಮಂತ್ರಿಯಾಗಲು ಪೈಪೋಟಿಗೆ ಇಳಿದಿರುವ ಉಭಯ ನಾಯಕರಿಗೆ ಪರಿಶಿಷ್ಟ ▶ 9ನೇ ಪುಟಕ್ಕೆ

ಸಿದ್ದರಾಮಯ್ಯ, ಕೆ.ಜೆ.ಜಾರ್ಜ್, ರಾಬರ್ಟ್ ವಾದ್ರಾ ಸೇರಿ 'ಕೈ' ನಾಯಕರ ವಿರುದ್ಧ ಲೋಕಾಯುಕ್ತದಲ್ಲಿ 10 ದೂರು ದಾಖಲು

ಸಾವಿರಾರು ಕೋಟಿ ಹಗರಣದ 3728 ದಾಖಲೆ ಸಲ್ಲಿಸಿದ ಬಿಜೆಪಿ ಮುಖಂಡ ಎನ್.ಆರ್.ರಮೇಶ್



ಭೂ ಕಬಳಿಕೆ, ಇಂದಿರಾ ಕ್ಯಾಂಟಿನ್, ಜಾಹೀರಾತು, ತ್ಯಾಜ್ಯ ವಿಲೇವಾರಿ, ಕೃಷಿ ಹೊಂಡಾಗಳಲ್ಲಿ ಭಾರೀ ಅವ್ಯವಹಾರದ ಆರೋಪ

ಬೆಂಗಳೂರು, ಫೆ.2– ವಿಪಕ್ಷ ನಾಯಕ ಸಿದ್ದರಾಮಯ್ಯ, ರಾಬರ್ಟ್ ವಾದ್ರಾ ಸೇರಿದಂತೆ ಹಲವಾರು ಕಾಂಗ್ರೆಸ್ ನಾಯಕರು ಹಾಗೂ ಅಧಿಕಾರಿಗಳ ವಿರುದ್ಧ ಲೋಕಾಯುಕ್ತಕ್ಕೆ 3728 ಪುಟಗಳ ದಾಖಲೆ ಸಮೇತ ದೂರು ಸಲ್ಲಿಸಲಾಗಿದೆ.

ಬೆಂಗಳೂರು ದಕ್ಷಿಣ ಜಿಲ್ಲಾ ಬಿಜೆಪಿ ಘಟಕದ ಅಧ್ಯಕ್ಷ ಎನ್.ಆರ್.ರಮೇಶ್, 10 ಬೃಹತ್ ಹಗರಣಗಳಿಗೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಬರ್ಟ್ ವಾದ್ರಾ, ಮಾಜಿ ಸಚಿವರಾದ ಕೆ.ಜೆ.ಜಾರ್ಜ್, ಕೃಷ್ಣ ಬೈರೇಗೌಡ, ಯು.ಟಿ.ಖಾದರ್, ಎಂ.ಬಿ.ಪಾಟೀಲ್, ಜಮೀರ್ ಅಹಮದ್, ದಿನೇಶ್ ಗುಂಡೂರಾವ್. ಎಂ.ಕೃಷ್ಣಪ್ಪ, ಎನ್.ಎ. ಹ್ಯಾರೀಸ್ ಹಾಗೂ ಪ್ರಿಯಾ ಕೃಷ್ಣ ವಿರುದ್ಧ 10 ದೂರುಗಳನ್ನು ದಾಖಲಿಸಿದ್ದಾರೆ. ಅದೇ ರೀತಿ 9 ಹಿರಿಯ ಐಎಎಸ್, ಐವರು ಕೆಎಎಸ್ ಸೇರಿದಂತೆ 21 ಮಂದಿ ಅಧಿಕಾರಿಗಳ ವಿರುದ್ಧವೂ ದೂರು ದಾಖಲಿಸಿದ್ದಾರೆ. ರಾಜ್ಯದ ರಾಜಕೀಯ ಇತಿಹಾಸದಲ್ಲಿಯೇ ಪ್ರಪ್ರಥಮವಾಗಿ 10 ವಿವಿಧ ಬೃಹತ್ ಹಗರಣಗಳಿಗೆ ಸಂಬಂಧಿಸಿದಂತೆ, ಪ್ರತ್ಯೇಕವಾದ 10 ದೂರುಗಳನ್ನು ಒಂದೇ ಬಾರಿಗೆ ಲೋಕಾಯುಕ್ತದಲ್ಲಿ ದಾಖಲಿಸಲಾಗಿದೆ ಎಂದು ಎನ್.ಆರ್.ರಮೇಶ್ ತಿಳಿಸಿದ್ದಾರೆ. ನಗರದಲ್ಲಿಂದು ಈ ಕುರಿತು ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಮಾಜಿ ಸಚಿವರಾದ ಕೆ.ಜೆ.ಜಾರ್ಜ್, ಕೃಷ್ಣ ಬೈರೇಗೌಡ, ಯು.ಟಿ. ಖಾದರ್, ಎಂ.ಬಿ.ಪಾಟೀಲ್, ಜಮೀರ್ ಅಹಮದ್, ದಿನೇಶ್ ಗುಂಡೂರಾವ್, ಎಂ.ಕೃಷ್ಣಪ್ಪ ಹಾಗೂ ಶಾಸಕ ಎನ್.ಎ.ಹ್ಯಾರೀಸ್, ಮಾಜಿ ಶಾಸಕ ಪ್ರಿಯಾಕೃಷ್ಣ. ಅದೇ ರೀತಿ, ಹಿರಿಯ ಐಎಎಸ್ ಅಧಿಕಾರಿಗಳಾದ ಪಾಂಡುರಂಗ ಬಿ.ನಾಯಕ್, ಜಿ.ಸತೀಶ್, ಅತುಲ್ ಕುಮಾರ್ ತಿವಾರಿ, ವಸ್ತದ್, ವಿ.ಶಂಕರ್, ಮನೋಜ್ ರಾಜನ್ ಹಾಗೂ ಡಾ.ಪಿ. ಬೋರೇಗೌಡ, ಡಾ.ಲೀಲಾ ಸಂಪಿಗೆ, ಚಲುವರಾಜು ಮತ್ತು ಕೃಷ್ಣಮೂರ್ತಿ ವಿರುದ್ಧ ದೂರು ದಾಖಲಾಗಿವೆ ಎಂದರು.

ಇದಲ್ಲದೇ ಸೋನಿಯಾ ಗಾಂಧಿ ಅಳಿಯನೂ ಆದ ಪ್ರಿಯಾಂಕಾ ಗಾಂಧಿ ಪತಿ ರಾಬರ್ಟ್ ವಾದ್ರಾ ವಿರುದ್ಧವೂ ಸಹ ಸರ್ಕಾರಿ ಭೂ ಕಬಳಿಕೆ ಪ್ರಕರಣದ ದೂರು ದಾಖಲಾಗಿದ್ದು, ವಾದ್ರಾ ಪಾಲುದಾರಿಕೆಯ ಡಿಎಲ್‌ಎಫ್ ಸಂಸ್ಥೆಯು ಬೆಂಗಳೂರು ದಕ್ಷಿಣ ತಾಲೂಕು ತಾವರೆಕೆರೆ ಹೋಬಳಿ ಗಂಗೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ 1 ರಿಂದ 99, ವರ್ತೂರು ಗ್ರಾಮದ ಸರ್ವೆ ನಂಬರ್ 7, 8, 9, 10, ▶ 9ನೇ ಪುಟಕ್ಕೆ

ಒಳಪುಟಗಳಲ್ಲಿ

1.30 ಲಕ್ಷ ಮಂದಿ ತಮ್ಮ 'ಆಸ್ತಿ ಕಾರ್ಡ್' ಪಡೆದಿಲ್ಲ

ಆಸ್ತಿ ಮಾರಾಟ, ಖರೀದಿಗೆ ಕಡ್ಡಾಯವಲ್ಲದಿರುವುದೇ ಈ ನಿರಾಸಕ್ತಿಗೆ ಕಾರಣ!

ಮೈಸೂರು,ಫೆ.2(ಆರ್‌ಕೆ)–ಮೈಸೂರಲ್ಲಿ ಆಸ್ತಿಗಳ ಸರ್ವೆ ಮಾಡಿ ಯುಪಿಒಆರ್ (ನಗರ ಆಸ್ತಿ ಮಾಲೀಕತ್ವ ದಾಖಲೆ) ಕಾರ್ಡ್‌ಗಳನ್ನು ಸಿದ್ಧಪಡಿಸಿದ್ದರೂ ಇನ್ನೂ 1,30,000 ಆಸ್ತಿ ಮಾಲೀಕರು ದಾಖಲೆಗಳನ್ನು ಕಚೇರಿಯಿಂದ ಪಡೆದುಕೊಳ್ಳದೇ ನಿರಾಸಕ್ತಿ ತೋರಿದ್ದಾರೆ.

ಮಾಸ್ಟರ್ ಪ್ಲಾನ್ (ಸಮಗ್ರ ಅಭಿವೃದ್ಧಿ ಯೋಜನೆ–ಸಿಡಿಪಿ) ಪ್ರಕಾರ ಮೈಸೂರು ತಾಲೂಕಿನ 42 ಗ್ರಾಮ ಒಳಗೊಂಡಂತೆ ಮೈಸೂರಲ್ಲಿ 4,50,000 ಆಸ್ತಿಗಳ ಡ್ರೋಣ್ ಸರ್ವೆ ಮಾಡಿ ಯುಪಿಒಆರ್ ಸಿದ್ಧಪಡಿಸಿ ದ್ದರೂ ಇನ್ನೂ 1,30,000 ಆಸ್ತಿ ಮಾಲೀಕರು ತಮ್ಮ ಕಚೇರಿಯಿಂದ ಭೂ ದಾಖಲೆಯನ್ನು ಪಡೆದಿಲ್ಲ ಎಂದು ಭೂ ದಾಖಲೆಗಳ ಮೈಸೂರು ವಿಭಾಗದ ಜಂಟಿ ನಿರ್ದೇಶಕ ಪ್ರಸಾದ್ ವಿ. ಕುಲಕರ್ಣಿ ತಿಳಿಸಿದ್ದಾರೆ. ಮೈಸೂರಿನ ನಜರ್‌ಬಾದ್‌ನ ಮಿನಿ ವಿಧಾನಸೌಧದ ಬಳಿ ಇರುವ ತಮ್ಮ ಕಚೇರಿಯಲ್ಲಿ ತಮ್ಮನ್ನು ಭೇಟಿ ಮಾಡಿದ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಅವರು, ನಗರ ಪ್ರದೇಶದಲ್ಲಿ ಆಸ್ತಿಗಳ ನಿಖರ ಮಾಹಿತಿ ಒಳಗೊಂಡ ಒಂದು ವಿಶಿಷ್ಟ ಗುರುತಿನ ಭೂ ದಾಖಲೆಯಾಗಿರುವ ಯುಪಿಒಆರ್ ಕಾರ್ಡ್ ಅನ್ನು ಆಸ್ತಿ ಮಾಲೀಕರಿಗೆ ನೀಡಲಾಗುತ್ತದೆ. ಡ್ರೋಣ್ ಕ್ಯಾಮರಾ ಮೂಲಕ ಆಸ್ತಿಗಳ ವೀಡಿಯೋ ಮಾಡಿ ನಂತರ ಪರಿಶೀಲಿಸಿ ಸಾಫ್ಟ್‌ವೇರ್‌ನಲ್ಲಿ ಅದರ ವಿಸ್ತೀರ್ಣ ಲೋಕೇಷನ್, ವಿಳಾಸ, ಮಾಲೀಕರ ಹೆಸರು ಇತ್ಯಾದಿ ಅಂಶಗಳನ್ನು ಪರಿಗಣಿಸಿ ಆಸ್ತಿ ಮಾಲೀಕತ್ವದ ಕಾರ್ಡ್‌ಗಳನ್ನು ಸಿದ್ಧಪಡಿಸಲಾಗಿದೆ ಎಂದು ಕುಲಕರ್ಣಿ ತಿಳಿಸಿದರು. ಕರ್ನಾಟಕ ರಾಜ್ಯದಲ್ಲಿ ಲ್ಯಾಂಡ್ ಮಾರ್ಕ್ ಯೋಜನೆಯಾಗಿರುವ ಯುಪಿಒಆರ್ ಅನ್ನು 2014ರಲ್ಲಿ ಮೈಸೂರು, ಶಿವಮೊಗ್ಗ ಮತ್ತು ಮಂಗಳೂರು ನಗರಗಳಲ್ಲಿ ಪೈಲೆಟ್ ಪ್ರಾಜೆಕ್ಟ್ ಆಗಿ ಪಿಪಿಪಿ ಮಾದರಿಯಲ್ಲಿ ಆರಂಭಿಸಲಾಗಿತ್ತು. ವಂಚನೆ, ಮೋಸ, ಸರ್ಕಾರಿ ಜಮೀನು ಆಸ್ತಿ ಕಬಳಿಸುವಂತಹ ಕೃತ್ಯ ತಡೆಗಟ್ಟಬೇಕೆಂಬ ಸದುದ್ದೇಶದಿಂದ ಜಾರಿಗೆ ಬಂದ ಈ ಯೋಜನೆಯನ್ನು ಮೈಸೂರು ನಗರದಲ್ಲಿ ಅಧಿಕಾರಿಗಳು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಯಡಿ ಮೈಸೂರು ನಗರ ಮತ್ತು ▶ 6ನೇ ಪುಟಕ್ಕೆ



ಪ್ರಸಾದ್ ವಿ.ಕುಲಕರ್ಣಿ

ಡಿಕೆಶಿ ವಿರುದ್ಧ ಸೋನಿಯಾಗೆ ದೂರು: ಈ ಪತ್ರ ನಕಲಿ ಎಂದ ಸಿದ್ದರಾಮಯ್ಯ

ಮೈಸೂರು, ಫೆ.2–ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಿರುದ್ಧ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಅವರಿಗೆ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರು ಬರೆದಿದ್ದಾರೆ ಎನ್ನಲಾದ ಪತ್ರ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು, ಈ ಪತ್ರ ನಕಲಿ ಎಂದು ಸಿದ್ದರಾಮಯ್ಯನವರು ಟ್ವೀಟ್ ಮಾಡಿದ್ದಾರೆ.

ವೈರಲ್ ಆಗಿರುವ ಪತ್ರದಲ್ಲಿ ಸಿದ್ದರಾಮಯ್ಯನವರ ಲೆಟರ್‌ಹೆಡ್ ಇಂಗ್ಲಿಷ್ ಭಾಷೆಯಲ್ಲಿ ಇದ್ದರೇ, ಸೋನಿಯಾ ಗಾಂಧಿ ಅವರಿಗೆ ಕನ್ನಡದಲ್ಲಿ ಬರೆಯಲಾಗಿದೆ. ಈ ಸಂಬಂಧ ಟ್ವೀಟ್ ಮಾಡಿರುವ ಸಿದ್ದರಾಮಯ್ಯ, 'ನನ್ನ ಹೆಸರನ್ನು ದುರ್ಬಳಕೆ ಮಾಡಿಕೊಂಡು ನಕಲಿ ಪತ್ರವೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ನನ್ನ ಮತ್ತು ಕೆಪಿಸಿಸಿ ಅಧ್ಯಕ್ಷರ ಸಂಬಂಧವನ್ನು ಕೆಡಿಸುವ ದುರುದ್ದೇಶದಿಂದ ಯಾರೋ ಕಿಡಿಗೇಡಿಗಳು ಈ ಕೃತ್ಯ ನಡೆಸಿದ್ದಾರೆ. ಈ ಪತ್ರಕ್ಕೂ ನನಗೂ ಸಂಬಂಧವಿಲ್ಲ. ಮುಂದಿನ ಚುನಾವಣೆಯಲ್ಲಿ ಗೆಲುವಿನ ಹಾದಿಯಲ್ಲಿರುವ ನಮ್ಮ ಪಕ್ಷದ ಕಾರ್ಯಕರ್ತರಲ್ಲಿ ಗೊಂದಲ ಮೂಡಿಸುವ ಉದ್ದೇಶದಿಂದಲೇ ಈ ಖೊಟ್ಟಿ ಪತ್ರವನ್ನು ಹರಿಯ ಬಿಡಲಾಗಿದೆ. ಈ ಬಗ್ಗೆ ನಾನು ಪೊಲೀಸರಿಗೆ ದೂರು ನೀಡಲಿದ್ದು, ದುಷ್ಕೃತ್ಯದ ಹಿಂದಿನ ದುರುಳರನ್ನು ಪತ್ತೆ ಹಚ್ಚಿ ಶಿಕ್ಷೆಗೆ ಒಳಪಡಿಸುತ್ತಾರೆಂದು ನಂಬಿದ್ದೇನೆ ಎಂದು ಟ್ವೀಟ್ ಮಾಡಿದ್ದಾರೆ.

ಪೋಕ್ಸೋ ಪ್ರಕರಣ: ಮುರುಘಾ ಶ್ರೀ ಜಾಮೀನು ಅರ್ಜಿ ತಿರಸ್ಕರಿಸಿದ ಕೋರ್ಟ್



ಚಿತ್ರದುರ್ಗ, ಫೆ.2– ಚಿತ್ರದುರ್ಗದ ಮುರುಘಾ ಮಠದ ಡಾ. ಶಿವಮೂರ್ತಿ ಶ್ರೀಗಳ ವಿರುದ್ಧ ದಾಖಲಾಗಿರುವ ಪೋಕ್ಸೊ ಪ್ರಕರಣದ ಜಾಮೀನು ಅರ್ಜಿಯನ್ನು ಎರಡನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶ ಬಿ.ಕೆ. ಕೋಮಲಾ ಮಂಗಳವಾರ ತಿರಸ್ಕರಿಸಿದ್ದಾರೆ.

ಮಠಾಧೀಶರ ಪರ ವಕೀಲರು ಜಾಮೀನಿಗಾಗಿ ಕರ್ನಾಟಕ ಹೈಕೋರ್ಟ್‌ನ ಮೊರೆ ಹೋಗಿದ್ದರು. ನಂತರ ತಮ್ಮ ಅರ್ಜಿಯನ್ನು ಹಿಂಪಡೆದು ಎರಡನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯದಲ್ಲಿ ಜಾಮೀನು ಪಡೆಯುವ ಅವಕಾಶವನ್ನು ಬಳಸಿಕೊಳ್ಳಲು ಪ್ರಯತ್ನಿಸಿದರು. ಎರಡೂ ಕಡೆಯ ವಾದವನ್ನು ಆಲಿಸಿದ ನ್ಯಾಯಾಧೀಶರು ಮಠಾಧೀಶರ ಮನವಿಯನ್ನು ತಿರಸ್ಕರಿಸಿದರು. ಜಾಮೀನಿಗಾಗಿ ಹೈಕೋರ್ಟ್ ಮೊರೆ ಹೋಗುವುದಾಗಿ ಮಠಾಧೀಶರ ಪರ ವಕೀಲರು ತಿಳಿಸಿದ್ದಾರೆ. ಮೈಸೂರಿನ ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ ಸಂತ್ರಸ್ತರಿಬ್ಬರು ನೀಡಿದ ದೂರಿನ ಆಧಾರದ ಮೇಲೆ ಜಿಲ್ಲಾ ಪೊಲೀಸರು ಪ್ರಕರಣವನ್ನು ಚಿತ್ರದುರ್ಗ ಗ್ರಾಮಾಂತರ ಠಾಣೆಗೆ ವರ್ಗಾಯಿಸಿ ತನಿಖೆ ನಡೆಸಿ ಪ್ರಕರಣಕ್ಕೆ ಸಂಬಂಧಿಸಿದಂತೆ 694 ಪುಟಗಳ ಚಾರ್ಜ್‌ಶೀಟ್ ಸಲ್ಲಿಸಿದ್ದಾರೆ.

ಕಣ್ಣೂರಲ್ಲಿ ಚಲಿಸುತ್ತಿದ್ದ ಕಾರಿನಲ್ಲಿ ಏಕಾಏಕಿ ಬೆಂಕಿ; ಗರ್ಭಿಣಿ, ಪತಿ ಸಜೀವ ದಹನ



ಕಣ್ಣೂರು, ಫೆ.2–ಕೇರಳದ ಕಣ್ಣೂರು ಜಿಲ್ಲಾಸ್ಪತ್ರೆ ಬಳಿ ಚಲಿಸುತ್ತಿದ್ದ ಕಾರಿನಲ್ಲಿ ಏಕಾಏಕಿ ಬೆಂಕಿ ಕಾಣಿಸಿಕೊಂಡಿದ್ದು, ಕಾರಿನಲ್ಲಿದ್ದ ಗರ್ಭಿಣಿ ಮಹಿಳೆ ಮತ್ತು ಆಕೆಯ ಪತಿ ಸಜೀವ ದಹನವಾಗಿರುವ ದಾರುಣ ಘಟನೆ ಗುರುವಾರ ನಡೆದಿದೆ.

ಇಲ್ಲಿನ ಜಿಲ್ಲಾ ಸರ್ಕಾರಿ ಆಸ್ಪತ್ರೆ ಬಳಿ ಕಾರಿಗೆ ಬೆಂಕಿ ಹೊತ್ತಿಕೊಂಡಿದೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಮೃತ ದಂಪತಿಯನ್ನು ಕುಟ್ಟಿಯತ್ತೂರು ಕರಂಬುವಿನ ಪ್ರಜಿತ್(32) ಮತ್ತು ಅವರ ಪತ್ನಿ ರೀಶಾ (26) ಎಂದು ಗುರುತಿಸಲಾಗಿದ್ದು, ಇಬ್ಬರೂ ಕುಟ್ಟಿಯತ್ತೂರಿನಿಂದ ಜಿಲ್ಲಾ ಆಸ್ಪತ್ರೆಗೆ ತೆರಳುತ್ತಿದ್ದಾಗ ದುರಂತ ಸಂಭವಿಸಿದೆ ಎಂದು ಪೊಲೀಸರು ಹೇಳಿದ್ದಾರೆ. ಪ್ರಜಿತ್ ಮತ್ತು ರೀಶಾ ಇಬ್ಬರೂ ಕಾರಿನ ಮುಂದಿನ ಸೀಟ್‌ನಲ್ಲಿ ಕುಳಿತಿದ್ದರು. ಕಾರಿನ ಹಿಂದಿನ ಸೀಟಿನಲ್ಲಿ ಮಗು ಸೇರಿದಂತೆ ಇನ್ನೂ ನಾಲ್ವರು ಪ್ರಯಾಣಿಕರಿದ್ದರು. ಕಾರಿಗೆ ಬೆಂಕಿ ಹೊತ್ತಿಕೊಂಡಾಗ ಆ ನಾಲ್ವರು ಕಾರಿನಿಂದ ಜಿಗಿದಿದ್ದಾರೆ.

ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಕಾಣಿಸಿಕೊಂಡಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ. ಬೆಂಕಿ ಹೊತ್ತಿಕೊಂಡಾಗ ಕಾರು ಚಲಾಯಿಸುತ್ತಿದ್ದ ಪ್ರಜಿತ್ ಹಿಂಬಾಗಿಲು ತೆರೆದು ಹಿಂಬದಿ ಸೀಟಿನಲ್ಲಿ ಕುಳಿತಿದ್ದ ಪ್ರಯಾಣಿಕರು ಪಾರಾಗಲು ಸಹಾಯ ಮಾಡಿದ್ದಾರೆ. ಆದರೆ ತಾವು ಪಾರಾಗಲು ಮುಂದಿನ ಬಾಗಿಲು ತೆರೆಯಲು ಯತ್ನಿಸಿ ವಿಫಲವಾಗಿದ್ದಾರೆ ಎಂದು ಸ್ಥಳೀಯರು ತಿಳಿಸಿದ್ದಾರೆ. ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳೀಯರ ಬೆಂಬಲದೊಂದಿಗೆ ಜಾಮ್ ಆಗಿದ್ದ ಮುಂಭಾಗದ ಬಾಗಿಲು ಒಡೆದಿದ್ದಾರೆ. ಆದರೆ, ಅಷ್ಟರಲ್ಲಿ ಪ್ರಜಿತ್ ಮತ್ತು ರೀಶಾ ಸಜೀವ ದಹನವಾಗಿದ್ದಾರೆ.

ಸಂಚಾರ ನಿಯಮ ಉಲ್ಲಂಘನೆ ಬಾಕಿ ದಂಡ ಪಾವತಿ


ಫೆ.11ರವರೆಗೆ ಶೇ.50 ರಿಯಾಯಿತಿ

ಬೆಂಗಳೂರು, ಫೆ.2– ಸಂಚಾರ ನಿಯಮ ಉಲ್ಲಂಘನೆ ದಂಡದ ಬಾಕಿಯನ್ನು ಫೆ.11ರೊಳಗೆ ಪಾವತಿಸಿದವರಿಗೆ ಶೇ.50ರಷ್ಟು ರಿಯಾಯಿತಿ ಘೋಷಿಸಿ ರಾಜ್ಯ ಸರ್ಕಾರ ಗುರುವಾರ ಆದೇಶ ಹೊರಡಿಸಿದೆ. ರಾಜ್ಯಾದ್ಯಂತ ಪೊಲೀಸ್ ಇಲಾಖೆಯ ಸಂಚಾರಿ ಇ–ಚಲನ್‌ನಲ್ಲಿ ದಾಖಲಾಗಿರುವ ಬಾಕಿ ಪ್ರಕರಣಗಳ ದಂಡದ ಮೊತ್ತದಲ್ಲಿ ಶೇ.50ರಷ್ಟು ರಿಯಾಯಿತಿ ನೀಡಲಾಗಿದೆ. ಫೆ.11ರೊಳಗೆ ಇತ್ಯರ್ಥಗೊಳ್ಳುವ ಪ್ರಕರಣಗಳಿಗೆ ಮಾತ್ರ ಅನ್ವಯವಾಗಲಿದ್ದು, ಇದು ಒಂದು ಬಾರಿಯ ಕ್ರಮವಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ. ಹೈಕೋರ್ಟ್ ನ್ಯಾಯಾಧೀಶರೂ ಆದ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಬಿ.ವೀರಪ್ಪನವರ ಅಧ್ಯಕ್ಷತೆಯಲ್ಲಿ ಜ.27ರಂದು ನಡೆದ ಸಭೆಯ ಅಭಿಪ್ರಾಯದಂತೆ ದಂಡದ ಮೊತ್ತದಲ್ಲಿ ಶೇ.50 ರಿಯಾಯಿತಿ ನೀಡುವ ಸಂಬಂಧ ಅನುಮತಿ ಕೋರಿ ಸಾರಿಗೆ ಇಲಾಖೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು. ಫೆ.11ರಂದು ಲೋಕ್ ಅದಾಲತ್‌ನಲ್ಲಿ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ವಿಚಾರಣೆ ನಡೆಯಲಿದ್ದು, ಆ ದಿನದೊಳಗೆ ದಂಡ ಪಾವತಿಸಿದವರು ಶೇ.50ರಷ್ಟು ರಿಯಾಯಿತಿ ಪಡೆಯಬಹುದು. ಹೆಲ್ಮೆಟ್ ರಹಿತ ಚಾಲನೆ, ಸಿಗ್ನಲ್ ಜಂಪ್, ತ್ರಿಬಲ್ ರೈಡಿಂಗ್ ಇನ್ನಿತರ ನಿಯಮ ಉಲ್ಲಂಘನೆಯ ಬಾಕಿ ದಂಡದಲ್ಲಿ ಅರ್ಧದಷ್ಟು ಪಾವತಿಸಿ ನಿರಾಳರಾಗಲು ಇದು ಸಕಾಲವಾಗಿದೆ.

ಸ್ಥಾಯಿ ಸಮಿತಿಗಳ ಅಧ್ಯಕ್ಷರ ಚುನಾವಣೆ ದಿಢೀರ್ ಮುಂದೂಡಿಕೆ

ಮೈಸೂರು ಪಾಲಿಕೆಯಲ್ಲಿ ಕಾಂಗ್ರೆಸ್ ಸದಸ್ಯರಿಂದ ಪ್ರತಿಭಟನೆ

● ಆಯುಕ್ತರ ಕಚೇರಿಗೆ ಬೀಗ ಜಡಿದು ಆಕ್ರೋಶ ● ಮೇಯರ್ ಕಚೇರಿಗೂ ಬೀಗ ಹಾಕುವ ಯತ್ನ: ಪೊಲೀಸರೊಂದಿಗೆ ಮಾತಿನ ಚಕಮಕಿ ● ಮನಬಂದಂತೆ ಬಿಲ್‌ಗಳ ಪಾಸ್ ಮಾಡಿಕೊಳ್ಳುವ ಹುನ್ನಾರ: ಮೇಯರ್ ಸರ್ವಾಧಿಕಾರಿ ಧೋರಣೆ ಆರೋಪ





ಮೈಸೂರು,ಫೆ.2(ಎಂಟಿವೈ)–ಮೈಸೂರು ಮಹಾನಗರ ಪಾಲಿಕೆಯ ಸ್ಥಾಯಿ ಸಮಿತಿಗಳಿಗೆ ಅಧ್ಯಕ್ಷರ ಆಯ್ಕೆ ಚುನಾವಣೆಯನ್ನು ಏಕಾಏಕಿ ಮುಂದೂಡಿದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಸದಸ್ಯರು ಆಯುಕ್ತರ ಕಚೇರಿಗೆ ಬೀಗ ಜಡಿದು ಪ್ರತಿಭಟನೆ ನಡೆಸಿ, ಮೇಯರ್ ಹಾಗೂ ಪಾಲಿಕೆ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರು ಮಹಾನಗರ ಪಾಲಿಕೆಯ ಹಳೆ ಕೌನ್ಸಿಲ್ ಸಭಾಂಗಣದಲ್ಲಿ ಗುರುವಾರ ಪಾಲಿಕೆಯ ನಾಲ್ಕು ಸ್ಥಾಯಿ ಸಮಿತಿಗೆ ಅಧ್ಯಕ್ಷರ ಆಯ್ಕೆಗೆ ಚುನಾವಣೆ ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಕಾಂಗ್ರೆಸ್ ಹಾಗೂ ಜೆಡಿಎಸ್ ಸದಸ್ಯರು ಸಜ್ಜಾಗಿ ಬಂದಿದ್ದರು. ಚುನಾವಣಾ ಪ್ರಕ್ರಿಯೆ ನಡೆಸಲು ನಿಯೋಜಿಸಿದ್ದ ಅಧಿಕಾರಿಗಳು ಹಳೆ ಕೌನ್ಸಿಲ್ ಸಭಾಂಗಣದಲ್ಲಿ ಹಾಜರಿದ್ದರು. ಬೆಳಗ್ಗೆ 11 ಗಂಟೆಗೆ ಚುನಾವಣಾ ಪ್ರಕ್ರಿಯೆ ಆರಂಭವಾಗಬೇಕಿತ್ತು. ಆದರೆ, 11.45 ಆದರೂ ಮೇಯರ್ ಸಭಾಂಗಣಕ್ಕೆ ಆಗಮಿಸಲಿಲ್ಲ. ಈ ಮಧ್ಯೆ ಕೌನ್ಸಿಲ್ ಕಾರ್ಯದರ್ಶಿಗಳು ಸ್ಥಾಯಿ ಸಮಿತಿಗಳ ಅಧ್ಯಕ್ಷರ ಆಯ್ಕೆಗಾಗಿ ನಡೆಯಬೇಕಾಗಿದ್ದ ಚುನಾವಣೆಯನ್ನು ಅನಿವಾರ್ಯ ಕಾರಣಗಳಿಂದ ಮುಂದೂಡಿರುವುದಾಗಿ ಮೇಯರ್ ಲಿಖಿತವಾಗಿ ಸೂಚಿಸಿದ್ದಾರೆ ಎಂದು ಪ್ರಕಟಿಸಿದರು.

ಸದಸ್ಯರ ಆಕ್ಷೇಪ: ಅಧಿಕಾರಿಗಳು ಚುನಾವಣೆಯನ್ನು ಮುಂದೂಡಿರುವ ವಿಚಾರ ತಿಳಿಸುತ್ತಿದ್ದಂತೆ ಮಾಜಿ ಮೇಯರ್‌ಗಳಾದ ಅಯೂಬ್ ಖಾನ್, ಪುಷ್ಪಲತಾ ಜಗನ್ನಾಥ್, ಮಾಜಿ ಉಪಮೇಯರ್ ಶ್ರೀಧರ್, ಶಾಂತಕುಮಾರಿ, ಸದಸ್ಯರಾದ ಜೆ.ಗೋಪಿ, ಲೋಕೇಶ್ ಪಿಯಾ, ಬೇಗಂ ಪಲ್ಲವಿ ಹಾಗೂ ಇನ್ನಿತರರು ಸಭೆಗೆ ಮೇಯರ್ ಹಾಗೂ ಪಾಲಿಕೆ ಆಯುಕ್ತರನ್ನು ಕರೆಸುವಂತೆ ಬಿಗಿಪಟ್ಟು ಹಿಡಿದರು. ಅಲ್ಲದೆ, ನಿಯಮದಲ್ಲಿ ಅಧ್ಯಕ್ಷರ ಆಯ್ಕೆ ಚುನಾವಣೆಯನ್ನು ದಿಢೀರ್ ಮುಂದೂಡಲು ಅವಕಾಶ ಇದೆಯೇ ಎಂದು ದೃಢಪಡಿಸಬೇಕು ಎಂದು ಆಗ್ರಹಿಸಿದರು. ಆದರೆ, ಅಧಿಕಾರಿಗಳು ಮಾತ್ರ ಮೇಯರ್ ಹಾಗೂ ಆಯುಕ್ತರಿಂದ ಸ್ಪಷ್ಟನೆ ಪಡೆಯಲು ನಮಗೆ ಅಧಿಕಾರವಿಲ್ಲ ಎಂದು ಹೇಳುತ್ತಾ ಸುಮ್ಮನಾದರು. ಕೆಲಕಾಲ ವ್ಯವಸ್ಥೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ನಂತರ ಪ್ರತಿಭಟನೆ ನಡೆಸಲು ನಿರ್ಧರಿಸಿದರು.

ಬೀಗ ಹಾಕಲು ನಿರ್ಧಾರ: ಹಳೆ ಕೌನ್ಸಿಲ್ ಸಭಾಂಗಣದಿಂದ ಧಿಕ್ಕಾರ ಕೂಗುತ್ತಾ ಹೊರ ಬಂದ ಕಾಂಗ್ರೆಸ್ ಸದಸ್ಯರು, ಮೈಸೂರು ಮಹಾನಗರ ಪಾಲಿಕೆಯಲ್ಲಿ ಮೇಯರ್ ಹಾಗೂ ಆಯುಕ್ತರು ಇದ್ದೂ ಇಲ್ಲದಂತಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ಕಚೇರಿಗೆ ಬೀಗ ಹಾಕಿ ಪ್ರತಿಭಟನೆ ನಡೆಸುತ್ತೇವೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಹಳೆ ಕೌನ್ಸಿಲ್ ಸಭಾಂಗಣ ಹಾಗೂ ಆಯುಕ್ತರ ಕೊಠಡಿಗೆ ಬೀಗ ಹಾಕಿ, ಪ್ರತಿಭಟಿಸಿದರು.

ಪೊಲೀಸರೊಂದಿಗೆ ಮಾತಿನ ಚಕಮಕಿ: ಮೇಯರ್ ಕಚೇರಿ ಹಾಗೂ ಪಾಲಿಕೆ ಕಚೇರಿ ಕೊಠಡಿಗೆ ಬೀಗ ಹಾಕುವ ವೇಳೆ ಪೊಲೀಸರು ಅಡ್ಡಿ ಪಡಿಸಿದರು. ಸಾರ್ವಜನಿಕ ಕಚೇರಿಗೆ ಬೀಗ ಹಾಕಲು ಅವಕಾಶವಿಲ್ಲ. ಯಾವುದೇ ಕಾರಣಕ್ಕೂ ಬೀಗ ಹಾಕಲು ಬಿಡುವುದಿಲ್ಲ ಎಂದು ತಡೆಯೊಡ್ಡಿದರು. ಈ ವೇಳೆ ಪಾಲಿಕೆ ಸದಸ್ಯರು ಪೊಲೀಸರೊಂದಿಗೂ ವಾಗ್ವಾದಕ್ಕಿಳಿದರು. ಆದರೂ ಪೊಲೀಸರು ಕಾನೂನು ಕ್ರಮ ಜರುಗಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಇದರಿಂದ ಕೆಲಕಾಲ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು. ಅಂತಿಮವಾಗಿ ಬೀಗ ಹಾಕುವ ನಿರ್ಧಾರದಿಂದ ಹಿಂದೆ ಸರಿದು, ಮೇಯರ್ ಕೊಠಡಿ ಮುಂದೆ ▶ 9ನೇ ಪುಟಕ್ಕೆ

ಮುಂದಿನ 5 ವರ್ಷದಲ್ಲಿ ಕೆ.ಆರ್.ಕ್ಷೇತ್ರ ಸಕ್ಕರೆ ಖಾಯಿಲೆಯಿಂದ ಮುಕ್ತ

● ಶಾಸಕ ಎಸ್.ಎ.ರಾಮದಾಸ್ ಭರವಸೆ ● ಇದಕ್ಕಾಗಿ ಆರೋಗ್ಯ ಇಲಾಖೆ ಮೂಲಕ ವಿಶೇಷ ಕಾರ್ಯಕ್ರಮ ● ಜನರ ಮನೆ ಬಾಗಿಲಲ್ಲೇ ಸಮಸ್ಯೆ ನಿವಾರಿಸುವ ಸಲುವಾಗಿ ಅದಾಲತ್



ಮೈಸೂರು,ಫೆ.2(ಎಂಟಿವೈ)–ಮೈಸೂರಿನ ಕೆ.ಆರ್. ಕ್ಷೇತ್ರವನ್ನು ಮುಂದಿನ ಐದು ವರ್ಷದಲ್ಲಿ ಸಕ್ಕರೆ ಖಾಯಿಲೆ ಮುಕ್ತ ಕ್ಷೇತ್ರವಾಗಿ ಪರಿವರ್ತಿಸಲು ಪಣ ತೊಟ್ಟಿದ್ದು, ಅದಕ್ಕಾಗಿ ಆರೋಗ್ಯ ಇಲಾಖೆಯೊಂದಿಗೆ ವಿವಿಧ ಕಾರ್ಯಕ್ರಮ ರೂಪಿಸಲಾಗಿದೆ ಎಂದು ಶಾಸಕ ಎಸ್.ಎ.ರಾಮದಾಸ್ ತಿಳಿಸಿದ್ದಾರೆ.

ಮೈಸೂರಿನ ಜನತಾನಗರದ ಕನಕಭವನದಲ್ಲಿ ಗುರುವಾರ ಆಯೋಜಿಸಿದ್ದ ಕೆ.ಆರ್.ಕ್ಷೇತ್ರದ ವಾರ್ಡ್ ನಂ.43ರ ಫಲಾನುಭವಿಗಳಿಗೆ ಸವಲತ್ತು ವಿತರಣೆ ಅದಾಲತ್ ಹಾಗೂ ಮಧುಮೇಹ, ಕಣ್ಣಿನ ಉಚಿತ ತಪಾಸಣಾ ಶಿಬಿರದಲ್ಲಿ ಮಾತನಾಡಿದ ಅವರು, ಮೈಸೂರಿನ ಕೆ.ಆರ್.ಕ್ಷೇತ್ರದಲ್ಲಿ 70 ಸಾವಿರ ಮನೆಗಳಿದ್ದು, ಇಲ್ಲಿರುವ 60 ಸಾವಿರಕ್ಕೂ ಹೆಚ್ಚು ಮಂದಿಗೆ ಸಕ್ಕರೆ ಖಾಯಿಲೆ ಇರುವುದು ಈಗಾಗಲೇ ಆಶಾ ಕಾರ್ಯಕರ್ತೆಯರು ಹಾಗೂ ಆರೋಗ್ಯ ಇಲಾಖೆ ಸಿಬ್ಬಂದಿ ನಡೆಸಿದ ಸಮೀಕ್ಷೆಯಲ್ಲಿ ತಿಳಿದು ಬಂದಿದೆ. ಇದು ಆಘಾತಕಾರಿ ಬೆಳವಣಿಗೆಯಾಗಿದ್ದರೂ, ಸೂಕ್ತ ಚಿಕಿತ್ಸೆ ಪಡೆದುಕೊಂಡರೆ ಆರೋಗ್ಯ ಕಾಪಾಡಿಕೊಳ್ಳಬಹುದಾಗಿದೆ ಎಂದರು.

ಕೆ.ಆರ್.ಕ್ಷೇತ್ರದ ಜನರ ಆರೋಗ್ಯ ಕಾಪಾಡಲು ಅಗತ್ಯ ಕ್ರಮ ಕೈಗೊಳ್ಳಲಾಗಿದ್ದು, ಮುಂದಿನ ಐದು ವರ್ಷದಲ್ಲಿ ಕ್ಷೇತ್ರವನ್ನು ಮಧುಮೇಹ ಮುಕ್ತ ಕ್ಷೇತ್ರವಾಗಿ ಮಾರ್ಪಡಿಸಲು ಕ್ರಮ ಕೈಗೊಳ್ಳಲಾಗಿದೆ. ಈಗಾಗಲೇ ಸಕ್ಕರೆ ಖಾಯಿಲೆ ರೋಗಿಗಳ ಮಾಹಿತಿ ಪಡೆದಿದ್ದು, ಅವರಿಗೆ ಸೂಕ್ತ ಚಿಕಿತ್ಸೆ ನೀಡಲಾಗುತ್ತಿದೆ. ಅಲ್ಲದೆ, ಆಯುಷ್ ಇಲಾಖೆಯಿಂದ ರೋಗ ನಿರೋಧಕ ಶಕ್ತಿ ಹೆಚ್ಚಿಸುವ ಬೂಸ್ಟರ್ ಕಿಟ್ ವಿತರಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಆರೋಗ್ಯ ಕಾಪಾಡಲು ಇನ್ನಷ್ಟು ಕಾರ್ಯಕ್ರಮ ರೂಪಿಸಲಾಗುತ್ತದೆ.

ಜನರು ಆರೋಗ್ಯ ಕಾಪಾಡಿಕೊಳ್ಳಲು ಮುಂದಾಗಬೇಕು. ದೈನಂದಿನ ಜೀವನದ ಒತ್ತಡದಿಂದಾಗಿ ಜನ ಸಕ್ಕರೆ ಖಾಯಿಲೆಗೆ ತುತ್ತಾಗುತ್ತಿರುವುದಾಗಿ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಹಾಗಾಗಿ ಒತ್ತಡದಿಂದ ಹೊರಬರಬೇಕು. ಜೀವನಶೈಲಿಯಲ್ಲಿ ಮಾರ್ಪಾಡು ಮಾಡಿಕೊಳ್ಳಬೇಕು. ಆರೋಗ್ಯವಂತರಾಗಬೇಕು ಎಂದು ಶಾಸಕ ರಾಮದಾಸ್ ಸಲಹೆ ನೀಡಿದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಬಡವರು ಹಾಗೂ ಮಧ್ಯಮ ವರ್ಗದವರಿಗೆಂದೇ ಹಲವು ಯೋಜನೆಗಳನ್ನು ಜಾರಿಗೆ ತಂದಿದ್ದು, ಅವುಗಳ ಸದುಪಯೋಗಪಡಿಸಿಕೊಳ್ಳಬೇಕು. ಜನರು ಸರ್ಕಾರಿ ಕಚೇರಿಗೆ ಹೋಗಿ ನ್ಯಾಯಬದ್ಧವಾಗಿ ಸಿಗಬೇಕಾದ ಸವಲತ್ತುಗಳನ್ನು ಕೇಳಿ ಪಡೆಯಲು ಹಿಂದೇಟು ಹಾಕುತ್ತಾರೆ. ಸಾಕಷ್ಟು ಮಂದಿ ಮುಜುಗರಕ್ಕೆ ಒಳಗಾಗುತ್ತಾರೆ. ಅದಕ್ಕಾಗಿ ಕೆ.ಆರ್.ಕ್ಷೇತ್ರದ ವಿವಿಧೆಡೆ ಅದಾಲತ್ ಮೂಲಕ ಸರ್ಕಾರಿ ವ್ಯವಸ್ಥೆಯೇ ಜನರ ಮುಂದೆ ಬರುವಂತೆ ಮಾಡಿ, ಅಗತ್ಯ ಸೌಲಭ್ಯ ನೀಡಲಾಗುತ್ತಿದೆ. ನಾಗರಿಕ ಸೌಲಭ್ಯಗಳಲ್ಲಿ ಕಂಡುಬರುವ ಸಮಸ್ಯೆಗಳನ್ನು ಪರಿಹರಿಸಲು ಈ ಕಾರ್ಯಕ್ರಮ ರೂಪಿಸಲಾಗಿದೆ ಎಂದರು.

ಕ್ಷೇತ್ರದ ಅರ್ಹ ಫಲಾನುಭವಿಗಳಿಗೆ ಸರ್ಕಾರಿ ಸವಲತ್ತುಗಳ ಕಲ್ಪಿಸಲು ಅದಾಲತ್ ನಡೆಸಲಾಗುತ್ತಿದೆ. ಸಮಸ್ಯೆಗೆ ಪರಿಹಾರ ಕೇಳಿಕೊಂಡು ನೀವು ಸರ್ಕಾರಿ ಕಚೇರಿಗೆ ಹೋಗುವ ಬದಲಾಗಿ ಸಮಸ್ಯೆ ಬಗೆಹರಿಸಲು ಸರ್ಕಾರಿ ಕಚೇರಿಗಳೇ ನಿಮ್ಮ ಮನೆ ಬಾಗಿಲಿಗೆ ಬಂದಿವೆ. ಇದರ ಸದುಪಯೋಗ ಆಗಬೇಕು. ಇಡೀ ಕ್ಷೇತ್ರ ವ್ಯಾಪ್ತಿಯಲ್ಲಿ ಅದಾಲತ್ ರೂಪಿಸಿದ್ದು, ನೀರು, ಒಳಚರಂಡಿ, ಅರಣ್ಯ, ರಸ್ತೆ, ಆರೋಗ್ಯ, ವಿದ್ಯುತ್, ಶಿಕ್ಷಣ, ಕಾರ್ಮಿಕರು ಸೇರಿದಂತೆ 20 ಇಲಾಖೆಗಳ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಸಂಬಂಧಿಸಿದ ಇಲಾಖೆಗಳ ಮುಖ್ಯಸ್ಥರು ಹಾಗೂ ಸಿಬ್ಬಂದಿಯನ್ನು ಯೋಜನೆಯಲ್ಲಿ ಜೋಡಿಸಿಕೊಂಡು ಪರಿಹಾರ ಕಲ್ಪಿಸುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ ಎಂದರು.

ಈ ಮಾದರಿಯ ಕಾರ್ಯಕ್ರಮವನ್ನು ಕ್ಷೇತ್ರದಾದ್ಯಂತ 19 ದಿನಗಳ ಕಾಲ ಆಯೋಜಿಸಲಾಗಿದೆ. ಎಲ್ಲಾ ಬಗೆಯ ಸವಲತ್ತುಗಳನ್ನು ಒಂದೇ ಸೂರಿನಡಿ ಕಲ್ಪಿಸಲಾಗಿದ್ದು, ಸಾರ್ವಜನಿಕರು ಕಾರ್ಯಕ್ರಮದ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಶಾಸಕ ಎಸ್.ಎ.ರಾಮದಾಸ್ ಮನವಿ ಮಾಡಿದರು.

ಫೆ.14, ಉದ್ಯೋಗ ಮೇಳ

ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಕಲ್ಪಿಸಲು ಫೆ.14ರಂದು ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ. ಈ ಮೇಳದಲ್ಲಿ 150ಕ್ಕೂ ಹೆಚ್ಚು ಪ್ರತಿಷ್ಠಿತ ಕಂಪನಿಗಳು ಪಾಲ್ಗೊಳ್ಳುತ್ತಿವೆ. ಆ ಮೇಳದಲ್ಲಿ ಯುವಕ–ಯುವತಿಯರು, ನಿರುದ್ಯೋಗಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಿದರು.

ಫೆ.5ರಿಂದ ದ್ವಾದಶ ಜ್ಯೋತಿರ್ಲಿಂಗಗಳ ಪುಣ್ಯದರ್ಶನ



ಮೈಸೂರು, ಫೆ.2– ನಗರದ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ವತಿಯಿಂದ ಫೆ.5ರಿಂದ 12ರವರೆಗೆ ರಾಮಕೃಷ್ಣನಗರದ 'ಐ' ಬ್ಲಾಕ್‌ನ ಚದುರಂಗ ರಸ್ತೆ, ಸುಮಿತ್ರ ಸ್ಟೀಲ್ ಖಾಲಿ ನಿವೇಶನದ ಎದುರು ಮಹಾ ಶಿವರಾತ್ರಿಯ ಪ್ರಯುಕ್ತ ದ್ವಾದಶ ಜ್ಯೋತಿರ್ಲಿಂಗಗಳ ಪುಣ್ಯದರ್ಶನವನ್ನು ಏರ್ಪಡಿಸಲಾಗಿದೆ.

ಕಾರ್ಯಕ್ರಮವನ್ನು ಶಾಸಕ ಎಲ್.ನಾಗೇಂದ್ರ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಮುಡಾ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್, ಉಪ ಮೇಯರ್ ಜಿ.ರೂಪ, ಮೈಸೂರು ವಿಮಾನ ನಿಲ್ದಾಣದ ನಿರ್ದೇಶಕ ಆರ್.ಮಂಜುನಾಥ್ ಪಾಲ್ಗೊಳ್ಳಲಿದ್ದಾರೆ. ಅತಿಥಿಗಳಾಗಿ ಡಯಟ್ ಪ್ರಾಂಶುಪಾಲ ಸಿ.ಆರ್.ನಾಗರಾಜಯ್ಯ ಹಾಗೂ ಅಪೋಲೊ ಆಸ್ಪತ್ರೆಯ ಪ್ಲಾಸ್ಟಿಕ್ ಸರ್ಜನ್ ಡಾ.ನಾರಾಯಣ ಹೆಗಡೆ ಆಗಮಿಸಲಿದ್ದು, ಜಪದಕಟ್ಟೆ ಮಠದ ಡಾ.ಮುಮ್ಮಡಿ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಆಶೀರ್ವಚನ ನೀಡಲಿದ್ದಾರೆ. ಮೈಸೂರು ಈ.ವಿ.ವಿ. ಮುಖ್ಯ ಸಂಚಾಲಕಿ ರಾಜಯೋಗಿನಿ ಬಿಕೆ ಲಕ್ಷ್ಮೀಜಿಯವರು ಸಾನ್ನಿಧ್ಯ ವಹಿಸಲಿದ್ದಾರೆ. ಫೆ.5ರಂದು ಬೆಳಿಗ್ಗೆ 9 ಗಂಟೆಗೆ ರಾಮಕೃಷ್ಣನಗರದ 'ಐ' ಬ್ಲಾಕ್‌ನ ಪ್ರಮುಖ ರಸ್ತೆಗಳಲ್ಲಿ ಶಾಂತಿಯ ಶೋಭಾಯಾತ್ರೆ ನಡೆಯಲಿದೆ. ಫೆ.5ರಿಂದ 12ರವರೆಗೆ ಪ್ರತಿದಿನ ಸಂಜೆ 6.30ರಿಂದ 7ರವರೆಗೆ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಲಾಗಿದ್ದು, ಫೆ.6ರಂದು ಬಿಕೆ ಶಿವಲೀಲಕ್ಕನವರಿಂದ 'ಮನೋ ನಿಯಂತ್ರಣಕ್ಕಾಗಿ ಆತ್ಮಜ್ಞಾನ', ಫೆ.7ರಂದು ಬಿಕೆ ಮಂಜುಳಕ್ಕನವರಿಂದ 'ಪರಮಾತ್ಮ ದರ್ಶನ', ಫೆ.8ರಂದು ಬಿಕೆ ಸಂಧ್ಯಕ್ಕನವರಿಂದ 'ಸೃಷ್ಟಿಯ ಆದಿ–ಮಧ್ಯ–ಅಂತ್ಯದ ರಹಸ್ಯ', ಫೆ.9ರಂದು ಬಿಕೆ ರಶ್ಮಿ ಅಕ್ಕನವರಿಂದ 'ಪುನರ್ಜನ್ಮದ ವೃತ್ತಾಂತ', ಫೆ.10ರಂದು ಬಿಕೆ ಯೋಗೇಶ್ವರಿ ಅಕ್ಕನವರಿಂದ 'ರಾಜಯೋಗ ಧ್ಯಾನದ ಮೂಲಕ ಅಷ್ಟ ಶಕ್ತಿಗಳು' ಹಾಗೂ ಫೆ.11ರಂದು ಬಿಕೆ ವಾಣಿಯಕ್ಕನವರಿಂದ 'ಈಶ್ವರೀಯ ವಿಶ್ವವಿದ್ಯಾಲಯವು ನಡೆದು ಬಂದ ದಾರಿ' ಎಂಬ ವಿಷಯಗಳ ಕುರಿತು ಪ್ರವಚನ ನೀಡಲಿದ್ದಾರೆ ಎಂದು ಬಿಕೆ ನರಸಿಂಹ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮಾಹಿತಿಗೆ ಮೊ: 9113871631 ಸಂಪರ್ಕಿಸುವುದು.

ಎಸ್‌ವಿವೈಎಂನಲ್ಲಿ ನಾಳೆ, ನಾಡಿದ್ದು 2ನೇ ಹಂತದ ಅನ್ವೇಷಣೆ–2023ರ ಸ್ಪರ್ಧಾ ಶಿಬಿರ



ಮೈಸೂರು,ಫೆ.2(ಪಿಎಂ)–ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ (ಎಸ್‌ವಿವೈಎಂ) ವತಿಯಿಂದ ರಾಜ್ಯದ ಸರ್ಕಾರಿ ಶಾಲೆಗಳ 10ನೇ ತರಗತಿ ವಿದ್ಯಾರ್ಥಿಗಳಿಗೆ ಫೆ.4 ಮತ್ತು 5ರಂದು 'ಅನ್ವೇಷಣೆ–2023' ಶೀರ್ಷಿಕೆಯಡಿ ಎರಡನೇ ಹಂತದಲ್ಲಿ ವಿವಿಧ ಸ್ಪರ್ಧೆಗಳ ವಸತಿ ಶಿಬಿರ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಶಿಕ್ಷಣ ಕೇಂದ್ರದ ಮುಖ್ಯಸ್ಥ ಎಸ್.ಪ್ರವೀಣ್‌ಕುಮಾರ್ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಎರಡು ಹಂತದ ಪ್ರತಿಭಾನ್ವೇಷಣೆಯೇ 'ಅನ್ವೇಷಣೆ–2023' ಕಾರ್ಯಕ್ರಮ. ಮೊದಲ ಹಂತದಲ್ಲಿ ಗಣಿತ ಮತ್ತು ವಿಜ್ಞಾನ ವಿಷಯಕ್ಕೆ ಸಂಬಂಧಿಸಿದ ಬಹು ಆಯ್ಕೆ ಪ್ರಶ್ನೆಗಳ ಸ್ಪರ್ಧೆಯನ್ನು ಆನ್‌ಲೈನ್ ಮೂಲಕ ಜ.22ರಂದು ನಡೆಸಲಾಯಿತು. ಇದರಲ್ಲಿ ರಾಜ್ಯ 27 ಜಿಲ್ಲೆಗಳಿಂದ ನೋಂದಾಯಿಸಿದ್ದ 3 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳಲ್ಲಿ 2,095 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು ಎಂದರು.

ಇದರಲ್ಲಿ ವಿದ್ಯಾರ್ಥಿಗಳು ಗಳಿಸಿದ ಅಂಕಗಳ ಆಧಾರದಲ್ಲಿ 126 ವಿದ್ಯಾರ್ಥಿಗಳನ್ನು 2ನೇ ಹಂತದಲ್ಲಿ ನಡೆಯುವ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲು ಆಯ್ಕೆ ಮಾಡಲಾಗಿದೆ. ಈ ಪೈಕಿ 47 ವಿದ್ಯಾರ್ಥಿಗಳು ಹಾಗೂ 79 ವಿದ್ಯಾರ್ಥಿನಿಯರಾಗಿದ್ದಾರೆ. ಮೈಸೂರಿನ ಹೆಬ್ಬಾಳು ಕೆಐಎಡಿಬಿ ಕೈಗಾರಿಕಾ ವಸತಿ ಪ್ರದೇಶದಲ್ಲಿರುವ ಎಸ್‌ವಿವೈಎಂ ಆವರಣದಲ್ಲಿ ವಸತಿ ಶಿಬಿರ ನಡೆಯಲಿದೆ ಎಂದರು. ಈ ವಸತಿ ಶಿಬಿರದಲ್ಲಿ ವಿಜ್ಞಾನಿಗಳೊಂದಿಗೆ ಸಂವಾದ, ವಿನೂತನ ರೀತಿಯ ನಿಧಿ ಶೋಧ, ವಿಜ್ಞಾನ ಸ್ಪರ್ಧೆಗಳು ಹಾಗೂ ಗಣಿತ ವಿಷಯದಲ್ಲಿ ಪ್ರಾಯೋಗಿಕ ಪರೀಕ್ಷೆಗಳು ನಡೆಯಲಿವೆ. ಎರಡು ದಿನಗಳ ಶಿಬಿರದಲ್ಲಿ ನಡೆಯುವ ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸುವ ಮಕ್ಕಳ ಸಮಗ್ರ ಮೌಲ್ಯಮಾಪನ ಮಾಡುವ ಮೂಲಕ ಉತ್ತಮ ಪ್ರದರ್ಶನ ನೀಡಿದ 5 ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕಾಗಿ 20 ಸಾವಿರ ರೂ. ನಗದನ್ನು (2 ವರ್ಷಗಳ ಸ್ಥಿರ ಠೇವಣಿ) ಪ್ರತಿಭಾ ಪುರಸ್ಕಾರವಾಗಿ ನೀಡಲಾಗುವುದು ಎಂದರು. ಫೆ.4ರಂದು ಬೆಳಗ್ಗೆ 11ಕ್ಕೆ ನಿವೃತ್ತ ಐಎಎಸ್ ಅಧಿಕಾರಿ ಮತ್ತು ಎನ್‌ಇಪಿ–2020ರ ಅನುಷ್ಠಾನ ಕಾರ್ಯಪಡೆ ಅಧ್ಯಕ್ಷ ಎಂ.ಮದನ್ ಗೋಪಾಲ್ 2ನೇ ಹಂತದ ಅನ್ವೇಷಣೆ–2023ರ ಸ್ಪರ್ಧೆಗಳಿಗೆ ಚಾಲನೆ ನೀಡಲಿದ್ದು, ಎಸ್‌ವಿವೈಎಂನ ಉತ್ತರ ಕರ್ನಾಟಕ ಪ್ರಾದೇಶಿಕ ಮುಖ್ಯಸ್ಥ ಕೆ.ಎಸ್.ಜಯಂತ್ ಅಧ್ಯಕ್ಷತೆ ವಹಿಸಲಿದ್ದಾರೆ. ಫೆ.5ರಂದು ಸಂಜೆ 4ಕ್ಕೆ ಸಮಾರೋಪ ಸಮಾರಂಭ ಹಮ್ಮಿಕೊಂಡಿದ್ದು, ಅತಿಥಿಯಾಗಿ ಭಾರತ ಸರ್ಕಾರದ ವಿಜ್ಞಾನ್ ಪ್ರಸಾರ್ ನಿರ್ದೇಶಕ ಡಾ.ನಕುಲ್ ಪರಾಶರ್ ಭಾಗವಹಿಸಲಿದ್ದಾರೆ. ಎಸ್.ಸವಿತಾ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು. ಎಸ್‌ವಿವೈಎಂನ ಶಾಲಾ ಶಿಕ್ಷಣ ಕಾರ್ಯಕ್ರಮ ನಿರ್ದೇಶಕ ಅವಿತ್ ಆನಂದ್‌ರಾಜು ಗೋಷ್ಠಿಯಲ್ಲಿದ್ದರು.

ನಿಧನ

ಬಾಲರಾಜ್



ಮೈಸೂರು,ಫೆ.2–ಮೈಸೂರಿನ ಬನ್ನಿಮಂಟಪ ಹುಡ್ಕೋ ಬಡಾವಣೆ ನಿವಾಸಿ ಹಾಗೂ ರಾಮನಗರ ರೇಷ್ಮೆ ಇಲಾಖೆಯ ನಿವೃತ್ತ ನೌಕರ ಬಾಲರಾಜ್ (64) ಬುಧವಾರ ನಿಧನರಾದರು.

ಮೃತರು ಪತ್ನಿ ಮೇರಿ ಕ್ರಿಸ್ಟಿನಾ, ಪುತ್ರಿ ಆಶಾ ಮಾರ್ಗರೇಟ್, ಪುತ್ರ ಪೀಟರ್ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗಾಂಧಿನಗರದ ಮಹದೇವಪುರ ರಸ್ತೆಯಲ್ಲಿರುವ ಕ್ಯಾಥೋಲಿಕ್ ಸಿಮೆಟ್ರಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಾ.ರಾಧಾ ನಂಜುಂಡಸ್ವಾಮಿ



ಮೈಸೂರಿನ ಕುವೆಂಪುನಗರದ ನಿವಾಸಿ ಲೇಟ್ ಎಂ.ಎಲ್. ನಂಜುಂಡಸ್ವಾಮಿ ಅವರ ಪತ್ನಿ ಹಾಗೂ ಮಕ್ಕಳ ತಜ್ಞರಾದ ಡಾ.ರಾಧಾ ನಂಜುಂಡಸ್ವಾಮಿ (89) ಬುಧವಾರ ನಿಧನರಾದರು.

ಮೃತರು ಪುತ್ರಿ ಮಾಯಾ ನಂಜುಂಡಸ್ವಾಮಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಾ. ಎಂ. ರಾಜಾರಾಮ್ ಶಾಸ್ತ್ರಿ



ರೋಟರಿ ಮೈಸೂರು ಮಿಡ್‌ಟೌನ್ ಮಾಜಿ ಅಧ್ಯಕ್ಷರು, ಜೆಎಲ್‌ಬಿ ರಸ್ತೆಯಲ್ಲಿರುವ ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್‌ನ ಸದಸ್ಯರು ಹಾಗೂ ಮೈಸೂರಿನ ಜಯಲಕ್ಷ್ಮಿಪುರಂ ನಿವಾಸಿ ಡಾ.ಎಂ. ರಾಜಾರಾಮ್ ಶಾಸ್ತ್ರಿ(94) ಜ.31ರಂದು ನಿಧನರಾದರು. ಇವರು ಭಾರತದ ಮಾಜಿ ಕ್ರಿಕೆಟ್ ತಾರೆ ರವಿಶಾಸ್ತ್ರಿಯವರ ಚಿಕ್ಕಪ್ಪ.

ಮೃತರು ಪತ್ನಿ ಉಷಾ, ಪುತ್ರಿ ನೈನಾ, ಅಳಿಯ ಹರಿಪ್ರಸಾದ್, ಮೊಮ್ಮಕ್ಕಳಾದ ಆಕಾಶ್ ಮತ್ತು ಮಾಯಾ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂನಲ್ಲಿರುವ ಚಿರಶಾಂತಿ ಧಾಮದಲ್ಲಿ ಗುರುವಾರ ನೆರವೇರಿತು.

ಮೊಹಮ್ಮದ್ ನಸೀರ್



ಮೈಸೂರಿನ ಬನ್ನಿಮಂಟಪ ಹುಡ್ಕೋ ನಿವಾಸಿ ಹಾಗೂ ಅಗರಬತ್ತಿ ತಯಾರಕ ಮೊಹಮ್ಮದ್ ನಸೀರ್ (65) ಸೋಮವಾರ ಬೆಳಗ್ಗೆ ಹೃದಯಾಘಾತದಿಂದ ನಿಧನರಾದರು. ಮೃತರು ಮೂವರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಈ ಸಂಬಂಧ ಜ.30ರಂದು ಸಂಜೆ 5.30ಕ್ಕೆ ಅಸರ್ ಪ್ರಾರ್ಥನೆಯ ನಂತರ ಬನ್ನಿಮಂಟಪದ ಟಿಪ್ಪು ಮಸೀದಿಯಲ್ಲಿ ನಮಾಜ್–ಎ–ಜನಾಜ಼ ನಡೆಯಿತು. ಬಳಿಕ ಮೈಸೂರಿನ ಟಿಪ್ಪು ಸರ್ಕಲ್‌ನಲ್ಲಿರುವ ಮುಸ್ಲಿಮರ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶತಾಯುಷಿ ಕರಗಮ್ಮ



ಮೈಸೂರು ತಾಲೂಕಿನ ಗುಂಗ್ರಾಲ್ ಛತ್ರದ ನಿವಾಸಿ ದಿವಂಗತ ದೊಡ್ಡ ಸಿದ್ದೇಗೌಡರ ಪತ್ನಿ ಕರಗಮ್ಮ(101) ಗುರುವಾರ ನಿಧನರಾಗಿದ್ದಾರೆ. ಮೃತರು ಮಕ್ಕಳು, ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಜ.3) ಮಧ್ಯಾಹ್ನ 1 ಗಂಟೆಗೆ ಗುಂಗ್ರಾಲ್ ಛತ್ರದಲ್ಲಿರುವ ತಮ್ಮ ತೋಟದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಿ.ಎಸ್.ರಾಜು



ಮೈಸೂರಿನ ವಿಜಯನಗರ 3ನೇ ಹಂತದ ನಿವಾಸಿ, ಲೋಕೋಪಯೋಗಿ ಇಲಾಖೆ ನಿವೃತ್ತ ಎಇಇ ಡಿ.ಎಸ್. ರಾಜು (94) ಅವರು ಫೆ.1ರಂದು ಮಧ್ಯಾಹ್ನ ನಿಧನರಾಗಿದ್ದಾರೆ. ಮೃತರು ಇಬ್ಬರು ಪುತ್ರರು ಹಾಗೂ ಅಪಾರ ಬಂಧು ವರ್ಗ ಅಗಲಿದ್ದು, ಅಂತ್ಯಕ್ರಿಯೆ ಫೆ.3ರಂದು ಮಧ್ಯಾಹ್ನ 12.30ಕ್ಕೆ ಗೋಕುಲಂನ ಚಿರಶಾಂತಿ ಧಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶರಣರ ಅನುಭವ ಮಂಟಪ ಪರಿಕಲ್ಪನೆಗೆ ಮತ್ತೆ ಜೀವ ತುಂಬುವ ಪ್ರಯತ್ನದಲ್ಲಿ ನಾಳೆ 'ಅನುಭವ ಮಂಟಪ ಅನುಭಾವ ಗೋಷ್ಠಿ'



ಮೈಸೂರು,ಫೆ.2(ಪಿಎಂ)–ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮೈಸೂರು ನಗರ ಘಟಕದ ವತಿಯಿಂದ ಬಸವಾದಿ ಶರಣರ ಅನುಭವ ಮಂಟಪದ ಪರಿಕಲ್ಪನೆಗೆ ಮತ್ತೆ ಜೀವ ತುಂಬುವ ಪ್ರಯತ್ನದಲ್ಲಿ ಫೆ.4ರಂದು 'ಅನುಭವ ಮಂಟಪ ಅನುಭಾವ ಗೋಷ್ಠಿ' ಎಂಬ ವಿನೂತನ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಈ ವಿನೂತನ ಕಾರ್ಯಕ್ರಮಕ್ಕೆ ಅಂದು ಬೆಳಗ್ಗೆ 10ಕ್ಕೆ ಆಧ್ಯಾತ್ಮ ಚಿಂತಕ ಶಂಕರ ದೇವನೂರು ಚಾಲನೆ ನೀಡಲಿದ್ದಾರೆ. 12ನೇ ಶತಮಾನದಲ್ಲಿ ಶರಣರು ನಡೆಸಿದ ಸಂವಾದದ ರೂಪದಲ್ಲಿ ವಿದ್ವಾಂಸರು ಮತ್ತು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಜೆಎಸ್‌ಎಸ್ ಮಹಿಳಾ ಪದವಿ ಕಾಲೇಜಿನ ಐಚ್ಛಿಕ ಕನ್ನಡ, ಇಂಗ್ಲಿಷ್ ಮತ್ತು ಸಂಸ್ಕೃತ ಭಾಷಾ ವಿದ್ಯಾರ್ಥಿಗಳು ಸಂವಾದದಲ್ಲಿ ಪಾಲ್ಗೊಂಡು ವಿದ್ವಾಂಸರ ಮುಂದೆ ತಮ್ಮ ಪ್ರಶ್ನೆಗಳನ್ನು ಇಡಲಿದ್ದಾರೆ. ಹಿರಿಯ ಸಾಹಿತಿ ಪ್ರೊ.ಓ.ಎಲ್.ನಾಗಭೂಷಣ ಸ್ವಾಮಿ, ಮುಕ್ತ ವಿವಿ ಪ್ರಾಧ್ಯಾಪಕರಾದ ಡಾ.ಕವಿತಾ ರೈ, ಡಾ.ಜ್ಯೋತಿ ಶಂಕರ್, ಮೈಸೂರು ವಿವಿ ಅತಿಥಿ ಉಪನ್ಯಾಸಕ ದಿಲೀಪ್ ಕುಮಾರ್ ಮೊದಲಾದ ವಿದ್ವಾಂಸರು ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಉತ್ತರಿಸಲಿದ್ದು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಪ್ರೊ.ಮಲೆಯೂರು ಗುರುಸ್ವಾಮಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು. ನಿವೃತ್ತ ಸಹ ಪ್ರಾಧ್ಯಾಪಕ ಪ್ರೊ.ಡಿ.ಎಸ್.ಸದಾಶಿವಮೂರ್ತಿ ಅವರು ತಮ್ಮ ಹಿರಿಯರ ಹೆಸರಿನಲ್ಲಿಟ್ಟಿರುವ ದತ್ತಿಯಡಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಇದು ಕನ್ನಡ ಸಾಹಿತ್ಯ ಚಿಂತನೆಯಲ್ಲಿ ಬಹು ಮುಖ್ಯ ಘಟ್ಟವಾದ ವಚನ ಯುಗವನ್ನು ಕುರಿತ ಸಂವಾದವೇ ಹೊರತು ಭಾಷಣಗಳ ಸರಣಿಯಲ್ಲ ಎಂದರು. ಕಾರ್ಯಕ್ರಮದ ದತ್ತಿದಾನಿ ಪ್ರೊ.ಡಿ.ಎಸ್. ಸದಾಶಿವಮೂರ್ತಿ, ಘಟಕದ ಕಾರ್ಯದರ್ಶಿ ಟಿ.ಎಸ್.ಕುಮಾರ ಸ್ವಾಮಿ, ಜೆಎಸ್‌ಎಸ್ ಮಹಿಳಾ ಪದವಿ ಕಾಲೇಜಿನ ಪ್ರಾಂಶುಪಾಲ ಡಾ.ಹೆಚ್.ಬಿ.ಸುರೇಶ್ ಸುದ್ದಿಗೋಷ್ಠಿಯಲ್ಲಿದ್ದರು.

ಉಚಿತ ಕಣ್ಣಿನ ತಪಾಸಣಾ ಶಿಬಿರ



ಮೈಸೂರು,ಫೆ.2–ಮೈಸೂರಿನ ವನಸಿರಿ ಗ್ರಾಮೀಣಾಭಿವೃದ್ಧಿ ಟ್ರಸ್ಟ್, ನಕ್ಷತ್ರ ಮಹಿಳಾ ಸೇವಾ ಸಂಸ್ಥೆ ಮತ್ತು ಎಎಸ್‌ಜಿ ಕಣ್ಣಿನ ಆಸ್ಪತ್ರೆಯ ಸಂಯುಕ್ತ ಆಶ್ರಯದಲ್ಲಿ ಶ್ರೀರಂಗಪಟ್ಟಣ ತಾಲೂಕಿನ ಚಿಕ್ಕಅಂಕನಹಳ್ಳಿಯಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ಮತ್ತು ಉಚಿತ ಕನ್ನಡಕ ವಿತರಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸುಮಾರು 100–125 ಮಂದಿ ಕಣ್ಣನ್ನು ಪರೀಕ್ಷಿಸಿಕೊಂಡರು. 50ಕ್ಕೂ ಮೇಲ್ಪಟ್ಟವರಿಗೆ ಕನ್ನಡಕ ನೀಡಲಾಯಿತು. ಚಿಕ್ಕಅಂಕನಹಳ್ಳಿ ಗ್ರಾಮದ ಅಧ್ಯಕ್ಷ ಪ್ರಭಾಕರ್, ಸದಸ್ಯರಾದ ಬಸವರಾಜು, ಸತೀಶ್, ಮಹೇಶ PDO, ಮತ್ತು ವಿಜಯಕುಮಾರ್, ವನಸಿರಿ ಟ್ರಸ್ಟಿನ ಸಂಸ್ಥಾಪಕ ಅಧ್ಯಕ್ಷ ಬಿ. ಮಲ್ಲೇಶ್ ಕೋಟೆ ಮತ್ತು ಎಎಸ್‌ಜಿ ಕಣ್ಣಿನ ಆಸ್ಪತ್ರೆಯ ಸಿಬ್ಬಂದಿಗಳಾದ ಶಿಲ್ಪ, ಪ್ರದೀಪ್ ಮತ್ತು ನಕ್ಷತ್ರ ಸಂಸ್ಥೆಯ ಅಧ್ಯಕ್ಷೆ ಶೀಲಾವತಿ ಭಾಗವಹಿಸಿದ್ದರು.

ಉಚಿತ ಕನ್ನಡಕ ವಿತರಣೆ

ಎಸ್‌ಸಿ-ಎಸ್‌ಟಿ ಸಂಶೋಧಕರಿಗೆ ಶಿಷ್ಯವೇತನ ನೀಡದೆ ನಿರ್ಲಕ್ಷ್ಯ ಧೋರಣೆ ಖಂಡಿಸಿ

2ನೇ ದಿನವೂ ಮುಂದುವರಿದ ಮೈವಿವಿ ಸಂಶೋಧಕರ ಪ್ರತಿಭಟನೆ




ಇಂದು ಕ್ರಾಫರ್ಡ್ ಹಾಲ್‌ಗೆ ಮುತ್ತಿಗೆ ಹಾಕಲು ನಿರ್ಧಾರ

ಮೈಸೂರು,ಫೆ.2(ಆರ್‌ಕೆಬಿ)– ಮೈಸೂರು ವಿಶ್ವ ವಿದ್ಯಾನಿಲಯದ ಎಸ್‌ಸಿ–ಎಸ್‌ಟಿ ಸಂಶೋಧಕರಿಗೆ ಸರ್ಕಾರದಿಂದ ಬಿಡುಗಡೆಯಾಗಿರುವ ಶಿಷ್ಯವೇತನವನ್ನು ನೀಡದೇ ಸಬೂಬು ಹೇಳುತ್ತಿರುವ ಮೈಸೂರು ವಿವಿ ಆಡಳಿತ ವರ್ಗದ ವಿರುದ್ಧ ಮೈಸೂರು ವಿವಿ ಸಂಶೋಧಕರ ಸಂಘ ನಡೆಸುತ್ತಿರುವ ಅನಿರ್ದಿಷ್ಟ ಅವಧಿಯ ಪ್ರತಿಭಟನೆ ಗುರುವಾರ ಎರಡನೇ ದಿನವೂ ಮುಂದುವರೆಯಿತು.

ಮಾನಸಗಂಗೋತ್ರಿ ಮುಖ್ಯ ದ್ವಾರದ ಬಳಿ ಕುವೆಂಪು ಪ್ರತಿಮೆ ಬಳಿ ಪ್ರತಿಭಟನೆ ನಡೆಸುತ್ತಿರುವ ಸಂಶೋಧಕರು, ವಿವಿಯ ಎಸ್‌ಸಿ–ಎಸ್‌ಟಿ ವಿರೋಧಿ ಧೋರಣೆಯನ್ನು ಖಂಡಿಸಿ, ಧಿಕ್ಕಾರದ ಘೋಷಣೆಗಳನ್ನು ಕೂಗಿದರು. ನಮ್ಮ ಪಾಲಿನ ಶಿಷ್ಯವೇತನದ ಹಣವನ್ನು ನಮಗೆ ನೀಡದೆ ವಂಚಿಸುತ್ತಿರುವ ಮೈಸೂರು ವಿವಿಯ ನಿರ್ಲಕ್ಷ್ಯವನ್ನು ಖಂಡಿಸಿದರು. ಶುಕ್ರವಾರ ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಹಾಲ್‌ಗೆ ಮುತ್ತಿಗೆ ಹಾಕಲು ನಿರ್ಧರಿಸಿರುವುದಾಗಿ ಮೈಸೂರು ವಿವಿ ಸಂಶೋಧಕರ ಸಂಘದ ಉಪಾಧ್ಯಕ್ಷ ಕುಮಾರ್ ಕಲ್ಲಳ್ಳಿ ತಿಳಿಸಿದರು.

ರಾಜ್ಯ ಸರ್ಕಾರವು 2022ರ ನವೆಂಬರ್ ತಿಂಗಳಲ್ಲಿ 2.57 ಕೋಟಿ ಹಣ ಬಿಡುಗಡೆ ಮಾಡಿದ್ದರೂ ವಿವಿ ವಿದ್ಯಾರ್ಥಿಗಳ ಖಾತೆಗೆ ಜಮಾ ಮಾಡದೆ ನಿರ್ಲಕ್ಷ್ಯ ಧೋರಣೆ ವಹಿಸಿದೆ. ಬೇರೆಲ್ಲಾ ವಿವಿಗಳು ಸರ್ಕಾರದ ಆದೇಶವನ್ನು ಪಾಲಿಸುತ್ತಿದ್ದರೆ, ಮೈಸೂರು ವಿವಿ ಆಡಳಿತ ಮಂಡಳಿ ಬೇರೆ ದಾರಿ ಹಿಡಿದಿದೆ. ಇದು ಎಸ್‌ಸಿ–ಎಸ್‌ಟಿ ವಿರೋಧಿ ಧೋರಣೆಯಾಗಿದೆ. ಕೇಳಿದರೆ ಈ ವಿಚಾರವನ್ನು ಸಿಂಡಿಕೇಟ್‌ನ ಮುಂದೆ ತರುವುದಾಗಿ ನೆಪ ಹೇಳುತ್ತಿದ್ದಾರೆ. ಈ ಹಣ ದುರ್ಬಳಕೆ ಆಗಿರಬಹುದೆಂಬ ಅನುಮಾನವೂ ಉಂಟಾಗಿದೆ. ಆದ್ದರಿಂದ ರಾಜ್ಯ ಸರ್ಕಾರ ಕೂಡಲೇ ಮಧ್ಯ ಪ್ರವೇಶಿಸಬೇಕು. ಸಂಶೋಧಕರಿಗೆಂದೇ ನೀಡಲಾಗಿರುವ ಶಿಷ್ಯವೇತನವನ್ನು ನೀಡದಿದ್ದರೆ, ಪ್ರತಿಭಟನೆ ಇನ್ನಷ್ಟು ತೀವ್ರಗೊಳಿಸಲಿದ್ದು, ಅದರ ಮೊದಲ ಹಂತವಾಗಿ ಶುಕ್ರವಾರ ಕ್ರಾಫರ್ಡ್ ಹಾಲ್‌ಗೆ ಮುತ್ತಿಗೆ ಹಾಕಲಾಗುವುದು ಎಂದು ಪ್ರತಿಭಟನಾಕಾರರು ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ಸಂಘದ ಅಧ್ಯಕ್ಷ ನಟರಾಜ್ ಶಿವಣ್ಣ, ಕಾರ್ಯದರ್ಶಿ ಜೆ.ಶಿವಮೂರ್ತಿ, ಲಿಂಗರಾಜು, ಶ್ರೀಶಂಕರ, ರಂಗನಾಥ್, ಕೆಂಪರಾಜು, ಮಹದೇವಸ್ವಾಮಿ, ರಂಗಮ್ಮ, ಪ್ರದೀಪ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

3.2.2023 ಶುಕ್ರವಾರ, ಮಳೆ ನಕ್ಷತ್ರ: ಶ್ರವಣ, 24.01.2023ರಿಂದ 05.02.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಮಾಘ ಮಾಸ, ಶುಕ್ಲ ಪಕ್ಷ,
ತಿಥಿ: ಚತುರ್ದಶಿ, ನಕ್ಷತ್ರ: ಪುನರ್ವಸು, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಧಾರ್ಮಿಕ ದತ್ತಿ ಇಲಾಖೆ** :ಶ್ರೀ ತ್ರಿಣೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ಬುಧವಾರ ಹಗಲು ರಾತ್ರಿ ಪೂಜೆ, ಬಲಿಪ್ರಧಾನ ಉತ್ಸವ, ಸ್ಥಳ: ಶ್ರೀ ತ್ರಿಣೇಶ್ವರಸ್ವಾಮಿ ದೇವಸ್ಥಾನ, ಮೈಸೂರು ಅರಮನೆ ಆವರಣ.

■ **ಮೈಸೂರು ವಿಶ್ವವಿದ್ಯಾನಿಲಯ ರಾಷ್ಟ್ರೀಯ ಸೇವಾ ಯೋಜನೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ** :ರಾಷ್ಟ್ರೀಯ ಏಕೀಕರಣ ಶಿಬಿರ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಹೆಚ್. ರಾಜಶೇಖರ್, ಉದ್ಘಾಟನೆ : ಎನ್‌ಎಸ್‌ಎಸ್ ಸೆಲ್ ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಪ್ರತಾಪ್ ಲಿಂಗಯ್ಯ, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಸಚಿವರಾದ ವಿ.ಆರ್. ಶೈಲಜಾ, ಸ್ಥಳ: ಎನ್‌ಎಸ್‌ಎಸ್ ಭವನ, ಸಾಹುಕಾರ್ ಚನ್ನಯ್ಯ ರಸ್ತೆ, ಸರಸ್ವತಿಪುರಂ, ಬೆಳಗ್ಗೆ 11ಕ್ಕೆ.

■ **ಸ್ನೇಹ ಸಿಂಧು ಟ್ರಸ್ಟ್** :ರೋಟರಿ ಭವನ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಸಂಸದ ಪ್ರತಾಪ್ ಸಿಂಹ, ಶಾಸಕ ಎಲ್. ನಾಗೇಂದ್ರ, ಅಧ್ಯಕ್ಷತೆ : ಮುಡಾ ಅಧ್ಯಕ್ಷ ಯಶಸ್ವಿ ಎಸ್. ಸೋಮಶೇಖರ್, ಮುಖ್ಯ ಅತಿಥಿಗಳು : ಪ್ರಕಾಶ್ ಕಾರಂತ್, ಕವಿತಾ ನಿಯತ್, ಹೆಚ್.ಆರ್. ಕೇಶವ್, ಉದ್ಯಮಿ ಜಗನ್ನಾಥ್ ಶೆಣೈ, ಮುಡಾ ಮಾಜಿ ಅಧ್ಯಕ್ಷ ಸಿ. ಬಸವೇಗೌಡ, ಪಾಲಿಕೆ ಸದಸ್ಯ ಕೆ.ವಿ. ಶ್ರೀಧರ್, ಡಾ. ವಿಮಲ ರಾಧಾಕೃಷ್ಣನ್, ಸ್ಥಳ: ಸಿಎ 08, ದಕ್ಷಿಣ ರೈಲ್ವೆ ಬಡಾವಣೆ, ಹೆಬ್ಬಾಳು, ವಿಜಯನಗರ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ** :ದೂರ ಶಿಕ್ಷಣಾರ್ಥಿಗಳ ವೃತ್ತಿ ಯೋಜನೆ ವಿಷಯ ಕುರಿತು ಪ್ಯಾನೆಲ್ ಡಿಸ್ಕಷನ್, ಭಾಗವಹಿಸುವವರು : ಶ್ರೀಮತಿ ಎಂ.ಎಸ್. ಸುಪ್ರಿಯಾ ಸಾಲಿಯಾನ್, ಎಸ್‌ಡಿಎಂ–ಐಎಂಡಿ ಪ್ರಾಧ್ಯಾಪಕ ಡಾ. ಎಸ್.ಎನ್. ಪ್ರಸಾದ್, ಡಾ. ಧರ್ಮಪ್ರಸಾದ್, ಶ್ರೀಮತಿ ಸವಿತಾ ಮಲ್ಲಪ್ಪ ಅಧ್ಯಕ್ಷತೆ : ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಸ್ಥಳ: ನಳ ಸಭಾಂಗಣ, ಕರಾಮುವಿವಿ, ಬೆಳಗ್ಗೆ 11ಕ್ಕೆ.

■ **ಅನ್ನಪೂರ್ಣ ಕಣ್ಣಿನ ಆಸ್ಪತ್ರೆ, ಜೆ.ಪಿ.ನಗರ** :ಉಚಿತ ಕಣ್ಣಿನ ಪೊರೆ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಜೆ.ಪಿ.ನಗರ ಮತ್ತು ಹೂಟಗಳ್ಳಿ, ಬೆಳಗ್ಗೆ 11 ರಿಂದ.

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು** :ವ್ಯಾಕರಣದ ಮೂಲಕ ಇಂಗ್ಲಿಷ್ ಮಾತನಾಡುವುದು ಕುರಿತು ಉಪನ್ಯಾಸ, ಸಂಪನ್ಮೂಲ ವ್ಯಕ್ತಿ : ಮಹಾರಾಣಿ ಮಹಿಳಾ ಕಾಲೇಜು ನಿವೃತ್ತ ಪ್ರಾಧ್ಯಾಪಕ ಡಾ. ಎಂ.ಎಸ್. ಪಾಲಾಕ್ಷ, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷ ಅಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಸ್ಥಳ: ಸೆಮಿನಾರ್ ಹಾಲ್, ಬೆಳಗ್ಗೆ 11ಕ್ಕೆ.

■ **ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ** :ಮಧ್ವ–ಪುರಂದರ ನಮನ, ಸಂಜೆ 5 ರಿಂದ ಭಜನೆ, ಸಂಜೆ 6 ರಿಂದ ಉದ್ಘಾಟನೆ ಮತ್ತು ಸನ್ಮಾನ, ಶ್ರೀ ಅನಂತಾಚಾರ್ಯ ಕಟಗೇರಿ ದಾಸರಿಗೆ ಸನ್ಮಾನ, ಸಂಜೆ 7 ರಿಂದ ಬೆಂಗಳೂರಿನ ಹುಸೇನ್ ಸಾಬ್ ಮತ್ತು ಸಂಗಡಿಗರಿಂದ ಹರಿನಾಮ ಸಂಕೀರ್ತನೆ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ.

■ **ಶ್ರೀ ಅವಧೂತ ದತ್ತಪೀಠ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ** : ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ 80ನೇ ವರ್ಷದ ಜನ್ಮದಿನೋತ್ಸವದ ಪ್ರಯುಕ್ತ ಸಹಸ್ರ ಚಂದ್ರ ದರ್ಶನ ಶಾಂತಿ ಹೋಮ, ಬೆಳಗ್ಗೆ 7ಕ್ಕೆ ಆಯುಷ್ಕಾಮೇಷ್ಟಿ, ಬೆಳಗ್ಗೆ 9ಕ್ಕೆ ಅಷ್ಟದ್ರವ್ಯ ಸಹಿತ ಸಹಸ್ರ ಮೋದಕ ಗಣಪತಿ ಹೋಮ, ಸಂಜೆ 4ಕ್ಕೆ ನಾರಾಯಣ ಹೋಮ, ಸಂಜೆ 7ಕ್ಕೆ ಪೂರ್ಣಾವತಿ ಸ್ಥಳ: ಆಶ್ರಮದ ಆವರಣ, ಊಟಿ ರಸ್ತೆ.

■ **ತಿರುಮಲ ತಿರುಪತಿ ದೇವಸ್ಥಾನಗಳು, ಹಿಂದೂ ಧರ್ಮ ಪ್ರಚಾರ ಪರಿಷತ್ ಹಾಗೂ ಶ್ರೀ ಗುರು ರಾಘವೇಂದ್ರ ಸೇವಾ ಸಮಿತಿ, ಟಿ ಕೆ ಬಡಾವಣೆ** : ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ 6 ಗಂಟೆಗೆ–ಶ್ರೀ ವಿಶ್ವೇಶಕೃಷ್ಣ ಭಜನಾ ಮಂಡಳಿಯ ಸದಸ್ಯರಿಂದ ಭಜನೆ, 7 ಗಂಟೆಗೆ ಶ್ರೀ ಶ್ರೀಪಾದರಾಜಾಚಾರ್ಯರಿಂದ "ಶ್ರೀ ರಾಘವೇಂದ್ರ ಗುರುಸಾರ್ವಭೌಮರ ಅವತಾರ" ಪ್ರವಚನ.

■ **ಮೈಸೂರು ಇಂಗ್ಲಿಷ್ ಥಿಯೇಟರ್ ಫೋರಂ** :ಕಾಲೇಜು ಇಂಗ್ಲಿಷ್ ನಾಟಕೋತ್ಸವ, ಉದ್ಘಾಟನೆ : ಹಿರಿಯ ರಂಗಕರ್ಮಿ ಪ್ರೊ. ರಾಮೇಶ್ವರಿ ಶರ್ಮ, ಗೌರವ ಅತಿಥಿಗಳು : ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಡಾ. ಬಿ. ಸದಾಶಿವೇಗೌಡ, ಪ್ರೊ. ಸಾಯಿನಾಥ್ ಮಲ್ಲಿಗೆಮಾಡು, ಪ್ರೊ. ಅನಿತಾ ವಿಮ್ಲಾ ಬ್ರ್ಯಾಗ್ಸ್, ಡಾ. ರವಿ ಜೆ.ಡಿ. ಸಾಲ್ಡಾನಾ, ಡಾ. ಹೆಚ್.ಎಂ. ರಾಕೇಶ್, ಡಾ. ಪ್ರಿಯಾ ಮಾಥ್ಯೂ, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಮಧ್ಯಾಹ್ನ 3ಕ್ಕೆ.

■ **ಬನಶಂಕರಿ ವಿದ್ಯಾಸಂಸ್ಥೆ** : ಶಾಲಾ ವಾರ್ಷಿಕೋತ್ಸವ, ಉದ್ಘಾಟನೆ : ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ, ಅಧ್ಯಕ್ಷತೆ : ವಿದ್ಯಾಸಂಸ್ಥೆ ಗೌರವಾಧ್ಯಕ್ಷ ಎ. ಗಂಗಾಧರ, ಸನ್ಮಾನಿತರು : ಪುರುಷೋತ್ತಮ, ಶ್ರೀಮತಿ ಎನ್.ಎ. ಮಲ್ಲೇಶ್ವರಿ, ಸಿ. ವೆಂಕಟಪ್ಪ, ಬಹುಮಾನ ವಿತರಣೆ : ಎಪಿಎಂಸಿ ಮಾಜಿ ಉಪಾಧ್ಯಕ್ಷ ಜವರಪ್ಪ, ಪಿಡಿಒ ಬಿ. ಬಸವರಾಜು, ಸ್ಥಳ: ಶಾಲಾ ಆವರಣ, ವಾಜಮಂಗಲ, ಸಂಜೆ 5ಕ್ಕೆ.

■ **ಶ್ರೀ ಚಿಕ್ಕಲಿಂಗೇಶ್ವರಸ್ವಾಮಿ ದೇವಸ್ಥಾನ** :ಶ್ರೀ ಮದ್ರಾಜಯೋಗಿ ಶ್ರೀ ಶ್ರೀ ಚಿಕ್ಕಲಿಂಗಣ್ಣಸ್ವಾಮಿಗಳವರ 86ನೇ ವರ್ಷದ ಆರಾಧನಾ ಮಹೋತ್ಸವ, ಸಂಜೆ 5.30 ರಿಂದ ವಿಷ್ಣು ಸಹಸ್ರನಾಮ ಪಾರಾಯಣ, ಸಂಜೆ 6.30 ರಿಂದ ವಿದುಷಿ ಡಾ. ಜ್ಯೋತಿಶಂಕರ್ ಅವರಿಂದ ಅಕ್ಕಮಹಾದೇವಿ ಚಿಂತನೆ ಕುರಿತು ಪ್ರವಚನ, ಸ್ಥಳ: ಶ್ರೀಚಿಕ್ಕಲಿಂಗೇಶ್ವರಸ್ವಾಮಿ ದೇವಸ್ಥಾನ, ಮಂಡಿ ಮೊಹಲ್ಲಾ.

■ **ಶ್ರೀ ಎಲ್ಲಮ್ಮಾಂಬ ಚಂದ್ರಗುಪ್ತಾಂಬ ಧರ್ಮ ಸಂಸ್ಥೆ ಟ್ರಸ್ಟ್** : 76ನೇ ಜಾತ್ರೋತ್ಸವ, ಬೆಳಗ್ಗೆ ಪುಣ್ಯಾಹ, ಕಲಶ ಸ್ಥಾಪನೆ, ಶ್ರೀ ಗಣಪತಿ ನವಗ್ರಹ, ಶ್ರೀ ಪರಶುರಾಮ ಮತ್ತು ಶ್ರೀ ದೇವಿಯವರುಗಳಿಗೆ ಪಂಚಾಮೃತಾಭಿಷೇಕ, ಕಲ್ಪೋಕ್ತ ಪೂಜೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಎಲ್ಲಮ್ಮಾಂಬ ಚಂದ್ರಗುಪ್ತಾಂಬ ಧರ್ಮಸಂಸ್ಥೆ ಟ್ರಸ್ಟ್ ಆವರಣ, ಮಂಡಿ ಮೊಹಲ್ಲಾ.

■ **ಗಾನಭಾರತೀ** : ಶ್ರೀಮತಿ ದೇಸಿರಾಜು ತ್ರಿಪುರ ಸುಂದರಿ ಮತ್ತು ದೇಸಿರಾಜು ನರಸಿಂಹರಾವ್ ಸ್ಮರಣಾರ್ಥ ನೃತ್ಯ ಕಾರ್ಯಕ್ರಮ, ವಿದ್ವಾನ್ ಎಸ್. ವಿಜಯಕುಮಾರ್ ಮತ್ತು ತಂಡದವರಿಂದ ಭರತನಾಟ್ಯ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6.30ಕ್ಕೆ.

■ **ಕದಂಬ ರಂಗ ವೇದಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು** :ಕದಂಬ ರಾಜ್ಯ ಮಟ್ಟದ ಏಕವ್ಯಕ್ತಿ ಮಹಿಳಾ ನಾಟಕೋತ್ಸವ, ಬೆಂಗಳೂರಿನ ಸೆಂಟರ್ ಫಾರ್ ಡಿವೈನ್ ಆರ್ಟ್ಸ್ ಕಲಾವಿದರಿಂದ ಅಪ್ಪರಸಿ ನಾಟಕ ಪ್ರದರ್ಶನ, ಅಭಿನಯ: ಡಾ. ಲೀಲಾ ಬಸವರಾಜು, ರಂಗರೂಪ, ವಿನ್ಯಾಸ, ನಿರ್ದೇಶನ : ಕೃಷ್ಣಮೂರ್ತಿ ಕವತ್ತಾರ್, ಸ್ಥಳ: ಕಿರು ರಂಗಮಂದಿರ, ಸಂಜೆ 7ಕ್ಕೆ.

ಇಂದಿನಿಂದ 76ನೇ ಜಾತ್ರಾ ಮಹೋತ್ಸವ

ಮೈಸೂರು,ಫೆ.2–ಮೈಸೂರಿನ ಮಂಡಿಮೊಹಲ್ಲಾದ ಶ್ರೀ ಎಲ್ಲಮ್ಮಾಂಬ ಚಂದ್ರ ಗುಪ್ತಾಂಬ ದೇವಾಲಯದಲ್ಲಿ 76ನೇ ವರ್ಷದ ಜಾತ್ರಾ ಮಹೋತ್ಸವ ನಾಳೆ(ಫೆ.3) ಯಿಂದ 4 ದಿನ ಆಯೋಜಿಸಲಾಗಿದೆ. ಜಾತ್ರಾ ಮಹೋತ್ಸವದ ಪ್ರಯುಕ್ತ ವಿಶೇಷ ಪೂಜಾ ಕೈಂಕರ್ಯಗಳು ಜರುಗಲಿದ್ದು, ಭಕ್ತಾದಿಗಳನ್ನು ಆಮಂತ್ರಿಸಿರುವ ದೇವಸ್ಥಾನದ ಆಡಳಿತ ಮಂಡಳಿಯವರು, ತಮ್ಮ ಹರಕೆ ಕಾಣಿಕೆಗಳನ್ನು ದೇವಸ್ಥಾನದ ಹುಂಡಿಗೆ ಸಲ್ಲಿಸಿ ದೇವಾಲಯದ ಅಭಿವೃದ್ಧಿಗೆ ಸಹಕರಿಸುವಂತೆ ಮನವಿ ಮಾಡಿದ್ದಾರೆ.

'ಇ–ಹುಂಡಿ' ಸೌಲಭ್ಯ: ಭಕ್ತರಿಗೆ ಅನುಕೂಲವಾಗುವಂತೆ 'ಇ–ಹುಂಡಿ' ವ್ಯವಸ್ಥೆಯನ್ನೂ ಕಲ್ಪಿಸಿದ್ದು, ಗೂಗಲ್ ಪೆ, ಫೋನ್ ಪೆ ಇನ್ನಿತರೆ ಯುಪಿಐ ಆ್ಯಪ್ ಮೂಲಕ ತಮ್ಮ ಹರಕೆ ಕಾಣಿಕೆಯನ್ನು ದೇವಸ್ಥಾನದ ಬ್ಯಾಂಕ್ ಖಾತೆಗೆ ಕಳಿಸಬಹುದು. ಮಾಹಿತಿಗೆ ಮೊ.ಸಂ.9611446290 ಅಥವಾ 8277117178 ಸಂಪರ್ಕಿಸುವಂತೆ ಕೋರಲಾಗಿದೆ.

ಇಂದು ಪೂರ್ವಭಾವಿ ಸಭೆ

ಮೈಸೂರು,ಫೆ.2–ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಯಲ್ಲಿ ಫೆ.3 ರಂದು ಸಂಜೆ 4 ಗಂಟೆಗೆ 2023–24ನೇ ಸಾಲಿನ ಆಯವ್ಯಯ ಪೂರ್ವಭಾವಿ ಸಭೆ ಹಮ್ಮಿಕೊಳ್ಳಲಾಗಿದೆ. ತಾಲೂಕಿನ ಪಟ್ಟಣ ಪಂಚಾಯಿತಿಯ ಆಡಳಿತಾಧಿಕಾರಿಗಳು ಹಾಗೂ ತಹಶೀಲ್ದಾರ್ ಬಿ.ಎನ್.ಗಿರೀಶ್ ಅಧ್ಯಕ್ಷತೆಯಲ್ಲಿ ಸಭೆ ನಡೆಯಲಿದ್ದು, ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಗ್ರಾಮ ಪಂಚಾಯಿತಿಯ ಮಾಜಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಮಾಜಿ ನಾಮ ನಿರ್ದೇಶಿತ ಸದಸ್ಯರು ಹಾಗೂ ಸಾರ್ವಜನಿಕರು, ಸಂಘ–ಸಂಸ್ಥೆಗಳ ಮುಖ್ಯಸ್ಥರು, ಎನ್.ಜಿ.ಓ ಹಾಗೂ ಸ್ವ–ಸಹಾಯ ಸಂಘದವರು ಸಲಹೆ ಸೂಚನೆಗಳನ್ನು ನೀಡಬೇಕೆಂದು ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಆಡಳಿತಾಧಿಕಾರಿ ಹಾಗೂ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ಕೋರಿದ್ದಾರೆ.

ಯೋಗ ಕೋರ್ಸ್‌ಗೆ ಅರ್ಜಿ ಸಲ್ಲಿಸಲು ನಾಳೆ ಕಡೇ ದಿನ

ಮೈಸೂರು,ಫೆ.2–ಮೈಸೂರು ವಿವಿ ಯೋಗ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನಿಸಿದ್ದು, ಭರ್ತಿ ಮಾಡಿದ ಅರ್ಜಿ ಸಲ್ಲಿಸಲು ಫೆ.4 ಕಡೇ ದಿನವಾಗಿದೆ. 2022–23ನೇ ಸಾಲಿನಿಂದ ಆರಂಭಿಸಲಾಗಿರುವ ಯೋಗಕ್ಕೆ ಸಂಬಂಧಿಸಿದ ಡಿಪ್ಲೊಮಾ, ಪಿಜಿ ಡಿಪ್ಲೊಮಾ ಹಾಗೂ ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನಿಸಿದ್ದು, ಆಸಕ್ತರು ಮಾನಸ ಗಂಗೋತ್ರಿಯ ಅಂಕಿ ಅಂಶಗಳ ಅಧ್ಯಯನ ವಿಭಾಗದಲ್ಲಿ ಅರ್ಜಿ ಪಡೆದು ಅಗತ್ಯ ದಾಖಲೆಗಳೊಂದಿಗೆ ಭರ್ತಿ ಮಾಡಿದ ಅರ್ಜಿಗಳನ್ನು ಫೆ.4ರೊಳಗೆ ಸಲ್ಲಿಸ ಬಹುದು. ಮಾನಸ ಗಂಗೋತ್ರಿ ಯೋಗ ಪ್ರೋಗ್ರಾಂ ಅಧ್ಯಯನ ವಿಭಾಗ (ಮೊ. 90197 85995, 9535993665) ಸಂಪರ್ಕಿಸಿ.

ಬಾಕಿ ಬಾಡಿಗೆ, ನೀರಿನ ಬಿಲ್ ಪಾವತಿಸದ ಕೆ.ಆರ್.ಆಸ್ಪತ್ರೆ ಕ್ಯಾಂಟೀನ್‌ಗೆ ನೋಟೀಸ್

ಮೈಸೂರು, ಫೆ.2(ಆರ್‌ಕೆ)– ನೀರಿನ ಬಿಲ್ ಮತ್ತು ಬಾಡಿಗೆ ಬಾಕಿ ಪಾವತಿಸದ ಮೈಸೂರಿನ ಕೆ.ಆರ್. ಆಸ್ಪತ್ರೆ ಕ್ಯಾಂಟೀನ್ ಮಾಲೀಕ ಟಿ.ಪಿ.ಕೃಷ್ಣಪ್ಪ ಅವರಿಗೆ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಬಿ.ಎಲ್.ನಂಜುಂಡಸ್ವಾಮಿ ಜ.30ರಂದು ನೋಟೀಸ್ ಜಾರಿ ಮಾಡಿದ್ದಾರೆ.

2022ರ ಮಾರ್ಚ್ ಮಾಹೆಯಿಂದ ಈವರೆಗೆ ಹೋಟೆಲ್ ಬಾಡಿಗೆ ಪಾವತಿಸಿಲ್ಲ. ಆರ್‌ಆರ್ ಮೀಟರ್ ಸಂಖ್ಯೆ 26701ರಲ್ಲಿ ಪಡೆದಿರುವ ನೀರಿನ ಸಂಪರ್ಕದ 2003 ರಿಂದ 2023ರ ಜ.16ರವರೆಗೆ 5,22,407 ರೂ. ನೀರು ಶುಲ್ಕ ಬಾಕಿ ಇರುವುದಾಗಿ ಮೈಸೂರು ನಗರ ಪಾಲಿಕೆ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವಿಭಾಗದವರು ತಿಳಿಸಿದ್ದಾರೆ ಎಂದು ನೋಟೀಸ್‌ನಲ್ಲಿ ಉಲ್ಲೇಖಿಸಿದ್ದಾರೆ. ಈ ಹಿಂದೆ 2017ರ ಮಾರ್ಚ್ ಮಾಹೆಯಲ್ಲಿ ನೀರಿನ ಸಂಪರ್ಕ ಕಡಿತಗೊಳಿಸಿರುವುದಾಗಿ ನಗರ ಪಾಲಿಕೆ ಅಧಿಕಾರಿಗಳು ತಿಳಿಸಿದ್ದಾರೆ.

ಆದರೂ ನೀರಿನ ಸಂಪರ್ಕ ಯಾವ ರೀತಿ ಪಡೆಯಲಾಗಿದೆ ಎಂಬುದರ ಬಗ್ಗೆ ನೋಟೀಸ್ ತಲುಪಿದ ಎರಡು ದಿನದೊಳಗೆ ಸಮಜಾಯಿಷಿ ನೀಡಬೇಕು ಹಾಗೂ 2003ರಿಂದ ಬಾಕಿ ಇರುವ ನೀರಿನ ಬಿಲ್ ಪಾವತಿಸಿ, ರಶೀದಿ ಸಲ್ಲಿಸುವಂತೆಯೂ ಕೆ.ಆರ್.ಆಸ್ಪತ್ರೆ ವೈದ್ಯಕೀಯ ಅಧೀಕ್ಷಕರು ಕ್ಯಾಂಟೀನ್ ಮಾಲೀಕರಿಗೆ ಸೂಚಿಸಿದ್ದಾರೆ.

ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಮೈಸೂರು: ಡಿ.ಎಂ.ಜಿ.ಹಳ್ಳಿ ಜವಾಹರ ನವೋದಯ ವಿದ್ಯಾಲಯ 2023–24ನೇ ಶೈಕ್ಷಣಿಕ ವರ್ಷದ 6ನೇ ತರಗತಿಯ ಪ್ರವೇಶ ಪರೀಕ್ಷೆಯ ಅರ್ಜಿ ಸಲ್ಲಿಸುವ ಕೊನೇ ದಿನಾಂಕವನ್ನು ಫೆ.8ರವರೆಗೆ ವಿಸ್ತರಿಸಲಾಗಿದೆ. www.navodaya.gov.inನಲ್ಲಿ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ 0821–2970040 ಸಂಪರ್ಕಿಸಿ.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ ರಾತ್ರಿ ಭೂತ ಗೀತಾ ಬಂದ್ರೆ ಏನ್ ಮಾಡ್ತೀರಾ...?
ಗಂಡ : ಭೂತ ಬಂದ್ರೆ ಓಡಿಸ್ತೀನಿ, ಗೀತಾ ಬಂದ್ರೆ ಬೆಳಗ್ಗೆ ಕಳಿಸ್ತೀನಿ... ಪಾಪಾ ಕತ್ತಲೆ ಅಲ್ವಾ

ಮೈಸೂರು ಮಿತ್ರ

ಶುಕ್ರವಾರ, 3 ಫೆಬ್ರವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಇಷ್ಟ ಎಂದು ನಿನಗೆ ಅಗತ್ಯವಿಲ್ಲದ ವಸ್ತುಗಳನ್ನು ಕೊಳ್ಳಬೇಡ.

–ಆಸ್ಕರ್ ವೈಲ್ಡ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಊರು ನೋಡಿ ಬಾ ಅಂದ್ರೆ ತೋರಣ ಕಟ್ಟಿ ಬಂದ್ನಂತೆ

ನಿಮ್ಮ ಪತ್ರಗಳು

ಆಹಾರ ಇಲಾಖೆಯ ಆಮೆ ನಡಿಗೆ ಕಾರ್ಯ!

ಮಾನ್ಯರೆ,

ಮೈಸೂರಿನ ನಂಜರಾಜ ಬಹದ್ದೂರ್ ಛತ್ರದ ಆವರಣದಲ್ಲಿ ಆಹಾರ ಇಲಾಖೆಯ ಕಚೇರಿಯೊಂದು ಕಾರ್ಯ ನಿರ್ವಹಿಸುತ್ತಿರುವುದು ಸರಿಯಷ್ಟೇ. ಪಡಿತರ ಚೀಟಿಗೆ ಸಂಬಂಧಿಸಿದಂತೆ ಸದರಿ ಕಚೇರಿಗೆ ಸಲ್ಲಿಸಲಾದ ಅರ್ಜಿಗಳು ತ್ವರಿತ ಗತಿಯಲ್ಲಿ ಇತ್ಯರ್ಥವಾಗದಿರುವುದು ನಿಜಕ್ಕೂ ಶೋಚನೀಯ.

ನಜರ್‌ಬಾದ್ ಮೊಹಲ್ಲಾ ವ್ಯಾಪ್ತಿಗೆ ಒಳಪಡುವ ಈ ಆಹಾರ ಇಲಾಖೆಯ ಕಚೇರಿಯಲ್ಲಿ ಪಡಿತರ ಚೀಟಿಯಲ್ಲಿ ಹೊಸದಾಗಿ ಹೆಸರು ಸೇರಿಸಲು ಹಾಗೂ ತೆಗೆದು ಹಾಕಲು ಮತ್ತು ವಿಳಾಸ ಬದಲಾವಣೆ, ತಿದ್ದುಪಡಿ, ಹೀಗೆ ಅನೇಕ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ಇಲ್ಲಿನ ಇಲಾಖಾ ಸಿಬ್ಬಂದಿ ಅರ್ಜಿಗಳನ್ನು ಸ್ವೀಕರಿಸುತ್ತಾರೆ. ನಾವು ನೀಡಿರುವಂತಹ ಅರ್ಜಿಯಲ್ಲಿ ನಮ್ಮ ಮೊಬೈಲ್ ಸಂಖ್ಯೆ ಬರೆದುಕೊಂಡು, ಅರ್ಜಿಯ ಸಮಸ್ಯೆ ಇತ್ಯರ್ಥವಾದ ಬಳಿಕ, ಫೋನ್ ಮಾಡಿ ತಿಳಿಸುತ್ತೇವೆ ಎನ್ನುತ್ತಾರೆ. ಆದರೆ ಇಂತಿಷ್ಟು ದಿನ ಎಂದು ನಿಖರವಾಗಿ ಹೇಳುವುದಿಲ್ಲ. ತಿಂಗಳುಗಟ್ಟಲೇ ಕಳೆದರೂ ಅಚ್ಚರಿಯಿಲ್ಲ.

ಇದಕ್ಕೆ ಉದಾಹರಣೆ ಎಂಬಂತೆ ನಾನು ಬದಲಿ ವಿಳಾಸ ಹಾಗೂ ನ್ಯಾಯಬೆಲೆ ಅಂಗಡಿಯ ಬದಲಾವಣೆಗಾಗಿ ಸದರಿ ಕಚೇರಿಗೆ ಅರ್ಜಿ ಸಲ್ಲಿಸಿದ್ದು, ನಾನು ನೀಡಿದ್ದಂತಹ ಅರ್ಜಿಗೆ ಆಹಾರ ಇಲಾಖೆಯಿಂದ ಅನುಮೋದನಾ ಪತ್ರ ಇದುವರೆವಿಗೂ ಸಿಕ್ಕಿಲ್ಲ. ಅರ್ಜಿ ಸಲ್ಲಿಸಿದಾಗಿನಿಂದ ಕಚೇರಿಗೆ ಹಲವು ಬಾರಿ ಅಲೆದಾಡಿದಾಗ ಅವರಿಂದ ಬಂದಂತಹ ಉತ್ತರ! "ಕರೆಂಟ್ ಇಲ್ಲ, ಸರ್ವರ್ ಇಲ್ಲ, ಫೋನ್ ಮಾಡ್ತೇವೆ, ರೆಡಿ ಆಗ್ತಾಯಿದೆ. ಈಗೇಕೆ ನಿಮಗೆ ಕಾರ್ಡು, ನಾವು ಫೋನ್ ಮಾಡೋವರ್ಗೂ ಬರ್ಲೇಬೇಡಿ' ಎಂಬ ಬೇಜವಾಬ್ದಾರಿ ಉತ್ತರವನ್ನು ಇಲ್ಲಿನ ಸಿಬ್ಬಂದಿ ನೀಡುತ್ತಾರೆ. 'ಆಹಾರ ನಿರೀಕ್ಷಕರಿಂದಲೂ ನಿರೀಕ್ಷಿತ ಉತ್ತರವಿಲ್ಲ. ಸಕಾಲದಲ್ಲಿ ತಯಾರಾಗಿ ಇವರು ನೀಡುವ ಅನುಮೋದನಾ ಪತ್ರವನ್ನು ಸಂಬಂಧಪಟ್ಟ ಆಹಾರ ಇಲಾಖೆಗೆ ಸಲ್ಲಿಸಿ, ನಮ್ಮ ಸ್ವ–ವಿಳಾಸದ ಪಡಿತರ ಕಾರ್ಡು ಪಡೆಯುವುದಕ್ಕೆ, ತಿಂಗಳ ಒಂದನೇ ತಾರೀಖಿನಿಂದ ಹತ್ತನೇ ತಾರೀಖಿನವರೆಗೆ ಮಾತ್ರ ಆಹಾರ ಇಲಾಖೆ ದಿನಾಂಕವನ್ನು ನಿಗದಿಪಡಿಸಿದೆ. ಇಂತಹ ಅವ್ಯವಸ್ಥೆಯಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗಿದೆ. ಪ್ರತಿಯೊಬ್ಬ ಪಡಿತರದಾರರಿಗೂ ತಮ್ಮ ಸ್ವ–ವಿಳಾಸದ ಪಡಿತರ ಚೀಟಿಯು ಅನೇಕ ಸಂದರ್ಭಗಳಲ್ಲಿ ಅವಶ್ಯಕವಾಗಿರುತ್ತದೆ. ಆದ್ದರಿಂದ ಸಂಬಂಧಪಟ್ಟ ಇಲಾಖೆಯವರು, ಸಾರ್ವಜನಿಕರ ಈ ಸಮಸ್ಯೆಯತ್ತ ಸಕಾಲದಲ್ಲಿ ಗಮನಹರಿಸಬೇಕಾಗಿ ವಿನಂತಿ.

–ದೇವರಾಜು ವಿ., ಅಳಗಂಚಿ ಗ್ರಾಮ, ನಂಜನಗೂಡು ತಾಲೂಕು.

ಸಮರ್ಪಕ ವಿದ್ಯುತ್ ಪೂರೈಕೆಗೆ ಮನವಿ

ಮಾನ್ಯರೆ,

ನಂಜನಗೂಡು ತಾಲೂಕಿನ ಅಳಗಂಚಿಪುರ ಸುತ್ತಮುತ್ತಲಿನ ಗ್ರಾಮ ಗಳಲ್ಲಿ ವಿದ್ಯುತ್ ಪೂರೈಕೆಯ ವ್ಯತ್ಯಯದಿಂದ ರೈತರು ಸಂಕಷ್ಟಕ್ಕೀಡಾಗುವಂತಾಗಿದೆ. ಅಳಗಂಚಿಪುರ ಗ್ರಾಮದ ವ್ಯಾಪ್ತಿಯಲ್ಲಿ ದಿನಕ್ಕೆ ಮೂರು ನಾಲ್ಕು ಗಂಟೆಗಳ ಕಾಲವೂ 3 ಫೇಸ್ ವಿದ್ಯುತ್ ಪೂರೈಸುತ್ತಿಲ್ಲ. ಇದರಿಂದ ರೈತರು ಬೆಳೆಗಳಿಗೆ ನೀರು ಹಾಯಿಸಲಾಗದೆ ಸಂಕಷ್ಟ ಅನುಭವಿಸುವಂತಾಗಿದೆ. ಬೇಸಿಗೆ ಕಾಲ ಆರಂಭವಾಗಿದ್ದು, ಬೆಳೆಗಳು ಒಣಗಲಾರಂಭಿಸಿದೆ. ಇದರಿಂದ ರೈತ ಸಮುದಾಯ ಚಿಂತೆಗೀಡಾಗಿದೆ. ಸಂಬಂಧಪಟ್ಟ ಇಲಾಖೆ ತುರ್ತು ಕ್ರಮ ಕೈಗೊಂಡು ಸಮರ್ಪಕವಾಗಿ ತ್ರೀ ಫೇಸ್ ವಿದ್ಯುತ್ ಪೂರೈಸಿ ಬೆಳೆ ರಕ್ಷಣೆಗೆ ಇನ್ನಾದರೂ ಮುಂದಾಗಲಿ.

–ಗ್ರಾಮಸ್ಥರು, ಅಳಗಂಚಿಪುರ.

ಖಾಲಿ 'ಕೈ' ದಂಡ ಯಾತ್ರೆ

ಮಾನ್ಯರೆ,

ಇತ್ತೀಚೆಗೆ ಬಿಡುಗಡೆಗೊಂಡ ದೊಡ್ಡ ದೊಡ್ಡ ಸಿನಿಮಾಗಳ ರೀತಿ ಸೋಷಿಯಲ್ ಮೀಡಿಯಾದೊಳಗೆ ದಾಖಲೆ ಗಳಿಕೆಗಳಿದ್ದರೂ ಥಿಯೇಟರ್‌ಗಳಲ್ಲಿ ಖಾಲಿ ಪ್ರದರ್ಶನದಂತಾಗಿದೆ ಖಾಲಿ 'ಕೈ' ಯಾತ್ರೆ. ಹಿಂದೆ ನಡೆದ ಎಲ್ಲಾ walk ಚಳುವಳಿಗೂ ಉದ್ದೇಶ ಒಂದಿರುತ್ತಿತ್ತು.

ಇಂದಿನ ನಡೆಗೆ ದಾಡಿ ಬೆಳೆದು ದಾರಿ ಸವೆಯಿತಷ್ಟೇ. ಗುರಿ ಏನು? ಉದ್ದೇಶವೇನು? ಎಂಬುದು ಇನ್ನೂ ನಡೆದವರಿಗೆ ಅರ್ಥವಾಗಿಲ್ಲ. ಮಾಧ್ಯಮಗಳಲ್ಲಿ ಮಾತಿಲ್ಲ, ಪತ್ರಿಕೆಗಳಲ್ಲಿ ಮುಖಪುಟದ ಮುಖ್ಯ ವಿಷಯವಲ್ಲ.

ಈ ಯಾತ್ರೆಯ ಆರಂಭದಲ್ಲಿ ಚಾಮರಾಜನಗರದಿಂದ ಹಾದುಹೋದ ಪ್ರತಿಫಲವಾಗಿ ಕೊಳ್ಳೇಗಾಲದ ಸಿಟಿ ಮುನ್ಸಿಪಾಲ್ ಕೌನ್ಸಿಲ್ ಮರುಚುನಾವಣೆಯಲ್ಲಿ ಬಂದ ಫಲಿತಾಂಶದಿಂದ ಹಿಡಿದು ಮೊನ್ನೆ 27ನೇ ತಾರೀಖಿನಂದು ಪತ್ರಿಕೆಯೊಂದರಲ್ಲಿ ಬಂದ ಸಮೀಕ್ಷೆಯ ಪ್ರಕಾರ ಬಿಜೆಪಿಯೇ ಮುನ್ನಡೆಯಲ್ಲಿದೆ. ಮೋದಿ ಜನಪ್ರಿಯತೆ ಕಳೆದ ವರ್ಷದ ಆಗಸ್ಟ್‌ಗಿಂತಲೂ ಈ ತಿಂಗಳ ಜನಪ್ರಿಯತೆಯ ಶೇ 10 ರಷ್ಟು ಪ್ರಮಾಣ ಹೆಚ್ಚಾಗಿದೆ. ಆದರೆ ಈ ಯಾತ್ರೆಯಿಂದ ನಮ್ಮ ಉದ್ದೇಶ ಒಂದು ಈಡೇರಿತು. ಯಾವ ಪ್ರದೇಶದಲ್ಲಿ ರಾಷ್ಟ್ರ ಧ್ವಜ ಹಾರಲು ಯಾವ ವ್ಯಕ್ತಿ ಅವಕಾಶ ಕೊಟ್ಟಿರಲಿಲ್ಲವೋ ಅದೇ ಪ್ರದೇಶದಲ್ಲಿ ಅದೇ ವ್ಯಕ್ತಿಯ ವಂಶದ ಕುಡಿ ನಮ್ಮದೇ ರಾಷ್ಟ್ರ ಧ್ವಜಾರೋಹಣ ಮಾಡುವಂತಾಯಿತು. ಈ ಮೂಲಕ ರಾಷ್ಟ್ರೀಯವಾದಿಗಳ ಚಳುವಳಿ ಸುಖಾಂತ್ಯವಾಯಿತು.

ಮತ್ತೊಂದು ಅವರದೇ ಉದ್ದೇಶದಂತೆ ಈಡೇರಿದೆ. ಅದೇನೆಂದರೆ, ಭಾರತದೊಂದಿಗೆ ನಮ್ಮನ್ನೂ ಜೋಡಿಸಿಕೊಳ್ಳಿ ಎಂದು ಪಾಕಿಸ್ತಾನದ ಗಿಲ್ಗಿಟ್ ಬಲ್ತಿಸ್ತಾನ್ ಜನರು ಅಲ್ಲಿಯ ಸರ್ಕಾರದ ವಿರುದ್ಧ ಪ್ರತಿಭಟಿಸಿ ಗಡಿ ಬಳಿ ಬಂದು ನಿಂತಿದ್ದಾರೆ. ಅಲ್ಲಿಗೆ ಜೋಡಿಸುವ ಕಾರ್ಯಕ್ರಮದ ಶುಭಾರಂಭವಾಗಿದೆ ಎಂಬುದೇ ಸಂತೋಷದ ವಿಷಯ. ನಾನು ಅಕ್ಟೋಬರ್ ಒಂದನೇ ತಾರೀಖಿನಂದು ಬರೆದ ಲೇಖನವನ್ನು ಪುಷ್ಟೀಕರಿಸಿ ನೆನ್ನೆ ಕಾಂಗ್ರೆಸ್‌ನ ರಾಜ್ಯಾಧ್ಯಕ್ಷರೇ ಹೇಳಿರುವಂತೆ 'ಇದೊಂದು ಅಂತಿಮ ಯಾತ್ರೆ'

–ಪರಮಾನಂದ.ಎಂ.ಎಸ್, ರಾಜ್ಯ ಕಾರ್ಯದರ್ಶಿ, ಎಸ್‌ಸಿ ಮೋರ್ಚಾ, ಬಿಜೆಪಿ

ಯುಜಿಡಿ, ಡಾಂಬರೀಕರಣ ಕಾಮಗಾರಿ ಪೂರ್ಣಗೊಳಿಸಿ

ಮಾನ್ಯರೆ,

ಮೈಸೂರಿನ ವಿಜಯನಗರ 4ನೇ ಹಂತದಲ್ಲಿ ಯುಜಿಡಿ ಕಾಮಗಾರಿ ಮಳೆಗಾಲದಲ್ಲಿ ನಡೆದಿದ್ದು ಬಿಟ್ಟರೆ ಮಳೆ ನಿಂತ ಮೇಲೆ ಯುಜಿಡಿ ಕಾಮಗಾರಿ ಸ್ಥಗಿತಗೊಂಡಿದೆ. ಇದನ್ನು ಪೂರ್ಣಗೊಳಿಸಲು ಮತ್ತೆ ಮಳೆಗಾಲವೇ ಬರಬೇಕು ಎನ್ನುವಂತಾಗಿದೆ. ಮಳೆಗಾಲದಲ್ಲಿ ಯುಜಿಸಿ ಪ್ರಾರಂಭಿಸಿ ಬಡಾವಣೆ ಜನ ಕೆಸರು ಗದ್ದೆಯಂತಾದ ರಸ್ತೆಯಲ್ಲಿ ಮನೆಯಿಂದ ಹೊರಗೆ ಬರಲಾರದಂತಹ ನರಕಯಾತನೆ ಅನುಭವಿಸಿದ್ದಾರೆ. ಆದರೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಕಣ್ಮುಚ್ಚಿ ಕುಳಿತಿದೆ. ಮಳೆ ಪ್ರಾರಂಭವಾಗುವುದರೊಳಗೆ ಯುಜಿಡಿ ಕಾಮಗಾರಿ ಮುಗಿದರೆ ಬಡಾವಣೆ ಜನ ನೆಮ್ಮದಿಯಿಂದ ರಸ್ತೆಗಳಲ್ಲಿ ಓಡಾಡಬಹುದು.

ಇನ್ನೂ ರಸ್ತೆ ಡಾಂಬರೀಕರಣ ಕೆಲವು ಮುಖ್ಯ ರಸ್ತೆಗಳಲ್ಲಿ ಮಾತ್ರ ಆಗಿದೆ. ಉಳಿದಂತೆ ಅಡ್ಡ ರಸ್ತೆಗಳು ತೀರ ದುಸ್ಥಿತಿಯಲ್ಲಿವೆ. ಈ ರಸ್ತೆಗಳಿಗೆ ತುರ್ತಾಗಿ ಡಾಂಬರೀಕರಣ ಆದರೆ ಮಳೆಗಾಲದಲ್ಲಿ ಡಾಂಬರು ಹಾಕುವುದು ತಪ್ಪುತ್ತದೆ.

ರಸ್ತೆ ಪಕ್ಕದ ಗಿಡಗಂಟಿ ಕೆಲವು ಕಡೆ ಮಾತ್ರ ತೆಗೆದಿದ್ದಾರೆ. ಸಂಕಲ್ಪ ಅಪಾರ್ಟ್‌ಮೆಂಟ್ ಪಕ್ಕದ ಬಡಾವಣೆ ಯುಜಿಡಿ ಆಗಲಿ, ರಸ್ತೆ ಡಾಂಬರೀಕರಣ ಆಗಲಿ, ರಸ್ತೆ ಸ್ವಚ್ಛತೆ ಆಗಲಿ ಆಗಿರುವುದಿಲ್ಲ. ಈ ಬಗ್ಗೆ ವಲಯ ಇಂಜಿನಿಯರ್ ಸ್ಥಳ ಪರಿಶೀಲನೆ ನಡೆಸಿ ಕಾಮಗಾರಿ ಪೂರ್ಣಗೊಳಿಸುವಂತೆ ಆದೇಶಿಸಬೇಕಾಗಿ ಮುಡಾ ಅಧ್ಯಕ್ಷರು ಮತ್ತು ಆಯುಕ್ತರಲ್ಲಿ ಮನವಿ.

–ಬಿ.ಜಿ. ರಂಗೇಗೌಡ, ಮೈಸೂರು.

ಇತಿಹಾಸದ ಪುಟಗಳು



ಪ್ರೊ. ಎ.ವಿ.ನರಸಿಂಹಮೂರ್ತಿ
ಮಾಜಿ ಮುಖ್ಯಸ್ಥರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರ ವಿಭಾಗ,
ಮೈಸೂರು ವಿಶ್ವವಿದ್ಯಾನಿಲಯ.

ಮೂವರು ಮಹನೀಯರ ಮಹಾ ಕೊಡುಗೆ

ಇತಿಹಾಸದಲ್ಲಿ ದಾಖಲಾಗಿರುವ ಈ ಮೂವರು ಮಹನೀಯರು ಸ್ವಾತಂತ್ರ್ಯ ಹೋರಾಟ, ರಾಜ್ಯ ಪುನರ್ವಿಂಗಡಣೆ, ರಾಜಕೀಯ ಆಡಳಿತ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದಂತಹವರು. ಆ ಮೂಲಕ ತಮ್ಮದೇ ಆದ ಕೊಡುಗೆಯನ್ನು ಸಮಾಜಕ್ಕೆ ಮತ್ತು ದೇಶಕ್ಕೆ ನೀಡಿದ್ದಾರೆ. ಇಂತಹವರ ವಿಚಾರಧಾರೆ ಯುವ ಪೀಳಿಗೆಗೆ ದಾರಿದೀಪವಾಗಬಲ್ಲದು.

ಮೊದಲನೆಯವರು ಎಚ್.ಸಿ.ದಾಸಪ್ಪ: ಇವರು 5.12.1894ರಲ್ಲಿ ಮಡಿಕೇರಿಯಲ್ಲಿ ಜನಿಸಿದರು. ಇವರ ತಂದೆ ಚೆನ್ನಯ್ಯ ಹಾಗೂ ತಾಯಿ ತಿಮ್ಮಮ್ಮ. ದಾಸಪ್ಪನವರ ಹಿಂದಿನವರು ಇದ್ದ ಸ್ಥಳ, ಮೈಸೂರು ಸಂಸ್ಥಾನದ ಹಿರಳ್ಳಿ. ಚೆನ್ನಯ್ಯನವರು ಮಡಿಕೇರಿಯಲ್ಲಿ ನ್ಯಾಯಾಧೀಶರಾಗಿದ್ದರು. ಅವರಿಗೆ ಬ್ರಿಟಿಷ್ ಸರ್ಕಾರದಿಂದ 'ರಾವ್ ಬಹದ್ದೂರ್' ಎಂಬ ಬಿರುದು ದೊರಕಿತ್ತು. ಚೆನ್ನಯ್ಯನವರು ಕೆಲಸದಿಂದ ನಿವೃತ್ತರಾದ ನಂತರ ಬೆಂಗಳೂರಿಗೆ ಬಂದು ನೆಲೆಸಿದರು. ಮೈಸೂರು ಸಂಸ್ಥಾನದಲ್ಲಿ ಹಿಂದುಳಿದ ವರ್ಗದ ಜನಗಳ ಏಳಿಗೆಗಾಗಿ ಆರಂಭವಾದ ಜಸ್ಟಿಸ್ ಚಳುವಳಿಯಲ್ಲಿ ಭಾಗವಹಿಸಿದ್ದವರಲ್ಲಿ ಚೆನ್ನಯ್ಯನವರೂ ಒಬ್ಬರು. ದಾಸಪ್ಪನವರು ಮಹಾರಾಜ ಕಾಲೇಜಿನಲ್ಲಿ ಇಂಟರ್‌ಮೀಡಿಯೇಟ್ (ಈಗಿನ ಪಿಯುಸಿ) ಪರೀಕ್ಷೆಯಲ್ಲಿ ತೇರ್ಗಡೆಯಾದರು. ನಂತರ ಮದರಾಸಿನಲ್ಲಿ ಬಿ.ಎ. ಪದವಿ ಪಡೆದರು.

ಇವರು ಅನಂತರ ಮುಂಬಯಿಗೆ ಹೋಗಿ ಅಲ್ಲಿ ನ್ಯಾಯಶಾಸ್ತ್ರದ ಪರೀಕ್ಷೆಯನ್ನು ಮುಗಿಸಿದರು. 1919ರಲ್ಲಿ ಬೆಂಗಳೂರಿನಲ್ಲಿ ವಕೀಲರಾಗಿ ಉದ್ಯೋಗವನ್ನು ವೃತ್ತಿ ಸಾರ್ವಜನಿಕ ಕಾರ್ಯಗಳನ್ನು ಮುಂದುವರಿಸಿದರು. ದಾಸಪ್ಪನವರು 1926ರಲ್ಲಿ ಸಮಾಜ ಸುಧಾರಕ ಕೆ.ಎಚ್. ರಾಮಯ್ಯನವರ ಮಗಳು ಯಶೋಧರಮ್ಮನವರನ್ನು ಮದುವೆಯಾದರು.


1937ರವರೆಗೆ ದಾಸಪ್ಪನವರು ಸಂಯುಕ್ತ ಪ್ರಜಾಪಕ್ಷದ ಮುಖಂಡರಾಗಿ ಹಾಗೂ ಮೈಸೂರು ಪುರಸಭೆ ಹಾಗೂ ಸಂಸ್ಥಾನದ ನ್ಯಾಯವಿಧಾಯಕ ಸಭೆಯ ಸದಸ್ಯರಾಗಿ ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಹಿಂದುಳಿದ ವರ್ಗಗಳ ಮುನ್ನಡೆಗೆ ನಡೆದ ಚಳುವಳಿಯ ನಾಯಕರಾಗಿದ್ದ ದಾಸಪ್ಪನವರು 1937ರಲ್ಲಿ ಮೈಸೂರು ಸಂಸ್ಥಾನದ ಕಾಂಗ್ರೆಸ್ ಸೇರಿದರು. ಇವರಿಗೆ 1939 ರಲ್ಲಿ ಕಾಂಗ್ರೆಸ್ ಪಾರ್ಟಿಯ ಅಧ್ಯಕ್ಷತೆ ದೊರಕಿತು. ಹಿಂದಿನ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಗಾಗಿ ನಡೆದ ಹೋರಾಟಗಳಲ್ಲಿ ದಾಸಪ್ಪನವರು ಭಾಗವಹಿಸಿ, ಹಲವು ಬಾರಿ ಸೆರೆಮನೆಗೂ ಹೋಗಿದ್ದರು. ದಾಸಪ್ಪನವರ ಚಟುವಟಿಕೆಗಳಿಂದ ಕೋಪಗೊಂಡ ಮೈಸೂರು ಸರ್ಕಾರ ಅವರ ವಕೀಲಿ ಸನ್ನದನ್ನು ರದ್ದು ಮಾಡಿತು. ಇದರಿಂದಾಗಿ ಇವರು ವಕೀಲಿ ವೃತ್ತಿಯನ್ನು ಮಾಡುವಂತೆ ಇರಲಿಲ್ಲ.

ಆ ಸಂದರ್ಭದಲ್ಲಿ ಗಾಂಧೀಜಿಯವರು (13.6.1940) ಈ ರೀತಿ ಬರೆದರು. "ಶ್ರೀ ದಾಸಪ್ಪನವರು ಮೈಸೂರಿನ ಅತ್ಯಂತ ಗೌರವಾನ್ವಿತ ವ್ಯಕ್ತಿ. ಇಪ್ಪತ್ತು ವರ್ಷಗಳ ವಕೀಲಿ ಕೆಲಸದ ಅನುಭವವುಳ್ಳವರು ಮೈಸೂರಿನಲ್ಲಿ ದಂಡಾಧೀಶರ (ಮ್ಯಾಜಿಸ್ಟ್ರೇಟ್) ಆಜ್ಞೆಯನ್ನು ಉಲ್ಲಂಘಿಸಿ ಭಾಷಣ ಮಾಡಿದ ಕೆಚ್ಚು ಅವರದು. ಜಸ್ಟಿಸ್ ನಾಗೇಶ್ವರ ಅಯ್ಯರ್ ಅವರಿಂದ ನಡೆಯಲಿದ್ದ ವಿಚಾರಣೆಯನ್ನು ಬಹಿಷ್ಕರಿಸಬೇಕೆಂದು ರಾಜಕೀಯ ಕೈದಿಗಳಿಗೆ ತಿಳಿಸಿ ಹೇಳುವ ಸಾಹಸ ಮಾಡಿದ್ದರು. ಶ್ರೀ ದಾಸಪ್ಪನವರನ್ನು ನಾನು ಚೆನ್ನಾಗಿ ಬಲ್ಲೆ. ಅವರು ನಿಷ್ಕಳಂಕ ಚಾರಿತ್ರ್ಯ ಉಳ್ಳವರು ಹಾಗೂ ಅತ್ಯಂತ ಪ್ರಾಮಾಣಿಕರು. ಅವರು ತಮ್ಮ ಕೈಲಾದ ಮಟ್ಟಿಗೆ ಅಹಿಂಸೆಯನ್ನು ಅನುಸರಿಸಲು ಸ್ಥೈರ್ಯದಿಂದ ಪ್ರಯತ್ನಿಸುತ್ತಿದ್ದಾರೆ. ಬ್ರಿಟಿಷ್ ಭಾರತದ ವಕೀಲರು ಏನು ಮಾಡಿದ್ದಾರೋ ಅಥವಾ ಏನು ಮಾಡಲಿಲ್ಲವೋ ಅದನ್ನು ಶ್ರೀ ದಾಸಪ್ಪನವರು ಮಾಡಿ ತೋರಿಸಿದ್ದಾರೆ".

ಸ್ವಾತಂತ್ರ್ಯ ಬಂದ ನಂತರದ ಕಾಲದಲ್ಲಿ ದಾಸಪ್ಪನವರು ರಾಜಕೀಯ ಹಾಗೂ ಸೇವಾ ಕಾರ್ಯಗಳಲ್ಲಿ ವಿಶೇಷವಾಗಿ ದುಡಿದರು. ಶ್ರೀ ರಾಮಕೃಷ್ಣಾಶ್ರಮ, ಕಸ್ತೂರ ಬಾ ಗಾಂಧಿ ಸ್ಮಾರಕ ಸಂಸ್ಥೆ, ಗಾಂಧೀ ಸ್ಮಾರಕ ನಿಧಿ ಮತ್ತು ಹಿಂದೀ ಪ್ರಚಾರ ಸಭೆ ಮುಂತಾದ ಸಂಸ್ಥೆಗಳ ಮೂಲಕ ಸೇವೆ ಸಲ್ಲಿಸಿದರು. 1947ರ ಅಕ್ಟೋಬರ್‌ನಿಂದ 1952ರವರೆಗೆ ಮೈಸೂರು ರಾಜ್ಯದ ಕೈಗಾರಿಕೆ ಮತ್ತು ಹಣಕಾಸು ಮಂತ್ರಿಯಾಗಿದ್ದರು. ದಾಸಪ್ಪನವರು 1954ರಲ್ಲಿ ಭಾರತದ ರಾಜ್ಯಸಭೆಯ ಸದಸ್ಯರಾದರು. 1957 ಮತ್ತು 1962ರ ಮಹಾಚುನಾವಣೆಗಳಲ್ಲಿ ದಾಸಪ್ಪನವರು ಲೋಕಸಭೆಗೆ ಚುನಾಯಿತರಾಗಿದ್ದರು. ಇವರು 1963ರಲ್ಲಿ ಕೇಂದ್ರ ಮಂತ್ರಿ ಮಂಡಲದಲ್ಲಿ ರೈಲ್ವೆ ಸಚಿವರಾದರು. ಅನಂತರ ಕೈಗಾರಿಕಾ ಸಚಿವರೂ ಆದರು. ಕೈಗಾರಿಕಾ ಸಚಿವರಾಗಿರುವಾಗಲೇ ದಾಸಪ್ಪನವರು 29.10.1964ರಲ್ಲಿ ದೆಹಲಿಯಲ್ಲಿ ನಿಧನರಾದರು.

ಎರಡನೆಯವರು ವೀರೇಂದ್ರ ಪಾಟೀಲರು: ಇವರು ಗುಲ್ಬರ್ಗ ಜಿಲ್ಲೆಯ ಚಿಂಚೋಳಿಯಲ್ಲಿ 6.2.1924 ರಂದು ಜನಿಸಿದರು. 1968ರಿಂದ 1971ರವರೆಗೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಹಾಗೂ 1989ರಿಂದ 90ರವರೆಗೆ ನ್ಯಾಯವಾದಿ, ರಾಜಕಾರಣಿ, ಸಂಘಟಕ ಮತ್ತು ಆಡಳಿತಗಾರರಾಗಿದ್ದರು. ಇವರು ಉಸ್ಮಾನಿಯ ವಿಶ್ವವಿದ್ಯಾನಿಲಯದಿಂದ ನ್ಯಾಯಶಾಸ್ತ್ರ (ಲಾ) ಪದವೀಧರರಾಗಿ 1947ರಲ್ಲಿ ವಕೀಲರಾಗಿ ತಮ್ಮ ವೃತ್ತಿಯನ್ನು ಆರಂಭಿಸಿದರು. ಅಲ್ಪಕಾಲದಲ್ಲಿಯೇ ವಕೀಲರ ಪದವಿಯನ್ನು ಬಿಟ್ಟು, ರಝಾಕಾರರ ಹಾವಳಿಯನ್ನು ಹತ್ತಿಕ್ಕುವ ಆಂದೋಲನದಲ್ಲಿ ಪಾಟೀಲರು ಸಕ್ರಿಯ ಪಾತ್ರ ವಹಿಸಿದ್ದರು. ಹೈದರಾಬಾದಿನ ಪೊಲೀಸ್ ಆಕ್ಷನ್ ನಂತರ ಪಾಟೀಲರು ಪೂರ್ಣಾವಧಿ ಕಾಂಗ್ರೆಸ್ ಕಾರ್ಯಕರ್ತರಾಗಿ ಹಾಗೂ ಪ್ರಾಂತ್ಯಗಳ ಭಾಷಾವಾರು ಪುನರ‍್ರಚನೆಯ ಕಾಲದವರೆಗೆ ಪ್ರಾದೇಶಿಕ ಕಾಂಗ್ರೆಸ್





ಎಚ್.ಸಿ.ದಾಸಪ್ಪ ವೀರೇಂದ್ರ ಪಾಟೀಲ

ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿದ್ದರು.

ಪಾಟೀಲರು ಹೈದರಾಬಾದ್ ರಾಜ್ಯದ ಪ್ರಥಮ ಸಾರ್ವತ್ರಿಕ ಚುನಾವಣೆಯಲ್ಲಿ ಅಳಂದ ಕ್ಷೇತ್ರದಿಂದ ಆಯ್ಕೆಗೊಂಡರು. ಹೈದರಾಬಾದಿನ ಕೃಷಿ ಕಾಯಿದೆ ಸಮಿತಿಯೂ ಸೇರಿದಂತೆ ಅನೇಕ ಸಮಿತಿಗಳ ಸದಸ್ಯರಾಗಿ ಪಾಟೀಲರು ಕೆಲಸ ಮಾಡಿದರು. 1957ರ ಚುನಾವಣೆಯಲ್ಲಿ ಚಿಂಚೋಳಿ ಕ್ಷೇತ್ರದಿಂದ ಮೈಸೂರು ವಿಧಾನಸಭೆಗೆ ಚುನಾಯಿತರಾದರು. ಅದೇ ವರ್ಷ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರಾಗಿ ಆಯ್ಕೆಗೊಂಡದ್ದಲ್ಲದೆ, ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸದಸ್ಯತ್ವರಾಗಿಯೂ ಚುನಾಯಿತರಾದರು. ನಂತರ 1957 ಏಪ್ರಿಲ್‌ನಿಂದ 16.5.1958 ರವರೆಗೆ ಗೃಹ (ಹೋಂ) ಮತ್ತು ಕೈಗಾರಿಕಾ ಖಾತೆಗಳ ಉಪ ಮಂತ್ರಿಯಾಗಿದ್ದರು.

1961ರ ಫೆಬ್ರವರಿಯಿಂದ 1962ರವರೆಗೆ ಅಬಕಾರಿ, ಪಾನ ನಿರೋಧ, ಗ್ರಾಮೀಣ ಹಾಗೂ ಕೈಗಾರಿಕಾ ಖಾತೆಗಳ ಮಂತ್ರಿಯಾಗಿದ್ದರು. 1962ರಿಂದ 67ರವರೆಗೆ ಮತ್ತೆ ವಿಧಾನಸಭೆಗೆ ಚುನಾಯಿತರಾಗಿ, ಲೋಕೋಪಯೋಗಿ (ಪಿಡಬ್ಲ್ಯುಡಿ) ಮತ್ತು ವಿದ್ಯುತ್ ಇಲಾಖೆಯ ಮಂತ್ರಿಯಾದರು. ಇವರು 1968–1971ರವರೆಗೆ ಮುಖ್ಯಮಂತ್ರಿಯಾಗಿದ್ದರು. ವೀರೇಂದ್ರ ಪಾಟೀಲರ ಕಾಲದಲ್ಲಿ ಕನ್ನಡ ವಿಶ್ವಕೋಶ ಯೋಜನೆಯನ್ನು ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಗೆ ವಹಿಸಲಾಯಿತು. ಪ್ರಭಾವಶಾಲಿ ಮತ್ತು ಕ್ರಿಯಾತ್ಮಕ ಮುಖ್ಯಮಂತ್ರಿಗಳಾಗಿದ್ದ ಇವರು ಕಾವೇರಿ ನದಿಯ ಯೋಜನೆ, ಬೆಳಗಾಂ ಗಡಿವಿವಾದ ಮುಂತಾದ ವಿಷಯಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ದಿಟ್ಟತನದಿಂದ ತಮ್ಮ ಹಕ್ಕನ್ನು ಪ್ರತಿಪಾದಿಸಿದ್ದರು. 1968ರಲ್ಲಿ ಕಾಂಗ್ರೆಸ್‌ನಲ್ಲಿ ಬಿಕ್ಕಟ್ಟು ಉಂಟಾದಾಗ ಅದು ಒಡೆಯದಂತೆ ಪ್ರಯತ್ನಿಸಿದ ಪ್ರಮುಖ ವ್ಯಕ್ತಿಗಳಲ್ಲಿ ಪಾಟೀಲರೂ ಒಬ್ಬರು.

ಮುಂದೆ ಕಾಂಗ್ರೆಸ್‌ನಲ್ಲಿ ಒಡಕುಂಟಾದಾಗ, ನಿಜಲಿಂಗಪ್ಪನವರು ಅಧ್ಯಕ್ಷರಾಗಿದ್ದ ಸಂಸ್ಥಾ ಕಾಂಗ್ರೆಸ್ಸನ್ನೇ ಪಾಟೀಲರು ಸೇರಿಕೊಂಡರು. ಪಾಟೀಲರು ಸ್ವಲ್ಪ ಸಮಯ, ರಾಜ್ಯಸಭಾ ಸದಸ್ಯರೂ ಹಾಗೂ ರಾಜ್ಯ ಜನತಾ ಪಕ್ಷದ ಅಧ್ಯಕ್ಷರೂ ಆಗಿದ್ದರು. 1978ರಲ್ಲಿ ಚಿಕ್ಕಮಗಳೂರು ಲೋಕಸಭಾ ಕ್ಷೇತ್ರ ಉಪಚುನಾವಣೆಗೆ ಪ್ರಧಾನಿ ಇಂದಿರಾ ಗಾಂಧಿಯವರು ಸ್ಪರ್ಧಿಸಿದಾಗ ಅವರಿಗೆ ಎದುರಾಗಿ ಜನತಾ ಪಕ್ಷದ ಅಭ್ಯರ್ಥಿಯಾಗಿ ಇವರು ಸ್ಪರ್ಧಿಸಿದ್ದರು. ಪಾಟೀಲರು ಚುನಾವಣೆಯಲ್ಲಿ ಸೋತರೂ, ಇವರು ಗಳಿಸಿದ ಮತಗಳು ಗಣನೀಯವಾಗಿದ್ದವು. ಮತ್ತೆ ಪಾಟೀಲರು ಕಾಂಗ್ರೆಸ್ ಪಕ್ಷ ಸೇರಿದರು. 1980ರಲ್ಲಿ ಪಾಟೀಲರು ಇಂದಿರಾ ಗಾಂಧಿಯವರ ಸಂಪುಟದಲ್ಲಿ ಉತ್ತಮ ಕಾರ್ಯವನ್ನು ಮಾಡಿದರು. ನಂತರ ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿ ಕೆಲಸ ಮಾಡಿ, 1989ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಬಹುಮತ ಗಳಿಸುವುದರಲ್ಲಿ ಪಾಟೀಲರು ಯಶಸ್ವಿಯಾದರು. ಮಾತ್ರವಲ್ಲ, ಅವರು ಎರಡನೇ ಬಾರಿ ಮುಖ್ಯಮಂತ್ರಿಯೂ ಆದರು. ಅಂತಿಮವಾಗಿ ವೀರೇಂದ್ರ ಪಾಟೀಲರು 1997ರ ಮಾರ್ಚ್‌ನಲ್ಲಿ ನಿಧನರಾದರು.

ಮೂರನೆಯವರು ಶಂಕರ ದತ್ತಾತ್ರೇಯ ದೇವ್: ಇವರು ಭೋರ್ ಎಂಬಲ್ಲಿ ಚಿತ್‌ಪಾವನ್ ಬ್ರಾಹ್ಮಣ ಕುಟುಂಬದಲ್ಲಿ 4.1.1894ರಂದು ಜನಿಸಿದರು. ಇವರ ತಂದೆ ದತ್ತಾತ್ರೇಯ ನಾರಾಯಣ ದೇವ್ ಹಾಗೂ ತಾಯಿ ಗಂಗೂಬಾಯಿ. ಇವರ ತಂದೆ ಕೂಲಿ ಕೆಲಸ ಮಾಡಿ ಇಡೀ ಕುಟುಂಬವನ್ನು ಸಾಕುತ್ತಿದ್ದರು. ದತ್ತಾತ್ರೇಯನಿಗೆ ಕೇವಲ ಎರಡೂ ವರ್ಷ ವಯಸ್ಸಾಗಿದ್ದಾಗಲೇ ಇವರ ತಾಯಿ ನಿಧನರಾದರು. ದತ್ತಾತ್ರೇಯನ ಪೋಷಣೆಯ ಜವಾಬ್ದಾರಿಯನ್ನು ದತ್ತಾತ್ರೇಯನ ಅಜ್ಜ ವಹಿಸಿಕೊಂಡರು. ಚಿಕ್ಕಪ್ಪನವರ ಸಹಾಯದಿಂದ ದತ್ತಾತ್ರೇಯರು ಮೆಟ್ರಿಕ್ಯುಲೇಷನ್‌ವರೆಗೆ ಓದಿದರು. ಆದರೆ ಇವರು ಪರೀಕ್ಷೆಯಲ್ಲಿ ತೇರ್ಗಡೆಯಾಗಲಿಲ್ಲ. ದತ್ತಾತ್ರೇಯರು ಮನೆಯನ್ನು ಬಿಟ್ಟು, ಬರೋಡಕ್ಕೆ ಹೋಗಿ, ಅಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಿದರು. ಅಲ್ಲಿ ವಿನೋಬಾ ಭಾವೆಯರು ದತ್ತಾತ್ರೇಯರ ಸಹಪಾಠಿಯಾಗಿದ್ದರು. ದತ್ತಾತ್ರೇಯರು ಉನ್ನತ ಶಿಕ್ಷಣಕ್ಕಾಗಿ ಮುಂಬಯಿಗೆ ಹೋಗಿ 1918ರಲ್ಲಿ ಬಿ.ಎ. ಪದವಿಯನ್ನು ಪಡೆದರು. ಅವರು ಎಲ್‌ಎಲ್‌ಬಿ ಸೇರಿದರು. ಮೊದಲನೆ ವರ್ಷ ಮುಗಿಯುವ ಮೊದಲೇ ತಮ್ಮ ವಿದ್ಯಾಭ್ಯಾಸವನ್ನು ಬಿಟ್ಟು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡರು.

ಗಾಂಧೀಜಿಯವರು ಬಿಹಾರದ ಚಂಪಾರಣ್ಯದಲ್ಲಿ ಸತ್ಯಾಗ್ರಹ ನಡೆಸುತ್ತಿದ್ದಾಗ ಅಲ್ಲಿಗೆ ಹೋದ ದತ್ತಾತ್ರೇಯರು, ರಾಜೇಂದ್ರ ಪ್ರಸಾದರೊಡನೆ ಹಳ್ಳಿಗಳನ್ನು ಸುತ್ತಿ ಸತ್ಯಾಗ್ರಹಕ್ಕೆ ಜನರನ್ನು ಹುರಿದುಂಬಿಸಿದರು. ಅನಂತರ ಇವರು ಪುಣೆಗೆ ಹಿಂದಿರುಗಿ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮದಲ್ಲಿ ನಿರತರಾದರು. ದತ್ತಾತ್ರೇಯರು ಸ್ವಾತಂತ್ರ್ಯ ಸಾಧನೆಯ ಉದ್ದೇಶದಿಂದ ಆಜೀವ ಬ್ರಹ್ಮಚಾರಿಯಾಗಿ ಉಳಿದರು.

ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಇವರು ಅನೇಕ ಸಾರಿ ಸೆರೆಮನೆಯನ್ನು ಸೇರಬೇಕಾಯಿತು. 1921ರಲ್ಲಿ ಪುಣೆ ಜಿಲ್ಲೆಯ ಮುಲ್ಲಿ ಎಂಬಲ್ಲಿ ಟಾಟಾ ಕಂಪನಿಯವರು ತಮ್ಮ ಉದ್ಯಮಕ್ಕಾಗಿ ಬಡ ರೈತರಿಂದ ಅನ್ಯಾಯವಾಗಿ ಜಮೀನನ್ನು ಕಸಿಯಲು ಉದ್ಯುಕ್ತರಾದಾಗ, ಸೇನಾಪತಿ ಬಾಪಟರೊಡನೆ ಸೇರಿ ದತ್ತಾತ್ರೇಯರು ಸತ್ಯಾಗ್ರಹವನ್ನು ನಡೆಸಿದರು. ಇದರಿಂದ ದತ್ತಾತ್ರೇಯರಿಗೆ ಸೆರೆಮನೆ ಶಿಕ್ಷೆಯಾಯಿತು.

ಜೊತೆಯ ಸೆರೆಯಾಳುಗಳೊಡನೆ ದತ್ತಾತ್ರೇಯರು ಉಪವಾಸ ಮಾಡಿದರು. ಜೈಲಿನ ನಿಯಮದ ಪ್ರಕಾರ ಕೆಲಸ ಮಾಡಲಿಲ್ಲವೆಂದು ದತ್ತಾತ್ರೇಯರಿಗೆ ಮೂವತ್ತು ಛಡಿ ಏಟಿನ ಶಿಕ್ಷೆಯನ್ನು ವಿಧಿಸಲಾಯಿತು. ದತ್ತಾತ್ರೇಯರು ಒಂದು ಛಡಿ ಏಟು ಬಿದ್ದಾಗಲೂ ಮಹಾತ್ಮ ಗಾಂಧೀಜೀಕಿ ಜೈ ಎಂದು ಕೂಗುತ್ತಿದ್ದರು. ದತ್ತಾತ್ರೇಯರ ಈ ಪ್ರಕರಣದಿಂದ ಇವರ (ದತ್ತಾತ್ರೇಯರ) ಹೆಸರು ದೇಶಾದ್ಯಂತ ಪ್ರಚಾರವಾಯಿತು.

ಗಾಂಧೀಜಿಯವರ ಅಸಹಕಾರ ಚಳವಳಿಯ ಧ್ಯೇಯ ಹಾಗೂ ಉದ್ದೇಶಗಳನ್ನು ಪ್ರಚಾರ ಮಾಡಲು 1921ರಲ್ಲಿ ದತ್ತಾತ್ರೇಯರು ಪುಣೆಯಲ್ಲಿ ಅಸಹಕಾರ ಸಮಿತಿಯನ್ನು ಸ್ಥಾಪಿಸಿದರು. 1923ರಲ್ಲಿ ಮಹಾರಾಷ್ಟ್ರ ಪ್ರಾಂತೀಯ ಕಾಂಗ್ರೆಸ್ ಸ್ಥಾಪಿಸಿ, 1930ರವರೆಗೆ ಕಾರ್ಯದರ್ಶಿಯಾಗಿಯೂ ಅನಂತರ ಪ್ರಾಂತೀಯ ಸಮಿತಿಯ ಅಧ್ಯಕ್ಷರಾಗಿಯೂ ಕೆಲಸ ಮಾಡಿದರು. ಎರಡು ದಶಕಗಳ ಕಾಲ ಮಹಾರಾಷ್ಟ್ರದಲ್ಲಿ ದತ್ತಾತ್ರೇಯರು ಕಾಂಗ್ರೆಸ್ಸಿನ ಅಗ್ರಗಣ್ಯ ನಾಯಕರೆನಿಸಿಕೊಂಡರು.

ಬಾರ್ಡೋಲಿ ಸತ್ಯಾಗ್ರಹದಲ್ಲಿ ದತ್ತಾತ್ರೇಯರು, ಸರ್ದಾರ್ ಪಟೇಲರಿಗೆ ಸಕ್ರಿಯ ಸಹಕಾರ ನೀಡಿದರು. ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದರಲ್ಲದೆ 1940ರಲ್ಲಿ ವೈಯಕ್ತಿಕ ಸತ್ಯಾಗ್ರಹದಲ್ಲಿ ಭಾಗವಹಿಸಿ ಒಂದೂವರೆ ವರ್ಷ ಜೈಲುವಾಸವನ್ನು ಅನುಭವಿಸಿದರು. ದತ್ತಾತ್ರೇಯರನ್ನು 1942ರ ಚಳುವಳಿಯ ಸಮಯದಲ್ಲಿಯೂ ಬ್ರಿಟಿಷ್ ಸರ್ಕಾರವು ಹೌಸ್ ಅರೆಸ್ಟ್‌ನಲ್ಲಿ ಇಟ್ಟಿತ್ತು. 1946ರಿಂದ 1950ರವರೆಗೆ ದತ್ತಾತ್ರೇಯರು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾಗಿದ್ದರು.

ಹಿಂದೂ ತತ್ತ್ವಶಾಸ್ತ್ರ ಮತ್ತು ಗಾಂಧಿ ವಿಚಾರದಲ್ಲಿ ಪರಿಣಿತರಾಗಿದ್ದ ದತ್ತಾತ್ರೇಯರು ಪ್ರಸಿದ್ಧ ಬರಹಗಾರರೂ ಮತ್ತು ಪತ್ರಕರ್ತರೂ ಆಗಿದ್ದರು. 1920 ರಲ್ಲಿ ಪುಣೆಯ ಲೋಕಸಂಗ್ರಹ ಸಾಪ್ತಾಹಿಕ ಸಂಪಾದಕರಲ್ಲಿ ದತ್ತಾತ್ರೇಯರೂ ಇದ್ದರು. ಸ್ವರಾಜ್ಯ ಪತ್ರಿಕೆ (1925), ಲೋಕಶಕ್ತಿ ದಿನಪತ್ರಿಕೆ (1938) ಸತ್ಯಾಗ್ರಹ ವಾರಪತ್ರಿಕೆ (1940) ಮತ್ತು ನವಭಾರತ (1940) ಇವು ದತ್ತಾತ್ರೇಯರು ಆರಂಭಿಸಿದ ಪತ್ರಿಕೆಗಳು. ರಾಷ್ಟ್ರೀಯ ವಿಚಾರಗಳನ್ನು ಜನರಿಗೆ ಮುಟ್ಟಿಸುವ ಉದ್ದೇಶದಿಂದ ಸುಲಭ ರಾಷ್ಟ್ರೀಯ ಗ್ರಂಥ ಮಾಲೆಯನ್ನೂ ಆರಂಭಿಸಿದರು. ಮರಾಠಿ ಭಾಷೆಯಲ್ಲಿ ಪ್ರಕಟಿಸಿದ ಸ್ವರಾಜ್ಯ ಸೋಪಾನ್ (ದತ್ತಾತ್ರೇಯರು ಬರೆದ ಅಸಹಕಾರ ಚಳುವಳಿಯನ್ನು ಕುರಿತ ಲೇಖನಗಳು). ಉಪನಿಷದಾತೀಲ್ ದ ಹಾ ಗೋಷ್ಠಿ (ಉಪನಿಷತ್ತಿನ ಹತ್ತು ಕಥೆಗಳು), ಉಪನಿತ್ಸಾರ್ ಭಗವಾನ್ ಬುದ್ಧ ಮರಾಠಿಯಲ್ಲಿ ಬರೆದ ಲೇಖನಗಳು. ಅಲ್ಲದೆ ಗಾಂಧೀಜಿಯವರ ಮರಾಠೀ ಅನುವಾದಗಳನ್ನು ಅಸಹಕಾರ ಯೋಗ ಮತ್ತು ಮಹಾತ್ಮಾ ಗಾಂಧಿಯಾಚಾ ಕಾರಾಗೃಹಾನುಭವಂ ಎಂಬ ಎರಡು ಪುಸ್ತಕಗಳನ್ನು ದತ್ತಾತ್ರೇಯರು ಪ್ರಕಟಿಸಿದ್ದಾರೆ.

ಆಚಾರ್ಯ ವಿನೋಬಾ ಭಾವೆಯವರ ಭೂದಾನ ಮತ್ತು ಗ್ರಾಮ ದಾನ ಚಳುವಳಿಗಳಲ್ಲಿ ದತ್ತಾತ್ರೇಯರು ಸಕ್ರಿಯವಾಗಿ ಭಾಗವಹಿಸಿ ದೇಶಾದ್ಯಂತ ಪಾದಯಾತ್ರೆಯನ್ನು ಕೈಗೊಂಡಿದ್ದರು. 1962ರಲ್ಲಿ ಭಾರತದ ಮೇಲೆ ಚೀನಾ ಆಕ್ರಮಣ ನಡೆಸಿದಾಗ ಚೀನಾದ ನೀತಿಯನ್ನು ಅಹಿಂಸಾತ್ಮಕವಾಗಿ ಪ್ರತಿಭಟಿಸುವ ದೃಷ್ಟಿಯಿಂದ ದತ್ತಾತ್ರೇಯರು ಅಂತರ ರಾಜ್ಯ ಶಾಂತಿ ಸೇವಕರ ತಂಡವನ್ನು ಸಜ್ಜುಗೊಳಿಸಿ, ಚೀನಾ ದೇಶಕ್ಕೆ ಪಾದಯಾತ್ರೆ ಹೋಗುವ ಪ್ರಯತ್ನ ಮಾಡಿದರು. ಆದರೆ ನೆರೆಯ ರಾಷ್ಟ್ರಗಳು ಅವಕಾಶ ನೀಡಲಿಲ್ಲ. ಹೀಗಾಗಿ ದತ್ತಾತ್ರೇಯರು ಈ ಪ್ರಯತ್ನವನ್ನು ಕೈಬಿಡಬೇಕಾಯಿತು.

ಸಂಯುಕ್ತ ಮಹಾರಾಷ್ಟ್ರದ ಆಂದೋಳನದ ನಾಯಕತ್ವ ವಹಿಸಿದ್ದ ದತ್ತಾತ್ರೇಯರು ಈ ಚಳುವಳಿ ಹಿಂಸಾರೂಪವನ್ನು ತಾಳಿದಾಗ ಪರಿಸ್ಥಿತಿಯನ್ನು ಹತೋಟಿಗೆ ತರಲು ಮೂವತ್ತು ದಿನಗಳ ಉಪವಾಸ ಸತ್ಯಾಗ್ರಹ ಮಾಡಿದ್ದರು.

ಸ್ವಾತಂತ್ರ್ಯ ಹೋರಾಟಗಾರರನ್ನೂ, ಕಾರ್ಯಕರ್ತರನ್ನೂ ತರಬೇತು ಮಾಡಲು ಪುಣೆಯ ಹತ್ತಿರದ ಸಾಸ್‌ವಾಡದಲ್ಲಿ 1934ರಲ್ಲಿ ದತ್ತಾತ್ರೇಯರು ಆರಂಭಿಸಿದ್ದ ಆಶ್ರಮ, ಅನೇಕ ಕಾರ್ಯಕರ್ತರ ತರಬೇತು ಕೇಂದ್ರವಾಗಿತ್ತು. ದತ್ತಾತ್ರೇಯರು 30.12.1974ರಂದು ನಿಧನರಾದರು.



ಮೈಸೂರು–ಬೆಂಗಳೂರು ದಶಪಥ ಹೆದ್ದಾರಿಯಲ್ಲಿರುವ 11 ಕೆ.ವಿ ವಿದ್ಯುತ್ ಕಂಬಗಳ ಪರಿಶೀಲನೆ ನಡೆಸುತ್ತಿರುವ ಅಧಿಕಾರಿಗಳು

ಮೈಸೂರು–ಬೆಂಗಳೂರು ದಶಪಥ ರಸ್ತೆಯ ವಿದ್ಯುತ್ ಕಂಬಗಳಿಗೆ ಕದಿಯಲು ಸಾಧ್ಯವಾಗದ ರೀತಿ ಆ್ಯಂಗಲರ್ ಅಳವಡಿಕೆ

ಮೈಸೂರು, ಫೆ.2(ಎಂಕೆ)– ಮೈಸೂರು–ಬೆಂಗಳೂರು ದಶಪಥ ಹೆದ್ದಾರಿಯಲ್ಲಿ ಶ್ರೀರಂಗಪಟ್ಟಣದಿಂದ ಮದ್ದೂರಿನವರೆಗೆ ರಸ್ತೆ ಬದಿಯಲ್ಲಿರುವ 11 ಕೆ.ವಿ ವಿದ್ಯುತ್ ಕಂಬಗಳಿಗೆ ಕಳ್ಳತನವಾಗದಂತಹ ಆ್ಯಂಗಲರ್(ಕಬ್ಬಿಣದ ಅಡ್ಡಪಟ್ಟಿ)ಗಳನ್ನು ಅಳವಡಿಸಲು ನಿರ್ಧರಿಸಲಾಗಿದೆ.

ಈ ಸಂಬಂಧ ಮಂಡ್ಯ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಜಯರಾಮ್ ಸ್ವರೂಪ್ ಅಧ್ಯಕ್ಷತೆಯಲ್ಲಿ ಚೆಸ್ಕಾಂ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ನಿರ್ಧರಿಸಲಾಯಿತು. ಎತ್ತರದ 11 ಕೆ.ವಿ ವಿದ್ಯುತ್ ಕಂಬಗಳಿಗೆ ಅಳವಡಿಸಿದ್ದ ಆ್ಯಂಗಲರ್‌ಗಳನ್ನು ಕಳವು ಮಾಡಿರುವುದರಿಂದ ವಿದ್ಯುತ್ ಕಂಬಗಳು ನೆಲಕ್ಕುರುಳುವ ಸಾಧ್ಯತೆ ಹಿನ್ನೆಲೆಯಲ್ಲಿ ತ್ವರಿತವಾಗಿ ಹೊಸ ರೀತಿ ಆ್ಯಂಗಲರ್‌ಗಳನ್ನು ಅಳವಡಿಸಿಸುವಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಸೂಚಿಸಲಾಗಿದೆ ಅಲ್ಲದೆ ಆ್ಯಂಗಲರ್‌ಗಳು ಕಳ್ಳತನವಾಗದಂತೆ ಭಿನ್ನವಾಗಿ ಅಳವಡಿಸಲು ತಿಳಿಸಲಾಗಿದೆ. ಈ ಸಂಬಂಧ ಚೆಸ್ಕಾಂ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಗುರುವಾರ ಸ್ಥಳ ಪರಿಶೀಲನೆ ನಡೆಸಿದ್ದಾರೆ.

ತೆರೆಗೆ ಬರಲಿದೆ ಮೈಕಲ್ ಜಾಕ್ಸನ್ ಜೀವನ ಚರಿತ್ರೆ

ನವದೆಹಲಿ: ಡ್ಯಾನ್ಸ್ ಜಗತ್ತಿನ ಮಹಾಗುರು ಪಾಪ್ ಕಿಂಗ್ ಮೈಕಲ್ ಜಾಕ್ಸನ್ ಜೀವನದ ಕಥೆ ತೆರೆಗೆ ತರಲು ತಯಾರಿ ನಡೆಯುತ್ತಿದೆ. ತಮ್ಮ ಅದ್ಭುತ ಡ್ಯಾನ್ಸ್‌ನಿಂದ ಪ್ರೇಕ್ಷಕರಿಂದ ರಂಜಿಸಿದ್ದ ಡ್ಯಾನ್ಸ್ ಕಿಂಗ್ ಕಥೆ ಈಗ ಬಯೋಪಿಕ್ ಆಗುತ್ತಿದೆ. ಡ್ಯಾನ್ಸ್ ರಂಗದಲ್ಲಿ ಏನಾದರೂ ಸಾಧಿಸಬೇಕು ಎಂದು ಛಲ ಇಟ್ಟು ಕೊಂಡವರಿಗೆ ಮೈಕಲ್ ಜಾಕ್ಸನ್ ಎದುರಿಸಿದ ಸವಾಲುಗಳು, ಬೆಳೆದು ಬಂದ ದಾರಿ ತಿಳಿಸಿಕೊಡಲು ಸಿನಿಮಾ ರೂಪದಲ್ಲಿ ತಯಾರಿ ನಡೆಯುತ್ತಿದೆ. ಮೈಕಲ್ ಅವರ ಪಾತ್ರದಲ್ಲಿ ಅವರ ಸಹೋದರ ಸಂಬಂಧಿ ಜಾಫರ್ ಜಾಕ್ಸನ್ ನಟಿಸುತ್ತಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ನೂತನ ಅಧ್ಯಕ್ಷ ನಾಗರಾಜ್ ವಿ.ಭೈರಿ

ಮೈಸೂರು, ಫೆ.2(ಆರ್‌ಕೆಬಿ)- ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರಿನ 2023-24ನೇ ಸಾಲಿನ ನೂತನ ಪದಾಧಿಕಾರಿ ಆಯ್ಕೆ ನಡೆದು, ಅಧ್ಯಕ್ಷರಾಗಿ ನಾಗರಾಜ್ ವಿ.ಭೈರಿ ಆಯ್ಕೆಯಾಗಿದ್ದಾರೆ.



ನಾಗರಾಜ್ ವಿ.ಭೈರಿ

ನೂತನ ಪದಾಧಿಕಾರಿಗಳಾಗಿ ನಾಗರಾಜ್ ವಿ.ಬೈರಿ (ಅಧ್ಯಕ್ಷ), ವಿ.ಶ್ರೀನಾಥ್ (ಉಪಾಧ್ಯಕ್ಷ), ಕೆ.ಎಸ್.ಬಾಲಾಜಿ (ಕಾರ್ಯದರ್ಶಿ), ಎಸ್.ವಾಸುದೇವನ್ (ಜಂಟಿ ಕಾರ್ಯದರ್ಶಿ), ಸಿ.ಎಸ್. ಶ್ರೀಕಾಂತ್ (ಕೋಶಾಧಿಕಾರಿ), ಆರ್.ರಘುನಾಥ್ (ನಿರ್ಗಮಿತ ಅಧ್ಯಕ್ಷ), ಎ.ಎಸ್.ಯೋಗಾನರಸಿಂಹ (ಅಧ್ಯಕ್ಷ-ಚುನಾಯಿತ), ಎಂ.ಎಸ್.ರಾಮ ಪ್ರಸಾದ್, ಬಿ.ಎಸ್.ದಿನೇಶ್ (ಸಲಹೆಗಾರರು) ಆಯ್ಕೆಯಾಗಿದ್ದಾರೆ.

ಜನರಲ್ ಕೌನ್ಸಿಲ್ ಸದಸ್ಯರಾಗಿ ಎನ್.ಎಸ್.ಮುರಳೀಧರ್, ಕೆ.ಶ್ರೀರಾಮು, ಎಂ.ಸಿ.ಮಲ್ಲಿಕಾರ್ಜುನ, ಯು.ಎಂ.ಗುರುಶಾಂತಪ್ಪ, ಕಾರ್ಯಕಾರಿ ಸಮಿತಿ ಸದಸ್ಯರಾಗಿ ಜಿ.ಅಶೋಕ್, ಅಶ್ವಿನಿ ಆರ್.ಪಾಳೇಗಾರ್, ಬಿ.ಎಸ್.ಚಂದ್ರಶೇಖರ್ ಭಾರದ್ವಾಜ್, ಕೆ.ಯು.ಗಣಪತಿ, ಸಿ.ಡಿ.ಕೃಷ್ಣ, ಮಹಾಬಲೇಶ್ವರ ಬೈರಿ, ಕೆ.ಅರ್.ಪ್ರಭಾಕರರಾವ್, ಎಂ.ಡಿ.ಪ್ರವೀನ್ ಪಾಲ್, ಪಿ.ಪುಟ್ಟಸ್ವಾಮಿ, ಕೆ.ಎಂ.ರಘುನಾಥ್, ಕೆ.ಎನ್.ರವಿಶಂಕರ್, ಕೆ.ಸತೀಶ್ ಮೋಹನ್, ಎಸ್.ಶಶಿರಾಜ್ ಇತರರು ಆಯ್ಕೆಯಾಗಿದ್ದಾರೆ.

ವಿಶ್ವ ಪರಿಸರ ತಿಂಗಳ ಆಚರಣೆ ಸಮಿತಿ: ಎ.ಎಸ್.ಯೋಗಾನರಸಿಂಹ (ಅಧ್ಯಕ್ಷ), ವಿ.ಗುರುದತ್ (ಕಾರ್ಯದರ್ಶಿ), ಆರ್.ರಘುನಾಥ್ (ಸಲಹೆಗಾರ). **ಮೈ ರಿಯಾಲ್ಟಿ-2023:** ಉದಯ್ ಎಸ್.ಕುಮಾರ್ (ಅಧ್ಯಕ್ಷ), ಕೆ.ಸಿ.ನಂದಕುಮಾರ್ (ಕಾರ್ಯದರ್ಶಿ), ಯು.ಎಂ.ಗುರುಶಾಂತಪ್ಪ (ಸಲಹೆಗಾರ). **ಬಿಲ್ಡ್‌ಟೆಕ್- 2023:** ವೆಂಕಟೇಶ್ ಪ್ರಸಾದ್ (ಅಧ್ಯಕ್ಷ), ಎಚ್.ಎಸ್.ದೀಪಕ್ (ಕಾರ್ಯದರ್ಶಿ), ಕೆ.ಶ್ರೀರಾಮ್ (ಸಲಹೆಗಾರ).

ಹಸುವಿನ ಅರೆಬರೆ ಕಳೇಬರ; ಚಿರತೆ ದಾಳಿ ಶಂಕೆ: ಅರಣ್ಯ ಸಿಬ್ಬಂದಿ ನಕಾರ

ಮೈಸೂರು, ಫೆ.2(ಎಂಟಿವೈ)- ಮೈಸೂರಿನ ಲಾಲ್‌ಬಹದ್ದೂರ್ ಶಾಸ್ತ್ರಿ ನಗರದಲ್ಲಿ ಹಸುವಿನ ಕಳೇಬರ ಪತ್ತೆಯಾಗಿದ್ದು, ಚಿರತೆ ದಾಳಿಯ ಶಂಕೆ ವ್ಯಕ್ತವಾಗಿತ್ತು. ಅರಣ್ಯ ಇಲಾಖೆಯ ಅಧಿಕಾರಿಗಳು ಪರಿಶೀಲಿಸಿದ ಬಳಿಕ ಸಹಜ ಸಾವಿನ ನಾಯಿಗಳು ತಿಂದಿರುವುದು ಖಚಿತವಾಗಿದೆ.



ಲಾಲ್ ಬಹದ್ದೂರ್ ಶಾಸ್ತ್ರಿನಗರಕ್ಕೆ ಹೊಂದಿಕೊಂಡಂತೆ ಇರುವ ಖಾಲಿ ಜಾಗದಲ್ಲಿ 2-3 ದಿನದ ಹಿಂದೆಯೇ ಹಸು ಮೃತಪಟ್ಟಿದೆ. ಇಲ್ಲವೆ ಮನೆಯಲ್ಲೇ ಸತ್ತಂತಹ ಹಸುವಿನ ದೇಹವನ್ನು ಯಾರೋ ಖಾಲಿ ಜಾಗಕ್ಕೆ ತಂದು ಇಟ್ಟಿರಬಹುದು. 2 ದಿನದ ನಂತರ ಕೊಳೆಯಲಾರಂಭಿಸಿರುವುದರಿಂದ ಬೀದಿನಾಯಿಗಳು ಅದರ ತಲೆ ಭಾಗವನ್ನಷ್ಟೇ ಸೇವಿಸಿವೆ. ಗುರುವಾರ ಸಂಜೆ ವಾಯುವಿಹಾರಕ್ಕೆ ತೆರಳಿದ್ದವರು ಹಸುವಿನ ಅರೆಬರೆ ಕಳೇಬರ ಕಂಡು ಚಿರತೆ ದಾಳಿ ನಡೆಸಿ, ಕೊಂದಿರಬಹುದು ಎಂಬ ಶಂಕೆ ವ್ಯಕ್ತಪಡಿಸಿದ್ದಾರೆ.

ಸ್ಥಳಕ್ಕೆ ಆಗಮಿಸಿದ ಅರಣ್ಯ ಸಿಬ್ಬಂದಿ ಪರಿಶೀಲನೆ ನಡೆಸಿದಾಗ ಚಿರತೆ ದಾಳಿ ಮಾಡಿರುವ ಯಾವುದೇ ಕುರುಹುಗಳು ಹಸುವಿನ ಕಳೇಬರದ ಮೇಲೆ ಕಂಡು ಬಂದಿಲ್ಲ. ಅಲ್ಲದೇ ಅಕ್ಕ-ಪಕ್ಕದಲ್ಲಿ ಚಿರತೆ ಹೆಜ್ಜೆ ಗುರುತುಗಳು ಲಭ್ಯವಾಗಿಲ್ಲ. ಕೇವಲ ತಲೆ ಭಾಗವನ್ನಷ್ಟೇ ತಿಂದಿರುವುದರಿಂದ ಇದು ಚಿರತೆ ದಾಳಿಯಲ್ಲ ಎಂದು ದೃಢಪಟ್ಟಿದೆ. ಚಿರತೆ ದಾಳಿ ನಡೆಸಿ ಕೊಂದಿದ್ದರೆ, ತೊಡೆ ಭಾಗ, ಕೆಚ್ಚಲಿನ ಭಾಗ ಭಕ್ಷಿಸುತ್ತಿತ್ತು. ಆದರೆ, ಈ ಪ್ರಕರಣದಲ್ಲಿ ತಲೆ ಕಡೆ ಕಿತ್ತು ತಿಂದಿರುವುದರಿಂದ ನಾಯಿಗಳದ್ದೇ ಕೆಲಸ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳೀಯರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ.

ಸೆಸ್ಕ್ ಜಾಗೃತ ದಳದ ಕ್ಷಿಪ್ರ ಕಾರ್ಯಾಚರಣೆ

26 ವಿದ್ಯುತ್ ಕಳವು ಪ್ರಕರಣ ಪತ್ತೆ



ಮೈಸೂರು, ಫೆ.2(ಆರ್‌ಕೆ)- ಡಿವೈಎಸ್‌ಪಿ ಧರ್ಮೇಂದ್ರ ನೇತೃತ್ವದ ಸೆಸ್ಕ್ ಜಾಗೃತ ದಳವು ಗುರುವಾರ ಮೈಸೂರು, ಚಾಮಜರಾಜನಗರ, ಮಂಡ್ಯ ಹಾಗೂ ಹಾಸನ ಜಿಲ್ಲೆಗಳ ವಿವಿಧ ಸ್ಥಳಗಳಲ್ಲಿ ದಾಳಿ ನಡೆಸಿ, ವಿದ್ಯುತ್ ಕಳವು ಹಾಗೂ ದುರುಪಯೋಗಪಡಿಸಿಕೊಳ್ಳುತ್ತಿದ್ದ 26 ಪ್ರಕರಣಗಳನ್ನು ಪತ್ತೆಹಚ್ಚಿವೆ. ನಂಜನಗೂಡು ತಾಲೂಕು, ತಾಂಡವಪುರ, ಸುತ್ತೂರು, ಚಾಮರಾಜನಗರ, ಮಂಡ್ಯ ಹಾಗೂ ಹಾಸನ ವ್ಯಾಪ್ತಿಯಲ್ಲಿ ದಾಳಿ ನಡೆಸಿದಾಗ ಅನಧಿಕೃತವಾಗಿ ಸಂಪರ್ಕದೊಂದಿಗೆ ವಿದ್ಯುತ್ ಕಳವು ಮಾಡುತ್ತಿದ್ದ 26 ಮಂದಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಸೆಸ್ಕ್ ಜಾಗೃತ ದಳದ ಎಸ್‌ಪಿ ರಶ್ಮಿ ಪರಡ್ಡಿ ಅವರ ಮಾರ್ಗದರ್ಶನದಲ್ಲಿ, ಡಿವೈಎಸ್ಪಿ ಧರ್ಮೇಂದ್ರ ನೇತೃತ್ವದಲ್ಲಿ ನಡೆದ ದಾಳಿಯ ಮೇಲುಸ್ತುವಾರಿಯನ್ನು ಸೆಸ್ಕ್ ಎಕ್ಸಿಕ್ಯೂಟಿವ್ ಇಂಜಿನಿಯರ್ ತಬ್ಬಸುಮ್ ಅಫ್ಜಾಬಾನು ವಹಿಸಿದ್ದರು.

ಸೆಸ್ಕ್ ಜಾಗೃತ ದಳದ ಇನ್ಸ್‌ಪೆಕ್ಟರ್‌ಗಳಾದ ಎಂ.ಶಿವಮಾದಯ್ಯ, ಅಜರುದ್ದೀನ್, ಮಹದೇವಸ್ವಾಮಿ, ಸೆಸ್ಕ್ ಅಧಿಕಾರಿಗಳಾದ ಅವೀಶ್‌ಕುಮಾರ್ ಪಾಠಕ್, ಸೈಯ್ಯದ್ ಅಬ್ದುಲ್ ರಹೀಮ್, ಬಿ.ಡಿ.ತಿಲಕ್, ಸೈಯ್ಯದಾ ಕೌಸರ್ ಬೇಗಂ, ತೋಂಟಾರಾಧ್ಯ, ಬಿ.ಮಣಿಗಂಡಸ್ವಾಮಿ ಸಿಬ್ಬಂದಿಗಳಾದ ವಿ.ಆರ್.ಶೇಷಾದ್ರಿ, ಎಸ್.ನಿರಂಜನ್, ಎಸ್.ವಿ.ರಮೇಶ್, ಶೈಲೇಶ್‌ಕುಮಾರ್ ಹಾಗೂ ಉದಯಕುಮಾರ್ ದಾಳಿಯಲ್ಲಿ ಭಾಗವಹಿಸಿದ್ದರು.

ಹಣ ಡಬಲ್ ಮಾಡಿಕೊಡುವುದಾಗಿ 1.78 ಲಕ್ಷ ಆನ್‌ಲೈನ್‌ನಲ್ಲಿ ವಂಚನೆ

ಮೈಸೂರು, ಫೆ.2- ಹಣ ಹೂಡಿಕೆ ಮಾಡಿದರೆ ಡಬಲ್ ಮಾಡಿಕೊಡುವುದಾಗಿ ನಂಬಿಸಿ 1.78 ಲಕ್ಷ ಆನ್‌ಲೈನ್ ಮೂಲಕ ವಂಚಿಸಿರುವ ಬಗ್ಗೆ ವರದಿಯಾಗಿದೆ.

ಕೆ.ಆರ್.ಮೊಹಲ್ಲಾ, ಹೊಸ ಬಂಡಿಕೇರಿ ನಿವಾಸಿ ಜೆ.ಎಸ್.ರಾಜಶೇಖರ್ (31) ವಂಚನೆಗೊಳಗಾದವರಾಗಿದ್ದು, ಟೆಲಿಗ್ರಾಂ ಆ್ಯಪ್ ಮೂಲಕ ಪರಿಚಯವಾದ ಅಪರಿಚಿತ ವ್ಯಕ್ತಿ ಹಣ ಹೂಡಿಕೆ ಮಾಡಿದರೆ ಡಬಲ್ ಮಾಡಿಕೊಡುವುದಾಗಿ ತಿಳಿಸಿದ್ದು, ಅದನ್ನು ನಂಬಿದ ಅವರು, ಆನ್‌ಲೈನ್ ಮೂಲಕ 1,78,929 ರೂ. ವರ್ಗಾವಣೆ ಮಾಡಿ ಮೋಸ ಹೋಗಿದ್ದಾರೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಟಾಟಾ ಏಸ್ ಡಿಕ್ಕಿ: ಬೈಕ್ ಸವಾರ ಸಾವು

ಬನ್ನೂರು,ಫೆ.2- ಬೈಕ್‌ಗೆ ಟಾಟಾ ಏಸ್ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸಾವನ್ನಪ್ಪಿದ ಘಟನೆ ಮೈಸೂರು-ಮಳವಳ್ಳಿ ರಸ್ತೆಯ ಚಾಮನಹಳ್ಳಿ ಗ್ರಾಮದ ಬಳಿ ಸಂಭವಿಸಿದೆ. ಶ್ರೀರಂಗಪಟ್ಟಣ ತಾಲೂಕು ಮಾಡ್ರಹಳ್ಳಿ ನಿವಾಸಿ ಮಂಜುನಾಥ್ (33) ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಬನ್ನೂರಿನ ತವರು ಮನೆಯಲ್ಲಿದ್ದ ಪತ್ನಿ ನಿವ್ಯಾ(26) ಅವರನ್ನು ಜ.1ರಂದು ಬೆಳಗ್ಗೆ 6.30ರ ಸುಮಾರಿನಲ್ಲಿ ಮಲಿಯೂರಿನ ಎಸ್‌ಪಿಆರ್ ಕಾರ್ಖಾನೆಗೆ ಬಿಟ್ಟು ಮಂಜುನಾಥ್ ಬೈಕ್‌ನಲ್ಲಿ (ಕೆಎ 03 ಎಕ್ಸ್ 3030) ಹಿಂತಿರುಗುತ್ತಿದ್ದ ವೇಳೆ ಚಾಮನಹಳ್ಳಿ ಗ್ರಾಮದ ಬಳಿ ಬನ್ನೂರು ಕಡೆಯಿಂದ ಬಂದ ಟಾಟಾ ಏಸ್ (ಕೆಎ 11 ಬಿ 2483) ಇವರ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಅವರು ಮೃತಪಟ್ಟಿದ್ದಾರೆ. ಅಪಘಾತದ ನಂತರ ಟಾಟಾ ಏಸ್ ಚಾಲಕ ಪರಾರಿಯಾಗಿದ್ದಾನೆ. ಬನ್ನೂರು ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಗೋಡೌನ್ ಬಾಗಿಲು ಮೀಟಿ ಬಟ್ಟೆ ಕಳವು

ಮೈಸೂರು, ಫೆ.2- ಗೋಡೌನ್ ಬಾಗಿಲು ಮೀಟಿ ಲಕ್ಷಾಂತರ ರೂ. ಮೌಲ್ಯದ ಬಟ್ಟೆ ಕಳವು ಮಾಡಿರುವ ಘಟನೆ ದೇವರಾಜ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ದೇವರಾಜ ಮೊಹಲ್ಲಾದ ಹೆಚ್.ಆರ್.ರಸ್ತೆಯ ಕ್ರಾಸ್ ರಸ್ತೆ ಫುಟ್‌ಪಾತ್‌ನಲ್ಲಿ ಬಟ್ಟೆ ವ್ಯಾಪಾರ ಮಾಡುತ್ತಿದ್ದ ಎಂ.ಮಹೇಶ್, ಸಮೀಪದ ಗೋಡೌನ್‌ನಲ್ಲಿಟ್ಟಿದ್ದ ಲಕ್ಷಾಂತರು ಮೌಲ್ಯದ ಬಟ್ಟೆಯನ್ನು ಕಳವು ಮಾಡಲಾಗಿದೆ. ಜ.18ರ ರಾತ್ರಿ ಗೋಡೌನ್ ಬಾಗಿಲು ಮೀಟಿರುವ ಕಳ್ಳರು 8 ಸಾವಿರ ರೂ. ನಗದು, 6 ರಿಂದ 7 ಮೂಟೆ ಬಟ್ಟೆ ಕಳವು ಮಾಡಿದ್ದಾರೆ ಎಂದು ದೇವರಾಜ ಪೊಲೀಸ್ ಠಾಣೆಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ಮೈಸೂರು, ಫೆ.2- 2022-2023ನೇ ಸಾಲಿನ ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ-1, ಅಲೆಮಾರಿ, ಅರೆ ಅಲೆಮಾರಿಗೆ ಸೇರಿದ ವಿದ್ಯಾರ್ಥಿಗಳಿಂದ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ, ಶುಲ್ಕ ವಿನಾಯಿತಿ, ವಿದ್ಯಾಸಿರಿ-ಊಟ, ವಸತಿ ಸಹಾಯ ಯೋಜನೆಗೆ ಅನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ದಿನಾಂಕವನ್ನು ಫೆ.28ರವರೆಗೆ ವಿಸ್ತರಿಸಿದೆ. ವೆಬ್‌ಸೈಟ್ https://ssp.postmatric. karnataka. gov.in/ https:// bcwd.karnataka.gov.in, ದೂ. ಸಂಖ್ಯೆ: 0821-2342917 ಸಂಪರ್ಕಿಸಿ.

ವಿವಿಧ ಬೇಡಿಕೆಗಳಿಗೆ ಸರ್ಕಾರದಿಂದ ಸಕಾರಾತ್ಮಕ ಸ್ಪಂದನೆ

ಅಂಗನವಾಡಿ ಕಾರ್ಯಕರ್ತೆಯರ ಮುಷ್ಕರ ಅಂತ್ಯ



ಬೆಂಗಳೂರು, ಫೆ.2- ಗ್ರಾಚ್ಯುಟಿ ಸೇರಿ ವಿವಿಧ ಬೇಡಿಕೆಗಳಿಗೆ ಸರ್ಕಾರ ಸಕಾರಾತ್ಮಕವಾಗಿ ಸ್ಪಂದನೆ ನೀಡಿದ ಹಿನ್ನೆಲೆಯಲ್ಲಿ ನಗರದ ಫ್ರೀಡಂಪಾರ್ಕ್‌ನಲ್ಲಿ ಕಳೆದ 10 ದಿನಗಳಿಂದ ನಡೆಸುತ್ತಿದ್ದ ಪ್ರತಿಭಟನೆಯನ್ನು ಅಂಗನ ವಾಡಿ ಕಾರ್ಯಕರ್ತೆಯರು ವಾಪಸ್ ಪಡೆದಿದ್ದಾರೆ. ಸುಪ್ರೀಂಕೋರ್ಟ್ ಆದೇಶದಂತೆ ಗ್ರಾಚ್ಯುಟಿ ನೀಡಬೇಕು. ಶಾಲಾ ಪೂರ್ವ ಶಿಕ್ಷಣಕ್ಕೆ ಸಮಯ ನಿಗದಿ, ಪದೋನ್ನತಿ ಕುರಿತು ಆದೇಶ ವಾಪಸ್ ಸೇರಿ ಬಹುತೇಕ ಬೇಡಿಕೆಗಳಿಗೆ ಸರ್ಕಾರ ಸೂಕ್ತವಾಗಿ ಸ್ಪಂದಿಸಿದೆ. ಈ ಹಿನ್ನೆಲೆಯಲ್ಲಿ ರಾಜ್ಯದ ಹಲವೆಡೆಯಿಂದ ಸಾವಿರಾರು ಸಂಖ್ಯೆಯಲ್ಲಿ ಆಗಮಿಸಿ, ಜನವರಿ 23ರಿಂದ ನಡೆಸುತ್ತಿದ್ದ ಅನಿರ್ದಿಷ್ಟಾವಧಿ ಪ್ರತಿಭಟನೆ ಹಿಂಪಡೆಯಲಾಗಿದೆ ಎಂದು ಅಂಗನವಾಡಿ ನೌಕರರ ಸಂಘ ಘೋಷಿಸಿದೆ. ರಾಜ್ಯ ಸರ್ಕಾರದ ಪರವಾಗಿ ಸಚಿವ ಹಾಲಪ್ಪ ಧರಣಿ ನಿರತ ಅಂಗನವಾಡಿ ಕಾರ್ಯಕರ್ತೆಯರೊಂದಿಗೆ ಸಂಧಾನ ಸಭೆ ನಡೆಸಿದ್ದು, ಈ ಸಭೆ ಇದೀಗ ಯಶಸ್ವಿಯಾಗಿದೆ. ಅಂಗನವಾಡಿ ಕಾರ್ಯಕರ್ತರ ಬಹುತೇಕ ಬೇಡಿಕೆ ಈಡೇರಿಸುವುದಕ್ಕೆ ಒಪ್ಪಿಗೆ ಕೊಟ್ಟಿದ್ದೇವೆ. 10ರಿಂದ 1 ಗಂಟೆವರೆಗೆ ಕಾರ್ಯಕರ್ತರನ್ನು ಇತರೆ ಯಾವುದೇ ಕೆಲಸಕ್ಕೆ ನಿಯೋಜನೆ ಮಾಡುವ ಹಾಗಿಲ್ಲ ಎನ್ನುವ ಬೇಡಿಕೆಗೂ ನಾವು ಒಪ್ಪಿದ್ದೇವೆ. ಸಿಎಂ ಕೂಡ ಗ್ರಾಚ್ಯುಟಿ ನೀಡಲು ಒಪ್ಪಿಗೆ ಕೊಟ್ಟಿದ್ದು, ಎಲ್ಲವನ್ನೂ ಹಂತಹಂತವಾಗಿ ಜಾರಿ ಮಾಡುತ್ತೇವೆ. ಪ್ರತಿಭಟನೆ ಕೈ ಬಿಡುವುದಾಗಿ ಕಾರ್ಯಕರ್ತರು ಒಪ್ಪಿದ್ದು ಇಂದು ರಾತ್ರಿ ಮತ್ತೆ ಗ್ರಾಚ್ಯುಟಿ ವಿಚಾರವಾಗಿ ಸಭೆ ನಡೆಸಿ ನಿರ್ಧಾರವನ್ನು ಕಾರ್ಯರೂಪಕ್ಕೆ ತರುತ್ತೇವೆ. ಪಿಯುಸಿ ಅರ್ಹತೆ ಇಲ್ಲದೇ ಇರುವ ಕಾರ್ಯಕರ್ತೆಯರಿಗೂ ಒಂದು ಬಾರಿ ಬಡ್ತಿ ನೀಡಲು ಸರ್ಕಾರ ಒಪ್ಪಿಗೆ ನೀಡಿದೆ ಎಂದು ಹಾಲಪ್ಪ ಹೇಳಿದ್ದಾರೆ.

'ಸಾಹುಕಾರ'ನ CD ಜಟಾಪಟಿ: ಸಿಎಂ ಬೆನ್ನು ಬಿದ್ದ ರಮೇಶ್ ಜಾರಕಿಹೊಳಿ

ಬೆಂಗಳೂರು: ಡಿಕೆಶಿ ವರ್ಸಸ್ ಬೆಳಗಾವಿ ಸಾಹುಕಾರ್ ಸಿಡಿ ಸಮರ ದಿನದಿಂದ ದಿನಕ್ಕೆ ಹೊಸ ಹೊಸ ತಿರುವು ಪಡೆದುಕೊಳ್ತಿದೆ. ಅತ್ತ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು ಎಂದು ರಮೇಶ್ ಜಾರಕಿಹೊಳಿ ಪಟ್ಟು ಹಿಡಿದಿದ್ದರೆ ಇತ್ತ ಜಾರಕಿಹೊಳಿ ಸಹೋದರರು ಪ್ರಕರಣವನ್ನು ಸಿನಿಮಾ ಮಾಡಲು ಹೊರಟಿದ್ದಾರೆ. ಕರ್ನಾಟಕ ವಿಧಾನಸಭಾ ಚುನಾವಣಾ ಅಖಾಡದಲ್ಲಿ ಸಿಡಿ ಸದ್ದು ಮಾರ್ದನಿಸುತ್ತಿದೆ. ಇಟ್ಟ ಹೆಜ್ಜೆ ಹಿಂದೆ ತೆಗೆಯೋ ಮಾತೇಯಿಲ್ಲ ಎಂದು ಡಿಕೆಶಿ ವಿರುದ್ಧ ಸಿಡಿ ಸಮರ ಸಾರಿರುವ ಬೆಳಗಾವಿ ಸಾಹುಕಾರ್ ಕೆಂಡಕಾರುತ್ತಿದ್ದಾರೆ. ಇಂದು ಸಿಎಂ ಬಸವರಾಜ್ ಬೊಮ್ಮಾಯಿಯವರನ್ನು ಭೇಟಿ ಮಾಡಿ ಸಿಡಿ ಪ್ರಕರಣವನ್ನು ಸಿಬಿಐಗೆ ವಹಿಸಲು ದುಂಬಾಲು ಬಿದ್ದಿದ್ದಾರೆ.



ಬೆಂಗಳೂರಿನ ಆರ್‌ಟಿನಗರದ ಖಾಸಗಿ ನಿವಾಸದಲ್ಲಿ ಸಿಎಂ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿಯಾದ ರಮೇಶ್ ಜಾರಕಿಹೊಳಿ ಕೆಲಕಾಲ ಅವರ ಜೊತೆ ಚರ್ಚೆ ನಡೆಸಿದರು. ಬಳಿಕ ಕಾರ್ಯಕ್ರಮದ ನಿಮಿತ್ತ ಸಿಎಂ ತಮ್ಮ ನಿವಾಸದಿಂದ ತೆರಳಲು ಸಿದ್ಧವಾಗಿ ಹೊರಟಾಗ ರಮೇಶ್ ಜಾರಕಿಹೊಳಿ, ಅವರ ಜೊತೆಯೇ ಕಾರಿನಲ್ಲಿ ಹೋಗಿದ್ದಾರೆ. ಇನ್ನೂ ಸಿಡಿ ಪ್ರಕರಣವನ್ನು ಸಿಬಿಐಗೆ ನೀಡೋ ಬಗ್ಗೆ ಪ್ರತಿಕ್ರಿಯಿಸಿರುವ ಸಿಎಂ ಬಸವರಾಜ್ ಬೊಮ್ಮಾಯಿ ನನಗೆ ಆ ಬಗ್ಗೆ ಮಾಹಿತಿಯೇ ಇಲ್ಲ ಎಂದಿದ್ದಾರೆ.

ಸಿಡಿ ಪ್ರಕರಣವನ್ನು ಸಿಬಿಐಗೆ ವಹಿಸುವ ಬಗ್ಗೆ ರಮೇಶ್ ಜಾರಕಿಹೊಳಿ ಪಟ್ಟು ಹಿಡಿದಿರುವ ಹಿನ್ನೆಲೆ ಈ ಬಗ್ಗೆ ಗೃಹ ಸಚಿವ ಆರಗ ಜ್ಞಾನೇಂದ್ರ ಪ್ರತಿಕ್ರಿಯೆ ನೀಡಿದ್ದಾರೆ. ಪ್ರಕರಣದ ಬಗ್ಗೆ ಸಿಎಂ ಜೊತೆ ಚರ್ಚೆ ನಡೆಸ್ತೀನಿ ಎಂದಿದ್ದಾರೆ.

ಡಿ.ಕೆ.ಶಿವಕುಮಾರ್ ವಿರುದ್ಧ ಜಾರಕಿಹೊಳಿ ಬ್ರದರ್ಸ್ ಹೊಸ ಸಿನಿಮಾ ಸಮರಕ್ಕೆ ಮುಂದಾಗಿದ್ದಾರೆ. ಸಿಡಿಯಿಂದ ಶುರು ವಾದ ವಿವಾದ ಈಗ ಸಿನಿಮಾದತ್ತ ಮುಖ ಮಾಡುತ್ತಿದೆ. ರಿಯಲ್ ಸ್ಟಾರ್ ಉಪೇಂದ್ರ ನಟನೆಯ ರಕ್ತಕಣ್ಣೀರು ಚಿತ್ರದಂತೆ ಸಿಡಿ ಪ್ರಕರಣವನ್ನ ಇಟ್ಟುಕೊಂಡು ಜಾರಕಿಹೊಳಿ ಸಹೋದರರು 'ರಕ್ತಕಣ್ಣೀರು-3' ಚಲನಚಿತ್ರಕ್ಕೆ ಸಿದ್ಧತೆ ನಡೆಸಿದ್ದಾರೆ. ರಕ್ತ ಕಣ್ಣೀರು-3 ಚಿತ್ರಕ್ಕೆ ನಟ ಉಪೇಂದ್ರ ಅವರ ಕಾಲ್‌ಶೀಟ್ ಸಹ ಲಖನ್ ಜಾರಕಿಹೊಳಿ ಕೇಳಿದ್ದಾರಂತೆ. ಚಿತ್ರದಲ್ಲಿ ನಾಯಕನಾಗಿ ಉಪೇಂದ್ರ, ನಟಿಯಾಗಿ ನಯನತಾರಾ ಹಾಗೂ ನಾನೇ ಚಿತ್ರದ ನಿರ್ಮಾಪಕ ಅಂತ ಲಖನ್ ಜಾರಕಿಹೊಳಿ ಹೇಳಿಕೆ ನೀಡಿದ್ದಾರೆ.

ಇಂದು ಬಿಜೆಪಿ ಸಂಸದರಿಗೆ ವಿತ್ತ ಸಚಿವರಿಂದ ಬಜೆಟ್ ಕೋಚಿಂಗ್ ಕ್ಲಾಸ್!

ನವದೆಹಲಿ, ಫೆ.2- 2024ರ ಲೋಕಸಭೆ ಚುನಾವಣೆಗೆ ಮುಂಚಿತವಾಗಿ ನರೇಂದ್ರ ಮೋದಿ ಸರ್ಕಾರದ ಕೊನೆಯ ಪೂರ್ಣ ಪ್ರಮಾಣದ ಬಜೆಟ್ ಅನ್ನು ಮಂಡಿಸಿದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಶುಕ್ರವಾರ ಲೋಕಸಭೆ ಮತ್ತು ರಾಜ್ಯಸಭೆಯ ಬಿಜೆಪಿ ಸಂಸದರಿಗೆ ಬಜೆಟ್ ಕುರಿತು ಬ್ರೀಫಿಂಗ್ (ಸಂಕ್ಷಿಪ್ತ ವಿವರ) ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಭೆಯಲ್ಲಿ ಸಂಸದರಿಗೆ ಬಜೆಟ್ ಕುರಿತು ಸಚಿವೆ ನಿರ್ಮಲಾ ಸೀತಾರಾಮನ್ ವಿವರಣೆ ನೀಡಲಿದ್ದು, ರಾಷ್ಟ್ರ ರಾಜಧಾನಿಯ ಸಂಸತ್ ಲೈಬ್ರರಿ ಕಟ್ಟಡದಲ್ಲಿರುವ ಬಾಲಂಯೋಗಿ ಆಡಿಟೋರಿಯಂನಲ್ಲಿ ಬೆಳಿಗ್ಗೆ 9 ಗಂಟೆಗೆ ಬ್ರೀಫಿಂಗ್ ನಡೆಯಲಿದೆ ಎಂದು ಎಲ್ಲಾ ಸಂಸದರಿಗೆ ತಿಳಿಸಲಾಗಿದೆ. ಸಮಾಜದ ಪ್ರತಿಯೊಂದು ಸ್ತರದ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಬಜೆಟ್ ಎಂದರೆ ಏನು ಮತ್ತು ಅದನ್ನು ಹೇಗೆ ಹೊರತರಲಾಗಿದೆ ಎಂಬುದನ್ನು ಆಯಾ ಕ್ಷೇತ್ರಗಳಿಗೆ ಹೋಗಿ ಸಾಮಾನ್ಯ ಜನರಿಗೆ ತಿಳಿಸಿ ಎಂದು ಬಿಜೆಪಿ ಪಕ್ಷವು ತನ್ನ ಎಲ್ಲಾ ಸಂಸತ್ ಸದಸ್ಯರನ್ನು ಕೇಳಿರುವ ಸಮಯದಲ್ಲಿ ಈ ಬ್ರೀಫಿಂಗ್ ಸಭೆ ನಡೆಯುತ್ತಿದೆ.

ಬೃಂದಾವನ, ಗೋಕುಲಂ ಬಡಾವಣೆಗಳಲ್ಲಿ 2 ಕೋಟಿ ವೆಚ್ಚದಲ್ಲಿ ರಸ್ತೆ ಕಾಮಗಾರಿಗೆ ಶಾಸಕ ನಾಗೇಂದ್ರ ಚಾಲನೆ





ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಗುರುವಾರ ಚಾಲನೆ ನೀಡಿದರು.

ಮೈಸೂರು, ಫೆ.2(ಪಿಎಂ)- ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದ ಬೃಂದಾವನ ಬಡಾವಣೆ, ಗೋಕುಲಂ ಬಡಾವಣೆಗಳಲ್ಲಿ ಒಟ್ಟು ಎರಡು ಕೋಟಿ ರೂ. ವೆಚ್ಚದಲ್ಲಿ ಕೈಗೆತ್ತಿಕೊಂಡಿರುವ ವಿವಿಧ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಗುರುವಾರ ಚಾಲನೆ ನೀಡಿದರು.

ಬೃಂದಾವನ ಬಡಾವಣೆಯ ಶ್ರೀ ಗಣಪತಿ ದೇವಸ್ಥಾನದ ಬಳಿ (ಪ್ರಿಯದರ್ಶಿನಿ ಆಸ್ಪತ್ರೆ ಬಳಿ) ನಗರಪಾಲಿಕೆ ವಾರ್ಡಿನ ಸದಸ್ಯ ಎಸ್‌ಬಿಎಂ ಮಂಜು ಉಪಸ್ಥಿತಿಯಲ್ಲಿ ಶಾಸಕರು ಗುದ್ದಲಿಪೂಜೆ ನೇರವೇರಿಸಿದರು.

ಬೃಂದಾವನ ಬಡಾವಣೆಯ ಕೆಆರ್‌ಎಸ್ ರಸ್ತೆಯಿಂದ ಪ್ರಿಯದರ್ಶಿನಿ ಆಸ್ಪತ್ರೆ ಮಾರ್ಗವಾಗಿ ಕುವೆಂಪು ಶಾಲೆಯವರೆಗೆ ಹಾಗೂ ಗೋಕುಲಂ ಬಡಾವಣೆಯ ವಿವಿಧ ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎಲ್.ನಾಗೇಂದ್ರ ಚಾಲನೆ ನೀಡಿದ್ದು, ರಾಜ್ಯ ಸರ್ಕಾರದ ಎಸ್‌ಎಫ್‌ಸಿ ವಿಶೇಷ ಅನುದಾನದಡಿ ಸದರಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ.

ಭವನದ ಮುಂದುವರೆದ ಕಾಮಗಾರಿ: ಬಳಿಕ ಲಷ್ಕರ್ ಮೊಹಲ್ಲಾ ಚವಾಲ್ ಮಠದ ಬೀದಿಯಲ್ಲಿರುವ ಸೋಮವಂಶ ಆರ್ಯ ಕ್ಷತ್ರಿಯ ಸಮಾಜದ ಶ್ರೀಮತಿ ಗುಣಾಬಾಯಿ ರುಕ್ಮಿಣಿಬಾಯಿ ಸಮುದಾಯ ಭವನದ ಮುಂದುವರಿದ ಕಾಮಗಾರಿಗೂ ಶಾಸಕರು ಭೂಮಿ ಪೂಜೆ ನೆರವೇರಿಸಿದರು. ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯ 10 ಲಕ್ಷ ರೂ. ವೆಚ್ಚದಲ್ಲಿ ಈ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ರಸ್ತೆ ಕಾಮಗಾರಿ ಚಾಲನೆ ಕಾರ್ಯಕ್ರಮದಲ್ಲಿ ಮುಖಂಡ ಎಸ್.ಆರ್.ನಂಜಪ್ಪ, ಆಶ್ರಯ ಸಮಿತಿ ಸದಸ್ಯ ಮಹೇಶ್ ರಾಜೇ ಅರಸ್, ಬಿಜೆಪಿ ಮುಖಂಡರಾದ ಜಯಣ್ಣ, ಪುನೀತ್, ಅಶೋಕ, ತನುಜಾ ಮಹೇಶ್, ಸ್ಥಳೀಯ ಮುಖಂಡರಾದ ಶ್ರೀಧರ್, ಜೀವನ್, ದೇವರಾಜ್, ಸುಧಾಕರ್, ಕೆಂಪೇಗೌಡ, ರಮೇಶ್‌ರಾವ್, ಪ್ರಭಾಕರ್, ಮೋಹನ್, ಪಾಲಿಕೆ ಅಭಿವೃದ್ಧಿ ಅಧಿಕಾರಿ ಹೇಗಾನಂದ್, ಗುತ್ತಿಗೆದಾರ ಅಶೋಕ್ ಗೋವಿಂದೇಗೌಡ ಮತ್ತಿತರರು ಹಾಜರಿದ್ದರು. ಸಮುದಾಯ ಭವನದ ಕಾಮಗಾರಿ ಚಾಲನೆ ವೇಳೆ ಬಿಜೆಪಿ ಮುಖಂಡರಾದ ಕೇಬಲ್ ವಿಜಯ್, ಸೂರಜ್, ಬಾಲಾಜಿ, ರವಿ ಕೆಂಪಣ್ಣ, ಕೇಬಲ್ ರಾಜು, ಸಂತೋಷ್, ಟೈಲರ್ ಮಹದೇವು, ಸೂರಿ, ಸುರೇಶ್‌ಕುಮಾರ್, ರುಕ್ಮಿಣಿಬಾಯಿ, ಅನಂತ ರಾವ್, ವೆಂಕಟೇಶ್, ಜಗದೀಶ್, ರಾಜೇಶ ಗಾವಳೆ, ಕೆಆರ್‌ಐಡಿಎಲ್ ಇಂಜಿನಿಯರ್ ಅರ್ಚನಾ, ಗುತ್ತಿಗೆದಾರ ಹರ್ಷ, ಗುಣಾಬಾಯಿ ಸಂಘದ ಅಧ್ಯಕ್ಷ ವಿಜೇಂದ್ರಕುಮಾರ್ ಮತ್ತಿತರರು ಹಾಜರಿದ್ದರು.

ಇಂದಿನಿಂದ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರ ಮೈಸೂರು ಪ್ರವಾಸ

ಮೈಸೂರು,ಫೆ.2-ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಎಂ.ಶಿವಣ್ಣ (ಕೋಟೆ) ಫೆಬ್ರವರಿ ಮಾಹೆಯ ಮೈಸೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದು, ಫೆ.3ರಂದು ಬೆಳಗ್ಗೆ 11 ಗಂಟೆಗೆ ಸರಗೂರು ತಾಲೂಕಿನ ಕೊತ್ತೇಗಾಲ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಮಧ್ಯಾಹ್ನ 2 ಗಂಟೆಗೆ ಮೈಸೂರು ಜಿಲ್ಲೆಯ ನಗರ ಪಾಲಿಕೆ ಹಾಗೂ ಮೈಸೂರು ಜಿಲ್ಲೆ ನಗರ ಸ್ಥಳೀಯ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರು, ಪೌರಕಾರ್ಮಿಕರು ಮತ್ತು ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳು, ಮುಖಂಡರುಗಳ ಜೊತೆ ಕುಂದುಕೊರತೆಗಳ ಕುರಿತು ನೇರ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.



ಫೆ.4 ರಂದು ಬೆಳಗ್ಗೆ 10.30 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾ ಮಟ್ಟದ ಹಾಗೂ ತಾಲೂಕು ಮಟ್ಟದ ಎಲ್ಲಾ ಅಧಿಕಾರಿಗಳೊಂದಿಗೆ ಸಫಾಯಿ ಕರ್ಮಚಾರಿ ಪೌರಕಾರ್ಮಿಕರ ಕುಂದು ಕೊರತೆಗಳ ಬಗ್ಗೆ ಸಭೆ ನಡೆಸಲಿದ್ದಾರೆ ಹಾಗೂ ಮಧ್ಯಾಹ್ನ ಒಂದು ಗಂಟೆಗೆ ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಲಿದ್ದಾರೆ.

ಮಧ್ಯಾಹ್ನ 2 ಗಂಟೆಗೆ ಮೈಸೂರು ಜಿಲ್ಲೆಯ ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರು, ಪೌರಕಾರ್ಮಿಕರು ಮತ್ತು ಗುರುತಿಸಲ್ಪಟ್ಟ ಮ್ಯಾನ್ಯುವಲ್ ಸ್ಕ್ಯಾವೆಂಜರ್‌ಗಳ ಹಾಗೂ ಮುಖಂಡರುಗಳ ಜೊತೆ ಕುಂದು ಕೊರತೆ ಗಳ ಕುರಿತು ನೇರ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಮಧ್ಯಾಹ್ನ 3 ಗಂಟೆಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಕಚೇರಿಯಲ್ಲಿ ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರ, ಸಫಾಯಿ ಕರ್ಮಚಾರಿ, ಪೌರಕಾರ್ಮಿಕರ, ಗುರುತಿಸಲ್ಪಟ್ಟ ಮ್ಯಾನ್ಯುವಲ್ ಸ್ಕ್ಯಾವೆಂಜರ್‌ಗಳ ಕುಂದು ಕೊರತೆಗಳ ಬಗ್ಗೆ ಅಧಿಕಾರಿಗಳೊಡನೆ ಸಭೆ ನಡೆಸಲಿದ್ದಾರೆ.


ಫೆ.10ಕ್ಕೆ ಕಡಕೊಳ ಪಪಂ ಆಯವ್ಯಯ ಪೂರ್ವಭಾವಿ ಸಭೆ

ಮೈಸೂರು,ಫೆ.2- ಕಡಕೊಳ ಪಟ್ಟಣ ಪಂಚಾಯಿತಿಯಲ್ಲಿ ಫೆ.10 ರಂದು ಬೆಳಗ್ಗೆ 11 ಗಂಟೆಗೆ 2023-24ನೇ ಸಾಲಿನ ಆಯವ್ಯಯ ತಯಾರಿಸಲು ಆಯವ್ಯಯ ಪೂರ್ವಭಾವಿ ಸಭೆ ಹಮ್ಮಿಕೊಳ್ಳಲಾಗಿದೆ.

ತಾಲೂಕಿನ ಪಟ್ಟಣ ಪಂಚಾಯಿತಿಯ ಆಡಳಿತಾಧಿಕಾರಿ ಹಾಗೂ ತಹಶೀಲ್ದಾರ್ ಬಿ.ಎನ್.ಗಿರೀಶ್ ಅಧ್ಯಕ್ಷತೆಯಲ್ಲಿ ಸಭೆ ನಡೆಯಲಿದ್ದು, ಕಡಕೊಳ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಮಾಜಿ ನಾಮ ನಿರ್ದೇಶಿತ ಸದಸ್ಯರು ಹಾಗೂ ಸಾರ್ವಜನಿಕರು, ಸಂಘ-ಸಂಸ್ಥೆಗಳ ಮುಖ್ಯಸ್ಥರು, ಎನ್‌ಜಿಓ ಹಾಗೂ ಸ್ವ-ಸಹಾಯ ಸಂಘದವರು ಸಲಹೆ ಸೂಚನೆಗಳನ್ನು ನೀಡಬೇಕೆಂದು ಕಡಕೊಳ ಪಟ್ಟಣ ಪಂಚಾಯಿತಿಯ ಆಡಳಿತಾಧಿಕಾರಿ ಹಾಗೂ ಮುಖ್ಯಾಧಿಕಾರಿ ಪತ್ರಿಕಾ ಪ್ರಕಟಣೆಯಲ್ಲಿ ಕೋರಿದ್ದಾರೆ.

ಎಂಎಸ್ ರಾಮಯ್ಯ ಆಸ್ಪತ್ರೆಯ ದಂತ ವೈದ್ಯೆ ಆತ್ಮಹತ್ಯೆಗೆ ಶರಣು!

ಬೆಂಗಳೂರು, ಫೆ.2- ನಗರದ ಎಂಎಸ್ ರಾಮಯ್ಯ ಆಸ್ಪತ್ರೆಯಲ್ಲಿ ದಂತ ವೈದ್ಯೆಯಾಗಿದ್ದ ಪ್ರಿಯಾಂನ್ಷಿ ತ್ರಿಪಾಠಿ ಅವರು ಆತ್ಮಹತ್ಯೆಗೆ ಶರಣಾಗಿದ್ದಾರೆ.



ಉತ್ತರಪ್ರದೇಶದ ಲಖನೌ ಮೂಲದ ಪ್ರಿಯಾಂನ್ಷಿ ಜ.25 ರಂದು ಬೆಂಗಳೂರಿನ ಸಂಜಯನಗರದಲ್ಲಿ ಆತ್ಮಹತ್ಯೆ ಮಾಡಿದ್ದಾರೆ. ಪ್ರಿಯಾಂನ್ಷಿ ತ್ರಿಪಾಠಿ ವೈದ್ಯ ಸುಮಿತ್ ಎಂಬಾತನನ್ನು ಪ್ರೀತಿಸುತ್ತಿದ್ದು, ಅದನ್ನು ಪ್ರಿಯಕರನ ಮುಂದೆ ಹೇಳಿಕೊಂಡಿದ್ದಾಳೆ. ಇದಕ್ಕೆ ಸುಮಿತ್ ನಿರಾಕರಿಸಿದ್ದು ಈ ಹಿನ್ನೆಲೆಯಲ್ಲಿ ಪ್ರಿಯಾಂನ್ಷಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎನ್ನಲಾಗಿದೆ. ಈ ಸಂಬಂಧ ಸಂಜಯ್ ನಗರ ಪೊಲೀಸ್ ಠಾಣೆಯಲ್ಲಿ ಪ್ರಿಯಾಂನ್ಷಿ ತಂದೆ ದೂರು ದಾಖಲಿಸಿದ್ದಾರೆ. ಈ ದೂರಿನ ಹಿನ್ನೆಲೆಯಲ್ಲಿ ಐಪಿಸಿ ಸೆಕ್ಷನ್ 306 ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಮುಂದುವರೆಸಿದ್ದಾರೆ. ನನ್ನ ಮಗಳಿಗೆ ಸುಮಿತ್ ಮದ್ಯಪಾನ ಮಾಡುವಂತೆ, ಸಿಗರೇಟ್ ಸೇದುವಂತೆ ಒತ್ತಾಯಿಸುತ್ತಾ ಹಿಂಸೆ ಕೊಡುತ್ತಿದ್ದನು. ಇದರ ಜೊತೆಗೆ ಹಣಕ್ಕಾಗಿ ಒತ್ತಾಯಿಸಿದ್ದನು. ಈ ವಿಷಯವನ್ನು ಮಗಳು ಹೇಳಿದಾಗ ನಾನು ಆತನಿಗೆ ಕರೆ ಮಾಡಿ ತೊಂದರೆ ಕೊಡದಂತೆ ಮನವಿ ಮಾಡಿದ್ದೆ ಎಂದು ದೂರಿನಲ್ಲಿ ತಿಳಿಸಿದ್ದಾರೆ. ಆದರೆ ಈ ಬಗ್ಗೆ ತನಿಖೆ ಕೈಗೊಂಡಿದ್ದ ಪೊಲೀಸರಿಗೆ ಕೆಲ ಮಾಹಿತಿ ಸಿಕ್ಕಿದೆ. ಅದರಂತೆ ಯುವತಿಯೇ ಆತನನ್ನು ಪ್ರೀತಿಸುತ್ತಿದ್ದು ಆತ ಪ್ರೀತಿ ನಿರಾಕರಿಸಿದ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಿರುವುದು ಬೆಳಕಿಗೆ ಬಂದಿದೆ. ಬಳಿಕ ದೂರು ವಾಪಸ್ ಪಡೆಯುವುದಾಗಿ ಪ್ರಿಯಾಂನ್ಷಿ ತಂದೆ ಕೇಳಿದ್ದಾರೆ. ಆದರೆ ಪ್ರಕರಣದ ತನಿಖೆ ಹಿನ್ನೆಲೆ ಎಫ್‌ಐಆರ್ ದಾಖಲಿಸಿದ್ದ ಕಾರಣ ಪೊಲೀಸರು ಯುವತಿ ಪ್ರೇಮ ವೈಫಲ್ಯ ಹಿನ್ನೆಲೆ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ವರದಿ ನೀಡಿದ್ದಾರೆ.

8 ವರ್ಷದಲ್ಲಿ 120 ಲಕ್ಷ ಕೋಟಿ ಸಾಲ; ಮೋದಿ ಸಾಧನೆ

● ಬಜೆಟ್ ಕುರಿತು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಟೀಕೆ ● ಪ್ರತಿ ವರ್ಷ 10.81 ಲಕ್ಷ ಕೋಟಿ ಬರೀ ಬಡ್ಡಿ ಕಟ್ಟುವ ಹೀನಾಯ ಸ್ಥಿತಿ

ಮೈಸೂರು, ಫೆ.2(ಆರ್‌ಕೆಬಿ)-ಕೇಂದ್ರ ಸರ್ಕಾರದ ಪ್ರಸಕ್ತ ಸಾಲಿನ ಬಜೆಟ್ ನೋಡಿದರೆ ಒಟ್ಟಾರೆ 120 ಲಕ್ಷ ಕೋಟಿ ಸಾಲ ಮಾಡಿರುವುದೇ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಬಹುದೊಡ್ಡ ಸಾಧನೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಟೀಕಿಸಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಕೇಂದ್ರ ಸರ್ಕಾರದ ಬಜೆಟ್ ಕುರಿತಂತೆ ತಿಳಿಸಿದ ಅವರು, 1947ರಿಂದ 2014ರವರೆಗೆ ಮನಮೋಹನ್‌ಸಿಂಗ್ ಪ್ರಧಾನಿಯಾಗಿ ಇಳಿಯುವವರೆಗೆ 70 ವರ್ಷದಲ್ಲಿ ದೇಶ ಮಾಡಿದ್ದ ಸಾಲ 53 ಲಕ್ಷ ಕೋಟಿ. ಆದರೆ ಇಂದು ಅದು 173 ಲಕ್ಷ ಕೋಟಿಗೇರಿದೆ. ಅಂದರೆ 8 ವರ್ಷದಲ್ಲಿ 120 ಲಕ್ಷ ಕೋಟಿ ಸಾಲ ಮಾಡಿರುವುದೇ ಮೋದಿ ಸರ್ಕಾರದ ಸಾಧನೆ ಎಂದರು.



ಪ್ರತೀ ವರ್ಷ 10.81 ಲಕ್ಷ ಕೋಟಿ ಸಾಲ ಕಟ್ಟುವ ಪರಿಸ್ಥಿತಿ ತಂದಿಟ್ಟಿದ್ದಾರೆ. ಅಂದರೆ 100 ರೂ.ನಲ್ಲಿ 42 ರೂ. ಬಡ್ಡಿಗೇ ಹೋಗುವ ವ್ಯವಸ್ಥೆಯನ್ನು ನಿರ್ಮಿಸಿದ ಕೀರ್ತಿ ಕೇಂದ್ರ ಬಿಜೆಪಿ ಸರ್ಕಾರಕ್ಕೆ ಸಲ್ಲುತ್ತದೆ ಎಂದು ಲೇವಡಿ ಮಾಡಿದರು. 2022-23ರಲ್ಲಿ ನೀಡಿದ್ದ ಆಶ್ವಾಸನೆ ಪ್ರಕಾರ 16 ಲಕ್ಷ ಕೋಟಿ ಸಾಲ ಮಾಡುವುದಾಗಿ ತಿಳಿಸಿದ್ದರು. ಆದರೆ ಅವರು 17.55 ಲಕ್ಷ ಕೋಟಿ ಸಾಲ ಮಾಡಿದ್ದಾರೆ. ಈಗ ಅವರೇ ನೀಡಿರುವ ಮಾಹಿತಿ ಪ್ರಕಾರ ದೇಶದ ಒಟ್ಟು ಸಾಲ 152 ಲಕ್ಷ ಕೋಟಿ. ಈ ಬಾರಿ ಬಜೆಟ್‌ನಲ್ಲಿ ಘೋಷಣೆ ಮಾಡಿರುವುದು 18 ಲಕ್ಷ ಕೋಟಿ ಸಾಲ ಮಾಡುತ್ತೇವೆಂದು ತಿಳಿಸಿದ್ದರು. ಅಂದರೆ ಈ ಸಾಲಿನ ಕೊನೆಯಲ್ಲಿ ನಮ್ಮ ದೇಶದ ಒಟ್ಟಾರೆ ಸಾಲ 173 ಲಕ್ಷ ಕೋಟಿಯಾಗಲಿದೆ ಎಂದು ಕೇಂದ್ರ ಸರ್ಕಾರವನ್ನು ದೂರಿದರು. ಸರ್ಕಾರದ ಒಟ್ಟು ಹಣಕಾಸಿನ ಕೊರತೆ 2023ರ ಪ್ರಸ್ತುತ ಮಾರ್ಚ್‌ವರೆಗೆ 7.49 ಲಕ್ಷ ಕೋಟಿ ಇತ್ತು. ಈಗ 24.2 ಲಕ್ಷ ಕೋಟಿ ಹಣಕಾಸಿನ ಕೊರತೆ ಉಂಟಾಗಿದೆ. 2013-14ರಲ್ಲಿ ಮನಮೋಹನ್‌ಸಿಂಗ್ ಪ್ರಧಾನಿಯಾಗಿ ಇಳಿಯುವಾಗ ಒಟ್ಟು 8.7 ಲಕ್ಷ ಇತ್ತು. ಅಂದರೆ 200 ಲಕ್ಷ ಕೋಟಿ ಇತ್ತು. ಒಂದು ವರ್ಷಕ್ಕೆ ಶೇ.9ರಂತೆ ಒಂದು ವರ್ಷಕ್ಕೆ 18 ಲಕ್ಷ ಕೋಟಿ ವೃದ್ಧಿಯಾಗಬೇಕಿತ್ತು. ಅಂದರೆ 218 ಲಕ್ಷ ಕೋಟಿ ಆಗಬೇಕಿತ್ತು. ಇವರು ಬಂದ ಮೇಲೆ ಶೇ.8.7 ಇದ್ದ ಜಿಡಿಪಿ ಶೇ.6ಕ್ಕೆ ಕುಸಿದಿದೆ. ಇದರಿಂದ ವಾರ್ಷಿಕವಾಗಿ 6 ಲಕ್ಷ ಕೋಟಿ ವಹಿವಾಟನ್ನು ಕಳೆದುಕೊಳ್ಳುತ್ತಿದ್ದೇವೆ. ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದ ವೇಳೆ ತಲಾದಾಯ 2014ರಲ್ಲಿ ಶೇ.13.1ರಷ್ಟಿತ್ತು. 2014ರಿಂದ 2023ರವರೆಗೆ ಶೇ.9 ಇದೆ.

ಈ ಬಾರಿಯ ಬಜೆಟ್‌ನಲ್ಲಿ ಕೇಂದ್ರ ಸರ್ಕಾರವು ಕರ್ನಾಟಕಕ್ಕೆ ಮತ್ತು ಮೈಸೂರಿನ ಜನರಿಗೆ ಉಂಡೆ ನಾಮ ಬಳಿದಿದ್ದಾರೆ. ಚುನಾವಣೆ ಇರುವ ರಾಜ್ಯಗಳಿಗೆ ಬಿಸ್ಕೆಟ್ ಎಸೆದಿದ್ದಾರೆ. ಪ್ರಸ್ತುತ ಮೇಕೆದಾಟು, ಮಹದಾಯಿ ಸೇರಿದಂತೆ ಇರುವ ಯೋಜನೆಗಳಿಗೆ ನಯಾಪೈಸೆ ನೀಡಿಲ್ಲ. ಕುಂಟುತ್ತಾ ಸಾಗಿರುವ 162 ಯೋಜನೆಗಳಿಗೆ ಹಣ ನೀಡಿಲ್ಲ ಎಂದು ಆರೋಪಿಸಿದರು. ಮೈಸೂರಿನ ಸಂಸದರು ಮೈಸೂರಿಗೆ ಏನು ಕೊಡುಗೆ ನೀಡಿದ್ದಾರೆ. ಕೇಂದ್ರದಿಂದ ವಿಶೇಷವಾಗಿ ಏನು ತಂದಿದ್ದಾರೆ. ಅದರಲ್ಲು ಕೊಡಗಿಗೇನಾದರೂ ಕೊಟ್ಟಿದ್ದಾರೆಯೇ ಎಂದು ಪ್ರಶ್ನಿಸಿದರು. ರಾಜ್ಯದಿಂದ ಕೇಂದ್ರಕ್ಕೆ ವರ್ಷಕ್ಕೆ 4.25 ಲಕ್ಷ ಕೋಟಿ ಹೋಗುತ್ತದೆ. ಆದರೆ ನೀತಿ ಆಯೋಗದ ಪ್ರಕಾರ ನಮಗೆ ವಾಪಸ್ ನೀಡಬೇಕಾದ ಶೇ.42ರಷ್ಟು ಹಣ ಕೇಂದ್ರ ಸರ್ಕಾರ ನೀಡಿದೆಯೇ ಎಂದು ಪ್ರಶ್ನಿಸಿದರು. ಗೋಷ್ಠಿಯಲ್ಲಿ ನಗರಾಧ್ಯಕ್ಷ ಆರ್.ಮೂರ್ತಿ, ಪ್ರಧಾನ ಕಾರ್ಯದರ್ಶಿ ಶಿವಣ್ಣ, ವಕ್ತಾರ ಕೆ.ಮಹೇಶ್ ಇತರರಿದ್ದರು.

ಜಲಜೀವನ್ ಮಿಷನ್ ಯೋಜನೆಯಲ್ಲಿ ಅವ್ಯವಹಾರ

ಸೂಕ್ತ ತನಿಖೆಗಾಗಿ ಲೋಕಾಯುಕ್ತಕ್ಕೆ ದೂರು ನೀಡುವೆ: ಮಾಜಿ ಸಚಿವ ಪಿ.ಎಂ.ನರೇಂದ್ರಸ್ವಾಮಿ



ಮಂಡ್ಯ, ಫೆ.2– ಮಳವಳ್ಳಿ ತಾಲೂಕಿನಲ್ಲಿ ಜಲಜೀವನ್ ಮಿಷನ್ ಯೋಜನೆಯಡಿ ಅವ್ಯವಹಾರ ನಡೆದಿದ್ದು, ಸೂಕ್ತ ತನಿಖೆಗಾಗಿ ಲೋಕಾಯುಕ್ತಕ್ಕೆ ದೂರು ನೀಡುವುದಾಗಿ ಮಾಜಿ ಸಚಿವ ಪಿ.ಎಂ. ನರೇಂದ್ರಸ್ವಾಮಿ ತಿಳಿಸಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಬಹುಗ್ರಾಮ ಕುಡಿಯುವ ನೀರಿನ ಯೋಜನೆ, ಜಿಪಂ, ತಾಪಂ, ಗ್ರಾಪಂ ಹಾಗೂ 15ನೇ ಹಣಕಾಸು ಯೋಜನೆಯಡಿ ಕುಡಿಯುವ ನೀರಿನ ಯೋಜನೆಗೆ ಪೈಪ್‌ಲೈನ್ ಅಳವಡಿಸಲಾಗಿದೆ. ಮತ್ತೆ ಜಲಜೀವನ್ ಮಿಷನ್ ಯೋಜನೆ ಹೆಸರಿನಲ್ಲಿ ಪೈಪ್‌ಲೈನ್ ಅಳವಡಿಸುವುದರ ಹಿಂದಿನ ಉದ್ದೇಶವೇನು ಎಂದು ಪ್ರಶ್ನಿಸಿದರು.

ತಾಲೂಕಿನ 56 ಹಳ್ಳಿಗಳಲ್ಲಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಈಗಾಗಲೇ ಚಾಲ್ತಿಯಲ್ಲಿದೆ. ಹೀಗಿದ್ದರೂ ಮತ್ತೆ ಅದೇ ಜಾಗದಲ್ಲಿ ಪೈಪ್‌ಲೈನ್ ಮಾಡಲಾಗುತ್ತಿದೆ. ಸಾರ್ವಜನಿಕರು ಕಟ್ಟುವ ತೆರಿಗೆ ಹಣದಿಂದ ಮಾಡುವ ಈ ಯೋಜನೆಗಳು ಅವೈಜ್ಞಾನಿಕವಾಗಿದ್ದು, ಇದರಿಂದ ಸಾರ್ವಜನಿಕರ ತೆರಿಗೆ ಹಣ ಪೋಲಾಗುತ್ತಿದೆ ಎಂದು ಗಂಭೀರ ಆರೋಪ ಮಾಡಿದರು.

ಎಸ್ಟಿಮೇಟ್ ಮಾಡುವ ಇಂಜಿನಿಯರ್‌ಗೆ ಇದರ ಪರಿಜ್ಞಾನ ಇಲ್ಲವೇ, ಎಷ್ಟೋ ಕಡೆ ಕಾಮಗಾರಿ ಮಾಡದೆ ಬಿಲ್ ಪಡೆಯಲಾಗಿದೆ. ಇದೊಂದು ಕೋಟ್ಯಾಂತರ ರೂ. ಅವ್ಯವಹಾರವಾಗಿದೆ. ಇಂಜಿನಿಯರ್‌ಗಳು ಒಂದು ವ್ಯಾಪ್ತಿಗೆ 3 ರಿಂದ 4 ಕಡೆ ಎಸ್ಟಿಮೇಟ್ ಮಾಡಿದ್ದು, ನಿರ್ದಿಷ್ಟ ವ್ಯಕ್ತಿಗಳಿಗೆ ಕಾಮಗಾರಿ ನೀಡಲಾಗಿದೆ. ಕಳಪೆ ಗುಣಮಟ್ಟದ ಪೈಪ್‌ಲೈನ್ ಮಾಡಿ ಹಣ ಹೊಡೆಯುವ ಹುನ್ನಾರ ಇದರ ಹಿಂದಿನ ಉದ್ದೇಶ ಎಂದರು.

ಜಲಜೀವನ್ ಮಿಷನ್ ಪ್ರತಿ ಮನೆ ಮನೆಗೂ ನಲ್ಲಿ ಸಂಪರ್ಕ ಕಲ್ಪಿಸುವ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪುರಸ್ಕೃತ ಯೋಜನೆ ಇದಾಗಿದ್ದು, 127 ಕೋಟಿ ಟೆಂಡರ್ ಆಗಿದೆ. 6 ತಿಂಗಳ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕು. ಆದರೆ 2 ವರ್ಷಗಳಾದರೂ ಕಾಮಗಾರಿ ಪೂರ್ಣಗೊಂಡಿಲ್ಲ. ಕಾಮಗಾರಿ ಮುಗಿಯದಿದ್ದರೂ ಮೆಟಿರಿಯಲ್ ಬಿಲ್ ಪಾವತಿಯಾಗಿದೆ. ಕಾಮಗಾರಿ ನಿರ್ವಹಣೆ ಕುದ್ರೋಳಿ ಬಿಲ್ಡರ್ಸ್ ಅಂಡ್ ಇನ್ಫ್ರಾಸ್ಟ್ರಕ್ಚರ್ ಕಂಪನಿಗೆ 64 ಕೋಟಿ ರೂ.ಗೆ ಕಾಮಗಾರಿ ಟೆಂಡರ್ ಆಗಿದ್ದು, ಶೇ.75 ರಷ್ಟರಂತೆ 40 ಕೋಟಿಯಷ್ಟು ಸಪ್ಲೈ ಬಿಲ್ ಪಡೆದಿದ್ದಾರೆ. ಆದರೂ ರಿ–ಟೆಂಡರ್ ಕರೆಯಲಾಗಿದೆ. 40 ಕೋಟಿ ರೂ. ಹಣ ವಸೂಲಿ ಮಾಡುವವರ್ಯಾರು ಎಂದು ಪ್ರಶ್ನಿಸಿದರು.

ಮಂಡ್ಯ ನಗರ ಹೊರತುಪಡಿಸಿದರೆ ಹಳ್ಳಿಗಾಡಿನ ಪ್ರದೇಶದಲ್ಲಿ ಶೇ.80 ರಷ್ಟು ಬಿಪಿಎಲ್ ಕಾರ್ಡ್‌ದಾರರಿದ್ದಾರೆ. ಕುಡಿಯುವ ನೀರಿಗೆ ಮೀಟರ್ ಅಳವಡಿಸಿದರೆ, ಬಡವರಿಗೆ ಆರ್ಥಿಕ ಹೊರೆಯಾಗಲಿದೆ ಎಂದರು.

ಕಾಮಗಾರಿ ಕಾರ್ಯಸೂಚಿಯಲ್ಲಿ 3ಅಡಿ ಆಳದಲ್ಲಿ 5 ಇಂಚ್ ಪೈಪ್ ಅಳವಡಿಸಬೇಕು. ಆ ಹಳ್ಳವನ್ನು ಕಾಂಕ್ರಿಟ್‌ನಿಂದ ಮುಚ್ಚಬೇಕು. ಆದರೆ, ಕಳಪೆ ಪೈಪ್‌ಗಳನ್ನು ಅಳವಡಿಸಿ ಹಣ ಲಪಟಾಯಿಸಲಾಗಿದೆ. ಹೀಗಾಗಿ ಸಮಗ್ರ ತನಿಖೆಗೆ ಆಗ್ರಹಿಸಿ ಲೋಕಾಯುಕ್ತಕ್ಕೆ ದೂರು ಸಲ್ಲಿಸುತ್ತಿರುವುದಾಗಿ ತಿಳಿಸಿದರು.

ನನ್ನ ಅವಧಿಯಲ್ಲಿ 24x7 ಯೋಜನೆಯಡಿ 2016–17ರಲ್ಲಿ ಆರಂಭಗೊಂಡ ಕಾಮಗಾರಿ ಇನ್ನು ಪೂರ್ಣಗೊಂಡಿಲ್ಲ. ಆದರೂ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಪುರಸಭೆಗೆ ಹಸ್ತಾಂತರಿಸಿದೆ. ಇದರ ಹಿಂದೆ ಯಾರ ಪ್ರಭಾವ ಇದೆ. ಇದರ ಹಿಂದಿನ ಉದ್ದೇಶವೇನು ಎಂಬುದನ್ನು ಸಂಬಂಧಪಟ್ಟ ಅಧಿಕಾರಿಗಳು ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿದರು.

ನರೇಂದ್ರಸ್ವಾಮಿ ಅವಧಿಯಲ್ಲಿ ಮಳವಳ್ಳಿ ಕ್ಷೇತ್ರ ಅಭಿವೃದ್ಧಿಯಾಗಿಲ್ಲ ಎಂಬ ಶಾಸಕರ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ವಿಧಾನಸಭೆ ಅಧಿವೇಶನ ಪ್ರಾರಂಭವಾಗಲಿದ್ದು, ನನ್ನ 10 ವರ್ಷದ ಅವಧಿಯಲ್ಲಿ ಕ್ಷೇತ್ರದಲ್ಲಿ ಆಗಿರುವ ಅಭಿವೃದ್ಧಿ ಕಾರ್ಯದ ಬಗ್ಗೆ ಪೂರಕ ದಾಖಲೆಗಳಿವೆ. ಕೊಡುತ್ತೇನೆ ನಂತರ ಮಾತನಾಡಲಿ ಎಂದು ಸವಾಲು ಹಾಕಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ. ಗಂಗಾಧರ್, ಕಾಂಗ್ರೆಸ್ ಮುಖಂಡ ವಿಜಯ್ ರಾಮೇಗೌಡ, ಜಿಪಂ ಮಾಜಿ ಉಪಾಧ್ಯಕ್ಷ ಸುರೇಶ್ ಕಂಠಿ ಹಾಜರಿದ್ದರು.

ಇದೊಂದು ಶಾಪಗ್ರಸ್ಥ ಬಜೆಟ್

"ಕೇಂದ್ರ ಸರ್ಕಾರದ ಬಜೆಟ್ ನಿರಾಶದಾಯಕ, ಕೃಷಿ, ರೈತ ವಿರೋಧಿ ಬಜೆಟ್ ಆಗಿದೆ. ಸಬ್ಸಿಡಿಗಳನ್ನು ಕಡಿತಗೊಳಿಸಿರುವುದರಿಂದ ರೈತರಿಗೆ ಯಾವುದೇ ಪ್ರಯೋಜನ ವಿಲ್ಲ. ಜಿಲ್ಲೆಗೆ ಯಾವುದೇ ಯೋಜನೆ ನೀಡಿಲ್ಲ. ಇದೊಂದು ಶಾಪಗ್ರಸ್ಥ ಬಜೆಟ್.

–ಪಿ.ಎಂ.ನರೇಂದ್ರಸ್ವಾಮಿ, ಮಾಜಿ ಸಚಿವರು.

ಕೆರೆಗಳಲ್ಲಿ ಮೀನುಗಾರಿಕೆಗೆ ಇ ಟೆಂಡರ್ ನಡೆಸಿ

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಜಯರಾಮ್ ರಾಯ್‌ಪುರ



ಮಂಡ್ಯ, ಫೆ.2– ಮೀನುಗಾರಿಕೆ ಇಲಾಖೆ ವ್ಯಾಪ್ತಿಯ ಕೆರೆಗಳನ್ನು ಇ ಹರಾಜು ಮಾಡಿದ್ದರಿಂದ ಹೆಚ್ಚಿನ ಆದಾಯ ಬರುತ್ತಿದ್ದು, ಗ್ರಾಪಂ ವ್ಯಾಪ್ತಿಯ ಕೆರೆಗಳಲ್ಲಿ ಮೀನುಗಾರಿಕೆ ನಡೆಸಲು ಇ ಹರಾಜು ಮಾಡುವುದು ಉತ್ತಮ ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಜಯರಾಮ್ ರಾಯ್‌ಪುರ ತಿಳಿಸಿದರು.

ನಗರದ ಜಿಪಂ ಸಭಾಂಗಣದಲ್ಲಿ ಗುರುವಾರ ನಡೆದ ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

ಮಾ.31ರೊಳಗೆ ಇಲಾಖೆಗಳು ತಮಗೆ ನೀಡಿರುವ ಗುರಿ ಸಾಧಿಸಿ ಶೇ.100ರಷ್ಟು ಸಾಧನೆ ಮಾಡಿ ಎಂದ ಅವರು, ಮುಂದಿನ ಸಾಲಿಗೆ ಇಲಾಖೆಗೆ ಅವಶ್ಯಕತೆ ಇರುವ ಹೊಸ ಯೋಜನೆಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡದರು.

ಕೇಂದ್ರ ಕಚೇರಿಯೊಂದಿಗೆ ಸಮನ್ವಯ ಸಾಧಿಸಿ ಗಣಿಗಾರಿಕೆಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಡ್ರೋನ್ ಸರ್ವೇ ನಡಸಿ ವರದಿ ನೀಡುವಂತೆ ಗಣಿಗಾರಿಕೆ ಇಲಾಖೆ ಹಿರಿಯ ಭೂ ವಿಜ್ಞಾನಿ ಪದ್ಮಜಾ ಅವರಿಗೆ ತಿಳಿಸಿದರು. ಮಧುಮೇಹ ಹಾಗೂ ರಕ್ತದೊತ್ತಡ ರೋಗಿಗಳ ಸಂಖ್ಯೆ ಹೆಚ್ಚಳವಾಗುತ್ತಿದೆ. ಸಾರ್ವಜನಿಕರು ಪರೀಕ್ಷೆಗೆ ಒಳಪಡಬೇಕು. ಆಹಾರ ಪದ್ಧತಿ ಹಾಗೂ ಜೀವನ ಶೈಲಿ ಬದಲಾವಣೆಯಾಗಬೇಕು. ಇದರ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸಬೇಕು. ಮನೆ ಮನೆಗೆ ಭೇಟಿ ನೀಡಿ ಪರೀಕ್ಷೆಗೆ ಒಳಪಡಿಸಿ ರೋಗಿಗಳನ್ನು ಪತ್ತೆ ಹಚ್ಚಿ ಅವರಿಗೆ ಔಷಧಿ ತಲುಪಿಸಿ ನಿಯಂತ್ರಿಸಿದರೆ ಹೃದಯ, ನರ, ಮೂತ್ರಪಿಂಡಕ್ಕೆ ಸಂಬಂಧಿಸಿದ ರೋಗಗಳನ್ನು ನಿಯಂತ್ರಿಸಬಹುದು ಎಂದರು.

ಜಿಲ್ಲಾಧಿಕಾರಿ ಡಾ.ಹೆಚ್.ಎನ್.ಗೋಪಾಲಕೃಷ್ಣ ಮಾತನಾಡಿ, ಆಯುಷ್ಮಾನ್ ಆರೋಗ್ಯ ಕಾರ್ಡ್‌ಗೆ ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ನೋಂದಾಯಿಸಲು ಗ್ರಾಮ ಒನ್ ಅವರನ್ನು 'ಜಿಲ್ಲಾಧಿಕಾರಿಗಳ ನಡೆ ಹಳ್ಳಿಗಳ ಕಡೆ' ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಸರ್ಕಾರಿ ಕಾರ್ಯಕ್ರಮಗಳಿಗೆ ನಿಯೋಜಿಸಿ ಸ್ಥಳದಲ್ಲೇ ಆಯುಷ್ಮಾನ್ ಆರೋಗ್ಯ ಯೋಜನೆಗೆ ನೋಂದಣಿ ಮಾಡಿ ಉತ್ತಮ ಸಾಧನೆ ಮಾಡುವಂತೆ ತಿಳಿಸಿದರು. ಜಿಲ್ಲಾ ಆರೋಗ್ಯಾಧಿಕಾರಿ ಡಾ.ಧನಂಜಯ್ ಮಾತನಾಡಿ, ಮುಂದಿನ ಸಾಲಿನಲ್ಲಿ 15ನೇ ಹಣಕಾಸು ಯೋಜನೆಯಡಿ ಆಶಾ ಕಾರ್ಯಕರ್ತೆಯರಿಗೆ ಟ್ಯಾಬ್ ವಿತರಿಸಲು ಯೋಜಿಸಲಾಗುತ್ತಿದೆ. ಮನೆ ಮನೆ ಭೇಟಿ ನೀಡಿದಾಗ ಟ್ಯಾಬ್ ಮೂಲಕ ವೈದ್ಯರ ಸಲಹೆ ಆನ್‌ಲೈನ್ ಮೂಲಕ ನೀಡಿದರೆ ಚಿಕಿತ್ಸೆಯಲ್ಲಿ ಹೆಚ್ಚಿನ ಪರಿಣಾಮ ಬೀರಲಿದೆ ಎಂದರು.

ಜಿಪಂ ಸಿಇಓ ಶಾಂತ ಎಲ್ ಹುಲ್ಮನಿ ಮಾತನಾಡಿ, ನರೇಗಾ ಯೋಜನೆಯಡಿ ಕೆಲಸಗಳು ಕ್ಷಿಪ್ರಗತಿಯಲ್ಲಿ ಸಾಗಬೇಕು. ನೀಡಿರುವ ಗುರಿ ಸಾಧಿಸಬೇಕು. ಜಿಲ್ಲೆಯಲ್ಲಿ ನರೇಗಾ ಯೋಜನೆಯಡಿ 1155 ಶಾಲೆಗಳಲ್ಲಿ ಆಟದ ಮೈದಾನ ನಿರ್ಮಿಸಲು ಯೋಜಿಸಲಾಗಿದೆ. ಇದರಲ್ಲಿ 116 ಪೂರ್ಣಗೊಂಡಿದ್ದು, 363 ಪ್ರಗತಿಯಲ್ಲಿದೆ. ಶಿಕ್ಷಣ ಇಲಾಖೆಯವರು ಸ್ಥಳೀಯ ಗ್ರಾಪಂ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಉಳಿದ ಕಾಮಗಾರಿ ಪ್ರಾರಂಭಿಸಬೇಕು ಎಂದರು. ಸಭೆಯಲ್ಲಿ ಜಿಪಂ ಉಪಕಾರ್ಯದರ್ಶಿ ಸಂಜೀವಪ್ಪ ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ ಜಯವಿಭವಸ್ವಾಮಿ, ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಬೆಂಕಿ ನಂದಿಸಲು ಹೋದ ವ್ಯಕ್ತಿ ಉಸಿರುಗಟ್ಟಿ ಸಾವು



ನಾಗಮಂಗಲ, ಫೆ.2– ಅರಣ್ಯದಲ್ಲಿ ಬೆಂಕಿ ನಂದಿಸಲು ಹೋದ ವ್ಯಕ್ತಿಯೊಬ್ಬ ಉಸಿರುಗಟ್ಟಿ ಸಾವಿಗೀಡಾದ ಘಟನೆ ಕೆ.ಆರ್.ಪೇಟೆ ರಸ್ತೆಯ ಸಾಮಾಜಿಕ ಅರಣ್ಯ ಪ್ರದೇಶದಲ್ಲಿ ನಡೆದಿದೆ.

ಹೊಣಕೆರೆ ಹೋಬಳಿ ಮಲ್ಲಸಂದ್ರ ಗ್ರಾಮದ ನಿವಾಸಿ ಕುಮಾರಸ್ವಾಮಿ (53) ಸಾವನ್ನಪ್ಪಿದವರು. ಬುಧವಾರ ಮಧ್ಯಾಹ್ನ ಇಲ್ಲಿನ ಸಾಮಾಜಿಕ ಅರಣ್ಯ ಪ್ರದೇಶದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಈ ವೇಳೆ ಕುಮಾರಸ್ವಾಮಿ ಅರಣ್ಯಾಧಿಕಾರಿ ಮಂಜುನಾಥ್‌ಗೆ ವಿಷಯ ತಿಳಿಸಿ ಸ್ಥಳಕ್ಕೆ ದೌಡಾಯಿಸಿ, ಬೆಂಕಿ ನಂದಿಸುವ ವೇಳೆ ಸ್ಥಳದಲ್ಲಿದ್ದ ಭಾರೀ ಹೊಗೆಯಿಂದ ಉಸಿರುಗಟ್ಟಿ ಸಾವನ್ನಪ್ಪಿದ್ದಾರೆ. ಸಂಜೆ 7 ಗಂಟೆಯಾದರೂ ಮನೆಗೆ ಕುಮಾರಸ್ವಾಮಿ ಬಾರದ ಹಿನ್ನಲೆ ಗ್ರಾಮದ ನಿವಾಸಿಗಳಾದ ಆನಂದ್, ಜಯರಾಮು ಇನ್ನಿತರರು ಅರಣ್ಯಕ್ಕೆ ಹೋಗಿ ನೋಡಲಾಗಿ ಸಾವನ್ನಪ್ಪಿರುವುದು ಬೆಳಕಿಗೆ ಬಂದಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಎಸಿಎಫ್ ಶಂಕರೇಗೌಡ ಪರಿಶೀಲನೆ ನಡೆಸಿ, ಸೂಕ್ತ ಪರಿಹಾರ ನೀಡುವುದಾಗಿ ತಿಳಿಸಿದರು. ಈ ಸಂಬಂಧ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಾಘ ಶುದ್ಧ ಹುಣ್ಣಿಮೆ ಹಿನ್ನೆಲೆ: ಜಿಲ್ಲಾಧಿಕಾರಿ ಭೇಟಿ, ಪರಿಶೀಲನೆ

ಶ್ರೀರಂಗಪಟ್ಟಣ, ಫೆ.2– ಶ್ರೀನಿಮಿಷಾಂಬ ದೇವಸ್ಥಾನದಲ್ಲಿ ಫೆ.5ರಂದು ನಡೆಯುವ ಮಾಘ ಶುದ್ಧ ಹುಣ್ಣಿಮೆಯಲ್ಲಿ ಲಕ್ಷಾಂತರ ಭಕ್ತರು ಭಾಗವಹಿಸುವ ಹಿನ್ನೆಲೆಯಲ್ಲಿ ಗುರುವಾರ ಸಂಜೆ ಜಿಲ್ಲಾಧಿಕಾರಿ ಡಾ.ಹೆಚ್.ಎನ್. ಗೋಪಾಲಕೃಷ್ಣ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ವೇಳೆ ಭಕ್ತರಿಗೆ ಅಗತ್ಯ ಮೂಲ ಸೌಕರ್ಯ, ಪಾರ್ಕಿಂಗ್, ಸ್ವಚ್ಛತೆ, ನದಿಯ ಸ್ನಾನಘಟ್ಟಗಳ ಬಳಿ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿ ಸಲಹೆ ಸೂಚನೆ ನೀಡಿದರು. ಈ ವೇಳೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್. ಯತೀಶ್, ಜಿಪಂ ಸಿಇಓ ಶಾಂತ ಎಲ್. ಹುಲ್ಮನಿ, ತಹಸೀಲ್ದಾರ್ ಶ್ವೇತ, ದೇವಸ್ಥಾನ ಕಾರ್ಯ ನಿರ್ವಾಹಕ ಅಧಿಕಾರಿ ಮಹೇಶ್ ಸೇರಿದಂತೆ ಇನ್ನಿತರರಿದ್ದರು.





ಹಿಂದುಳಿದವರು ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಕೊಡಿಸಿ

ಕೆ.ಆರ್.ಪೇಟೆ, ಫೆ.2– ಯಾವುದೇ ಸಮುದಾಯ ಶಿಕ್ಷಣದಲ್ಲಿ ಹಿಂದುಳಿದರೆ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ. ಹಾಗಾಗಿ ಹಿಂದುಳಿದ ವರ್ಗಗಳು ಕಡ್ಡಾಯವಾಗಿ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವ ಮೂಲಕ ಅಭಿವೃದ್ಧಿ ಸಾಧಿಸಬೇಕು ಎಂದು ಸಮಾಜ ಸೇವಕರೂ ಆದ ಆರ್‌ಟಿಓ ಅಧಿಕಾರಿ ಮಲ್ಲಿಕಾರ್ಜುನ್ ಅಭಿಪ್ರಾಯಪಟ್ಟರು.

ತಾಲೂಕಿನ ಕಾಮನಹಳ್ಳಿಯಲ್ಲಿ ಕರ್ನಾಟಕ ಪ್ರದೇಶ ಯುವ ಕುರುಬರ ಸಂಘ ಗ್ರಾಮ ಘಟಕ ಉದ್ಘಾಟಿಸಿ ಮಾತನಾಡಿದರು. ಸಮುದಾಯಕ್ಕೆ ತೊಂದರೆಯಾದಾಗ ಸಂಘಟನೆಗಳು ಅದರ ವಿರುದ್ಧ ಹೋರಾಡುವ ಮೂಲಕ ನ್ಯಾಯ ಕೊಡಿಸಲು ಮುಂದಾಗಬೇಕು. ಶಿಕ್ಷಣಕ್ಕೆ ಹೆಚ್ಚು ಗಮನ ಹರಿಸಬೇಕು. ಸಮುದಾಯದಲ್ಲಿ ಸಂಘಟನೆ ಬಲಪಡಿಸಬೇಕು. ಹೋರಾಡುವ ಮೂಲಕ ಸಮುದಾಯಕ್ಕೆ ಸಂಘ ಬೆನ್ನೆಲುಬಾಗಿ ಇಲ್ಲಬೇಕು. ಅಲ್ಲದೇ ಘರ್ಷಣೆಗೆ ಅವಕಾಶ ನೀಡದೇ ಸಂಘಗಳು ಗ್ರಾಮದಲ್ಲಿ ಶಾಂತಿ ಸೌಹಾರ್ದತೆಯಿಂದ ಬದುಕಲು ಅವಕಾಶ ಮಾಡಿಕೊಡಬೇಕು ಎಂದರು.

ಈ ವೇಳೆ ರಾಜ್ಯ ಪ್ರದೇಶ ಯುವ ಕುರುಬರ ಸಂಘದ ಸಹ ಕಾರ್ಯದರ್ಶಿ ಯತೀಶ್, ತಾಲೂಕು ಘಟಕದ ಅಧ್ಯಕ್ಷ ನಿಂಗೇಗೌಡ, ತಾಲೂಕು ಕಾರ್ಯಾಧ್ಯಕ್ಷ ರವಿ, ಟೌನ್ ಘಟಕದ ಅಧ್ಯಕ್ಷ ಸತೀಶ್, ಕಾಮನಹಳ್ಳಿ ಘಟಕದ ನೂತನ ಅಧ್ಯಕ್ಷ ಗಿರೀಗೌಡ, ಉಪಾಧ್ಯಕ್ಷ ಸತೀಶ್, ದೇವೇಗೌಡ, ಕಾರ್ಯದರ್ಶಿ ರಂಗಸ್ವಾಮಿ, ಖಜಾಂಚಿ ಅಶೋಕ್, ಗ್ರಾಪಂ ಸದಸ್ಯ ಮಂಜುನಾಥ್, ಮಾಜಿ ಸದಸ್ಯ ಅಶೋಕ್, ಪಿಎಸಿಎಸ್ ಮಾಜಿ ಅಧ್ಯಕ್ಷ ವರದರಾಜು, ಬಾಣೇಗೌಡ, ಸಂಘಟನಾ ಕಾರ್ಯದರ್ಶಿ ಬೀರೇಶ್, ಉಪಾಧ್ಯಕ್ಷ ಕುಮಾರ್, ದಿಲೀಪ್, ಯೋಗೇಶ್, ಜವರೇಗೌಡ, ಶಿವರಾಜು ಸೇರಿದಂತೆ ಇತರರಿದ್ದರು.



ಕೆ.ಆರ್.ಪೇಟೆ ತಾಲೂಕಿನ ಹೇಮಾವತಿ ನದಿ ದಡದಲ್ಲಿ ನಡೆದ ಶ್ರೀ ಕಲ್ಯಾಣ ವೆಂಕಟರಮಣಸ್ವಾಮಿ ತೆಪ್ಪೋತ್ಸವ ಬುಧವಾರ ರಾತ್ರಿ ಅದ್ದೂರಿಯಾಗಿ ನಡೆಯಿತು. ಈ ವೇಳೆ ಸಚಿವ ನಾರಾಯಣಗೌಡ, ಜಿಲ್ಲಾಧಿಕಾರಿ ಡಾ.ಗೋಪಾಲಕೃಷ್ಣ, ತಹಸೀಲ್ದಾರ್ ಎಂ.ವಿ.ರೂಪ, ರಾಜಸ್ವ ನಿರೀಕ್ಷಕಿ ಚಂದ್ರಕಲಾ ಸೇರಿದಂತೆ ಸಾವಿರಾರು ಭಕ್ತರು ಇದ್ದರು.

ದೇಶದ ಸಮಗ್ರ ಅಭಿವೃದ್ಧಿ ದೃಷ್ಟಿಕೋನದ ಕೇಂದ್ರ ಬಜೆಟ್

•ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಣ್ಣನೆ •ಪ್ರಧಾನಿ ಮೋದಿಯವರ ಪ್ರಗತಿದಾಯಕ ಚಿಂತನೆ ಪ್ರತಿಬಿಂಬ


ಬೆಂಗಳೂರು, ಫೆ.2 (ಕೆಎಂಶಿ)–ಅಮೃತ ಕಾಲದಲ್ಲಿ ರಾಷ್ಟ್ರದ ಪ್ರಗತಿಗೆ ಭದ್ರ ಬುನಾದಿ ಹಾಕುವ ಎಲ್ಲ ಅಂಶಗಳಿದ್ದು, ಸಮಗ್ರ ಅಭಿವೃದ್ಧಿಯ ದೃಷ್ಟಿಕೋನದ ಪ್ರಗತಿಪರ ಕೇಂದ್ರ ಬಜೆಟ್ ಮಂಡಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಧಾನಮಂತ್ರಿಯವರು ಭಾರತವನ್ನು ಅತ್ಯಂತ ವೇಗವಾಗಿ ಪ್ರಗತಿಯತ್ತ ಒಯ್ಯುವ ಗುರಿಯನ್ನು ಹೊಂದಿದ್ದಾರೆ. ಸ್ವಚ್ಛ ಭಾರತದಿಂದ ಹಿಡಿದು ಆರ್ಥಿಕ ಸುಧಾರಣೆಗಾಗಿ ದಿಟ್ಟ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದರು. ಕೇಂದ್ರ ಬಜೆಟ್‌ನಲ್ಲಿನ ಎಲ್ಲ ಯೋಜನೆಗಳಿಂದ ಕರ್ನಾಟಕದ ಪಾಲು ಬರಲಿದೆ. ಎಂಎಸ್‌ಎಂಇ, ಜಲಜೀವನ ಮಿಷನ್, ಗ್ರಾಮೀಣಾಭಿವೃದ್ಧಿ, ಪ್ರಧಾನ ಮಂತ್ರಿ ಆವಾಸ್ ಯೋಜನೆ, ನಗರ ಮೂಲ ಸೌಕರ್ಯ ಸೇರಿದಂತೆ ಹಲವು ಯೋಜನೆಗಳಿಂದ ಕರ್ನಾಟಕಕ್ಕೆ ಪಾಲು ದೊರೆಯಲಿದೆ. ಕರ್ನಾಟಕ ಪ್ರಗತಿಪರ ರಾಜ್ಯವಾಗಿದ್ದು, ಮೂಲಭೂತ ಸೌಕರ್ಯಕ್ಕೆ ಮಹತ್ವ ನೀಡಲಾಗುತ್ತಿದೆ ಎಂದು ಹೇಳಿದರು.

ದೇಶದ ಆರ್ಥಿಕ ಸ್ಥಿತಿಯನ್ನು ವಿಶ್ವದ ಇತರ ಪ್ರಗತಿ ಹೊಂದಿರುವ ದೇಶಗಳಿಗೆ ಹೋಲಿಸಿದಾಗ ನಮ್ಮ ದೇಶ ಪ್ರಗತಿಯಾಗುತ್ತಿರುವುದು ಕಂಡು ಬರುತ್ತದೆ. ನಮ್ಮ ಬೆಳವಣಿಗೆ ಪ್ರಮಾಣ 6 ರಿಂದ 6.8ರಷ್ಟಿದೆ.

ಬೇರೆ ಅಭಿವೃದ್ಧಿ ಹೊಂದಿದ ದೇಶಗಳ ಪ್ರಗತಿ ಕೇವಲ ಶೇ.2ರಷ್ಟಿದೆ. ದೇಶದ ಆರ್ಥಿಕತೆಗೆ ಭದ್ರ ಬುನಾದಿಯಿದೆ. ಕೃಷಿ, ಸೇವಾ ಹಾಗೂ ಉತ್ಪಾದನಾ ವಲಯದಲ್ಲಿ ಅಭಿವೃದ್ಧಿಯನ್ನು ಕಾಣುತ್ತಿದ್ದು, ಒಟ್ಟಾರೆ ಜಿಡಿಪಿ ಆರೋಗ್ಯಕರವಾಗಿದೆ.

ಈ ಬಜೆಟ್ ಪರಿಣಾಮಗಳ ಬಗ್ಗೆ ತಿಳಿಯುವುದು ಮುಖ್ಯ. ಈಗಿರುವ ಅಭಿವೃದ್ಧಿಗೆ ಇನ್ನಷ್ಟು ಬಲ ತುಂಬುವ ಮೂಲಭೂತ ಬದಲಾವಣೆಗಳು ಆಗಿವೆ ಎಂದರು.



ಕೇಂದ್ರದ ಬಜೆಟ್‌ನಲ್ಲಿ ಕ್ಯಾಪಿಟಲ್ ಔಟ್ ಲೇ 10 ಲಕ್ಷ ಕೋಟಿ ರೂ. ಹೆಚ್ಚಳವಾಗಿದೆ. ಹಿಂದಿನ ಸರ್ಕಾರಗಳ ಅವಧಿಯಲ್ಲಿ ನೋಡಿದಾಗ 25000ರಷ್ಟು ಹೆಚ್ಚಳವಾಗುತ್ತಿತ್ತು.

ಈಗಿನ ಹೆಚ್ಚಳ ಮಾದರಿ ಬದಲಾವಣೆಯಾಗಿದ್ದು, ದೇಶದ ಅಭಿವೃದ್ಧಿಯ ವೇಗವನ್ನೂ ಹೆಚ್ಚಿಸಲಿದೆ. ಈ ಹೆಚ್ಚಳದಿಂದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯೂ ಸಾಧ್ಯವಾಗುತ್ತದೆ. ಇದಲ್ಲದೇ ಸಾಮಾಜಿಕ ಮೂಲ ಸೌಕರ್ಯಗಳಿಗೆ ಹೆಚ್ಚಿನ ಅನುದಾನ ನೀಡಲಾಗಿದ್ದು, ಬರುವಂತಹ ದಿನಗಳಲ್ಲಿ ಸಕಾರಾತ್ಮಕ ಅಭಿವೃದ್ಧಿ ನೋಡಲು ಸಾಧ್ಯವಾಗುತ್ತದೆ ಎಂದರು.

ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿಗೆ ಕೇಂದ್ರ ಬಜೆಟ್‌ನಲ್ಲಿ ಒತ್ತು ನೀಡಲಾಗಿದ್ದು, ಹಳ್ಳಿಗಾಡಿನಲ್ಲಿ ಮನೆಗಳ ನಿರ್ಮಾಣಕ್ಕೆ ಹೆಚ್ಚಿನ ಪ್ರಮಾಣದ ಅನುದಾನ, ಗ್ರಾಮೀಣ ಮನೆಗಳಿಗೆ ಕುಡಿಯುವ ನೀರು ಯೋಜನೆಗೆ 70 ಸಾವಿರ ಕೋಟಿ ರೂ. ಅನುದಾನ ಒದಗಿಸಲಾಗಿದೆ.

2024–25ರೊಳಗೆ ಎಲ್ಲ ಮನೆಗಳಿಗೆ ಕುಡಿಯುವ ನೀರು ಒದಗಿಸುವ ಗುರಿ ಸಾಧಿಸಲು ಹಾಗೂ ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ಅನುದಾನ ಹೆಚ್ಚಳ ಮಾಡಿದ್ದಾರೆ. ಪ್ರತಿಬಾರಿ ಸಣ್ಣ ಉದ್ಯಮಗಳಿಗೆ ಮಹತ್ವ ಕೊಡುತ್ತಿಲ್ಲ ಎಂಬ ಆರೋಪವಿತ್ತು. ಎಂಎಸ್‌ಎಂಇಗಳಿಗೆ ಮಿತಿಗಳನ್ನು ಹೆಚ್ಚಿಸಿದ್ದಾರೆ. 3 ಕೋಟಿ ರೂ. ವರೆಗಿನ ಉದ್ಯಮಗಳಿಗೆ ತೆರಿಗೆ ಲಾಭವನ್ನು ನೀಡಿದ್ದಾರೆ.

ಸಣ್ಣ ಉದ್ಯಮಗಳಿಗೆ 2 ಲಕ್ಷ ಕೋಟಿಯಷ್ಟು ಕೊಲಾಟರಲ್ ಗ್ಯಾರಂಟಿಯನ್ನು ಕೇಂದ್ರ ಸರ್ಕಾರ ನೀಡುತ್ತಿದೆ. ಸಾಲದ ಬಡ್ಡಿಯನ್ನು ಶೇ.1ರಷ್ಟು ಕಡಿಮೆ ಮಾಡಲಾಗಿದೆ. ಈ ಎಲ್ಲ ಕ್ರಮಗಳಿಂದ ಸಣ್ಣ ಉದ್ದಿಮೆಗಳಿಗೆ ಪ್ರೋತ್ಸಾಹ ನೀಡಲಾಗಿದೆ ಎಂದರು.

ಆರೋಗ್ಯ ಮತ್ತು ಶಿಕ್ಷಣದ ಅನುದಾನವನ್ನು ಹೆಚ್ಚಿಸಲಾಗಿದೆ. ಮಹಿಳೆಯರ ಸ್ವಸಹಾಯ ಗುಂಪುಗಳಿಗೆ ಆರ್ಥಿಕ ಸಹಾಯ ನೀಡಿ, ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವ ಯೋಜನೆಯ ಮೂಲಕ ಮಹಿಳೆಯರ ಸಾಮರ್ಥ್ಯ ಉಪಯೋಗ ಮಾಡಿಕೊಳ್ಳುವ ಕೆಲಸವನ್ನು ಮಾಡಿದ್ದಾರೆ.

ಉದ್ಯೋಗ ಹೆಚ್ಚಳ ಹಾಗೂ ಕೌಶಲ್ಯ ಅಭಿವೃದ್ಧಿಗೆ ಆದ್ಯತೆ ನೀಡಿದ್ದಾರೆ. ಕೃಷಿಗೆ 1 ಲಕ್ಷ ಕೋಟಿ ರೂ.ಗಿಂತ ಹೆಚ್ಚಿನ ಅನುದಾನ ನೀಡಿ ಕೃಷಿಗೆ ಆದ್ಯತೆ ನೀಡಲಾಗಿದೆ ಎಂದರು.

ಭದ್ರಾ ಮೇಲ್ದಂಡೆ ಯೋಜನೆ 1964ರಿಂದಲೇ ಬೇಡಿಕೆಯಿದ್ದರೂ, 2008ರವರೆಗೂ ಯಾವುದೇ ನಿರ್ದಿಷ್ಟ ಕ್ರಮ ಆಗಿರಲಿಲ್ಲ. ನಮ್ಮ ಸರ್ಕಾರ ಬಂದ ಮೇಲೆ ಈ ಯೋಜನೆ ಜಾರಿಗೆ ಕ್ರಮ ಕೈಗೊಳ್ಳಲಾಗಿದೆ. ಪ್ರತಿಪಕ್ಷದವರು ಈ ಯೋಜನೆಗೆ ಈ ವರ್ಷ ಹಣ ಬರುವುದಿಲ್ಲ ಎನ್ನುತ್ತಾರೆ. ಆಯವ್ಯಯ ಇರುವುದೇ 2023–24ನೇ ಸಾಲಿಗೆ. ಮೊದಲು 16 ಟಿಎಂಸಿ ಇದ್ದದ್ದು, ಈಗ 23 ಟಿಎಂಸಿ ಅಡಿ ನೀರು ಹೆಚ್ಚಿಗೆ ಮಾಡಿದ್ದರಿಂದ ಯೋಜನೆಯ ವೆಚ್ಚವೂ ಹೆಚ್ಚಾಗಿದೆ.

ರಾಜ್ಯದ ಒಂದೇ ಯೋಜನೆಗೆ ಇಷ್ಟೊಂದು ಹಣ ಬಂದಿರುವುದಕ್ಕೆ ಸಂತೋಷ ಪಡಬೇಕು. ರಾಜ್ಯದ ಯೋಜನೆಗೆ ಇಷ್ಟು ದೊರೆತಿರುವುದಕ್ಕೆ ಪ್ರತಿಪಕ್ಷದವರಿಗೆ ನಿರಾಸೆಯಾಗಿರುವುದಕ್ಕೆ ಈ ರೀತಿಯ ವ್ಯಾಖ್ಯಾನ ಮಾಡುತ್ತಿದ್ದಾರೆ ಎಂದರು.

ನಗರಮೂಲ ಸೌಕರ್ಯಕ್ಕೆ ಹೆಚ್ಚಿನ ಒತ್ತು ನೀಡಿದ್ದಾರೆ. ಘನತ್ಯಾಜ್ಯ ನಿರ್ವಹಣೆಗೆ ವಿಶೇಷ ಅನುದಾನ ನೀಡಿದ್ದು, ಈ ಎಲ್ಲ ಯೋಜನೆಗಳಿಗೆ ರಾಜ್ಯಕ್ಕೆ ಅನುಕೂಲವಾಗಲಿದೆ.

ವೈಯಕ್ತಿಕ ಆದಾಯ ತೆರಿಗೆ ವಿಚಾರದಲ್ಲಿಯೂ ವಿನಾಯಿತಿ ನೀಡಿದ್ದರಿಂದ ಆರ್ಥಿಕ ಬೆಳವಣಿಗೆಗೆ ಆದ್ಯತೆ ದೊರೆಯಲಿದೆ. ಜನರ ಬಳಿ ಹೆಚ್ಚು ಹಣವಿದ್ದರೆ ಖರೀದಿ ಶಕ್ತಿ ಹೆಚ್ಚುತ್ತದೆ. ಸರ್ವಸ್ಪರ್ಶಿ, ಸರ್ವ ವ್ಯಾಪ್ತಿ ಆಗಿರುವ ಬಜೆಟ್ ಆಗಿದ್ದು, ಎಲ್ಲರ ಬದುಕಿಗೂ ಸಹಾಯ ಮಾಡುವಂತಹ ಬಜೆಟ್ ಅನ್ನು ಕೇಂದ್ರ ಸರ್ಕಾರ ಮಂಡಿಸಿದೆ ಎಂದು ತಿಳಿಸಿದರು.

ಮೇಕೆದಾಟು ಯೋಜನೆ ಪ್ರಾರಂಭ ಮಾಡುವಾಗಲೇ ಸರ್ಕಾರ ತಪ್ಪು ಮಾಡಿದೆ. ಹೀಗಾಗಿ ಅದು ಅಂತರರಾಜ್ಯ ವಿವಾದದಲ್ಲಿ ಸಿಕ್ಕಿಹಾಕಿಕೊಂಡಿದೆ. ಅಂದಿನ ಸರ್ಕಾರ ಮೇಕೆದಾಟು ವಿವಾದವೇ ಇಲ್ಲ ಎಂದರು. ಈಗ ಸುಪ್ರೀಂ ಕೋರ್ಟಿನಲ್ಲಿ ಸಿಕ್ಕಿಕೊಂಡಿದೆ. ಸುಪ್ರೀಂಕೋರ್ಟ್‌ನಿಂದ ಅಕಸ್ಮಾತ್ ಅನುಮತಿ ಬಂದರೆ ಹಣಕಾಸಿನ ವ್ಯವಸ್ಥೆ ಬಜೆಟ್‌ನಲ್ಲಿ ಇರಲಿ ಎಂದು ಅವಕಾಶ ಮಾಡಿಕೊಳ್ಳಲಾಗಿದೆ. ಅನುಮತಿ ಬಂದರೆ ನಾವು ಅನುದಾನ ಬಳಕೆ ಮಾಡಿಕೊಳ್ಳುತ್ತೇವೆ ಡಿಪಿಆರ್ ಅನುಮತಿ ಇಲ್ಲದೇ ಏನೂ ಮಾಡಲು ಸಾಧ್ಯವಿಲ್ಲ. ಡಿಪಿಆರ್ ಅನುಮತಿ ದೊರೆತರೆ, ಆದಷ್ಟೂ ಬೇಗನೆ ಕೆಲಸ ಪ್ರಾರಂಭವಾಗುತ್ತದೆ ಎಂದರು.

ಒಂದನೇ ಪುಟದಿಂದ

'ಆಸ್ತಿ ಕಾರ್ಡ್' ಪಡೆದಿಲ್ಲ

ಹೊಂದಿಕೊಂಡಂತಿರುವ 42 ಗ್ರಾಮ ಗಳಲ್ಲಿ ಸರ್ವೇ ಕಾರ್ಯ ಮುಗಿಸಿ ಖಾಸಗಿ ಹಾಗೂ ಸರ್ಕಾರಿ ಆಸ್ತಿಗಳ ಯುಪಿಓಆರ್ ಕಾರ್ಡ್‌ಗಳನ್ನು ತಯಾರಿಸಲಾಗಿದೆ. ಡೇಟಾ ಡಿಜಿಟೈಸಿಂಗ್, ಜಿಐಎಸ್ ಸರ್ವೆ ಆಧಾರದ ದಾಖಲೆ, ಲ್ಯಾಂಡ್ ಮ್ಯಾಪಿಂಗ್, ಮ್ಯುಟೇಷನ್ ಸೇರಿದಂತೆ ಆಸ್ತಿಗೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ಅದರಲ್ಲಿ ನಮೂದಿಸಲಾಗಿದೆ.

ಮಾಲೀಕತ್ವದ ದಾಖಲೆ: ಗ್ರಾಮಾಂತರ ಭಾಗದ ಜಮೀನುಗಳಿಗೆ ಆರ್‌ಟಿಸಿ ಇರುವಂತೆ ನಗರ ಪ್ರದೇಶದ ಆಸ್ತಿಗಳ ಮಾಲೀಕತ್ವ ದೃಢೀಕರಿಸಲು ಯುಪಿಓಆರ್ ಪ್ರಮುಖ ದಾಖಲೆ ಪತ್ರವಾಗಿದೆ. ಆಸ್ತಿಯ ವಿನ್ಯಾಸ, ಸಂಖ್ಯೆ, ಸ್ವರೂಪ, ಪ್ರದೇಶ ಅದರ ಮೇಲೆ ಬ್ಯಾಂಕ್ ಸಾಲವಿದೆಯೇ ಎಂಬಿತ್ಯಾದಿ ಮಾಹಿತಿ ಗಳನ್ನು ಹೊಂದಿರುವ ಯುಪಿಓಆರ್ ಆಸ್ತಿ ಮಾಲೀಕತ್ವವನ್ನು ಎತ್ತಿ ಹಿಡಿಯುತ್ತದೆ. ಆಸ್ತಿ ಖರೀದಿಸುವವರು ಸಾಲ ಸೌಲಭ್ಯಕ್ಕೆ ಅರ್ಜಿ ಸಲ್ಲಿಸಿದಾಗ, ನ್ಯಾಯಾಲಯದಲ್ಲಿ ಭೂವ್ಯಾಜ್ಯ ದಾಖಲಾದಾಗ ಈ ಕಾರ್ಡ್ ಆಸ್ತಿಯ ನಿಜವಾದ ಮಾಲೀಕತ್ವದ ಬಗ್ಗೆ ಯುಪಿಓಆರ್ ದಾಖಲೆಯು ಪ್ರಮುಖ ಪಾತ್ರ ವಹಿಸುತ್ತದೆ.

ಮಾಲೀಕರ ನಿರಾಸಕ್ತಿ: ಯೋಜನೆ ಆರಂಭವಾದಾಗ ಯಾವುದೇ ನಿವೇಶನ, ಮನೆ, ಭೂಮಿಯನ್ನು ಮತ್ತೊಬ್ಬರಿಗೆ ನೋಂದಣಿ ಮಾಡಿಕೊಡುವಾಗ ಯುಪಿಓಆರ್ ದಾಖಲೆ ಸಲ್ಲಿಸುವುದನ್ನು ಕಡ್ಡಾಯಗೊಳಿಸಲಾಗಿತ್ತು. ಕಾಲ ಕ್ರಮೇಣ ಸರ್ಕಾರವು ಕಡ್ಡಾಯ ಎಂಬುದನ್ನು ಐಚ್ಛಿಕ ಎಂದು ಹೇಳಿರುವ ಹಿನ್ನೆಲೆಯಲ್ಲಿ ಮಾಲೀಕರು ಪ್ರಾಪರ್ಟಿ ಕಾರ್ಡ್‌ಗಳನ್ನು ಪಡೆಯಲು ಈಗ ನಿರಾಸಕ್ತಿ ತೋರುತ್ತಿದ್ದಾರೆ.

ಭೂಮಾಪನ ಇಲಾಖೆ ಉಪನಿರ್ದೇಶಕರಾದ ಯುಪಿಓಆರ್ ಯೋಜನಾಧಿಕಾರಿ ಇ.ಗೋಪಾಲಯ್ಯ, ಸೂಪರಿಂಟೆಂಡೆಂಟ್ ಎಂ.ಪಿ.ನಾಗೇಶ್ ಹಾಗೂ ಇತರೆ ಅಧಿಕಾರಿಗಳು ಮತ್ತು ಸಿಬ್ಬಂದಿ ಈ ಯೋಜನೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಫೆ.15ರ ನಂತರ ಸ್ವಮಿತ್ವ, ರೀಸರ್ವೇ ಕಾರ್ಯಾರಂಭ

ಮೈಸೂರಿನ ಹೊಸ ಜಿಲ್ಲಾ ಕಚೇರಿಗಳ ಸಂಕೀರ್ಣ ಪ್ರಕ್ರಿಯೆಗೆ ಸಿದ್ಧತೆ

ಮೈಸೂರು, ಫೆ.2(ಆರ್‌ಕೆ)– ಫೆಬ್ರವರಿ 15ರ ನಂತರ ಗ್ರಾಮಾಂತರ ಪ್ರದೇಶದಲ್ಲಿ ಆಸ್ತಿಗಳ ರೀಸರ್ವೇ ಮತ್ತು ಸ್ವಮಿತ್ವ ಕಾರ್ಯ ಆರಂಭವಾಗಲಿದೆ.

ನಗರ ಪ್ರದೇಶದಲ್ಲಿ ಯುಪಿಓಆರ್ ನೀಡುವಂತೆ ಜಿಲ್ಲೆಯ ಗ್ರಾಮೀಣ ಭಾಗದ ಆಸ್ತಿಗಳನ್ನು ಸರ್ವೆ ಮಾಡಿ ಮಾಲೀಕತ್ವ ದೃಢೀಕರಿಸುವ ಸ್ವಮಿತ್ವ (Survey of Villages and Mapping with Improvised Technology in Village Areas) ಹಾಗೂ ರೀಸರ್ವೇ ದಾಖಲೆ ಪತ್ರ ನೀಡುವ ಯೋಜನೆಗೆ ಭೂ ಮಾಪನಾ ಇಲಾಖೆ ಮುಂದಾಗಿದೆ. ಡ್ರೋಣ್ ಟೆಕ್ನಾಲಜಿ ಮತ್ತು ಗ್ರಾಮಗಳ ಸರ್ವೆ ನಂಬರ್ ಆರ್‌ಟಿಸಿ ಹಾಗೂ ಇತರೆ ಭೂ ದಾಖಲೆಗಳ ಆಧಾರದಲ್ಲಿ ಆಸ್ತಿಗಳ ಮಾಲೀಕತ್ವವನ್ನು ಬಿಂಬಿಸುವಂತೆ ಸ್ವಮಿತ್ವ ಪತ್ರ ನೀಡಲಾಗುವುದು ಎಂದು ಭೂ ಮಾಪನ ಇಲಾಖೆ ಮೈಸೂರು ವಿಭಾಗದ ಜಂಟಿ ನಿರ್ದೇಶಕ ಪ್ರಸಾದ್ ವಿ.ಕುಲಕರ್ಣಿ ತಿಳಿಸಿದ್ದಾರೆ.

ಯುಪಿಓಆರ್ ಸಂಬಂಧಿಸಿದ ಮಾಹಿತಿ ಪಡೆಯಲು http://rdserrices.karnataka.gov.in/upor_citizen ಸಂಪರ್ಕಿಸಿ. ಅಥವಾ ನಜರ್‌ಬಾದ್‌ನ ಮಿನಿ ವಿಧಾನಸೌಧದ ಬಳಿ ಇರುವ ಯುಪಿಓಆರ್ ಕಚೇರಿಯಲ್ಲಿ ಮಾಹಿತಿ ಪಡೆಯಬಹುದಾಗಿದೆ.

ಗ್ರಾಮ ಮಟ್ಟದ ಮ್ಯಾಪಿಂಗ್, ಪ್ಲ್ಯಾನಿಂಗ್ ಏರಿಯಾ ಸ್ವರೂಪವನ್ನು ಡ್ರೋಣ್ ತಂತ್ರಜ್ಞಾನದ ಮೂಲಕ ಸರ್ವೆ ಮಾಡಿ ಆಸ್ತಿಗಳ ಮಾಲೀಕರು, ವಿಸ್ತೀರ್ಣ, ಸ್ವರೂಪದ ಬಗ್ಗೆ ಲಭ್ಯವಿರುವ ಕಂದಾಯ ದಾಖಲೆಗಳ ಆಧಾರದಲ್ಲಿ ರೀಸರ್ವೇ ಮತ್ತು ಸ್ವಮಿತ್ವ ದಾಖಲೆಗಳನ್ನು ವಿತರಿಸಲು ಇಲಾಖೆ ಆಯುಕ್ತರ ಸೂಚನೆ ಮೇರೆಗೆ ಸರ್ವೇಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಅದಕ್ಕಾಗಿ ಮೈಸೂರಿನ ಸಿದ್ದಾರ್ಥನಗರ ಬಳಿ ಬನ್ನೂರು ರಸ್ತೆಯಲ್ಲಿರುವ ಹೊಸ ಜಿಲ್ಲಾ ಕಚೇರಿಗಳ ಸಂಕೀರ್ಣದಲ್ಲಿ ಭೂ ಮಾಪನ ಶಾಖೆಯ ರೀಸರ್ವೇ ಘಟಕವನ್ನು ಸ್ಥಾಪಿಸಲಾಗಿದೆ. ಭೂ ಮಾಪನಾ ಉಪನಿರ್ದೇಶಕಿ ಸೀಮಂತ ಅವರ ಮೇಲ್ವಿಚಾರಣೆ ಯಲ್ಲಿ ರೀಸರ್ವೇ ಮತ್ತು ಸ್ವಮಿತ್ವ ಯೋಜನೆಯ ಪ್ರಕ್ರಿಯೆ ನಡೆಯಲಿದೆ ಎಂದು ತಿಳಿಸಿದ್ದಾರೆ. ಅಳತೆ, ವಿಸ್ತೀರ್ಣ, ಮಾಲೀಕತ್ವ ಹಾಗೂ ಇನ್ನಿತರ ಭೂ ವ್ಯಾಜ್ಯ, ವಿವಾದ ಗಳಿಂದ ಮುಕ್ತಿ ಪಡೆಯಲು ಗ್ರಾಮೀಣ ಜನರಿಗೆ ರೀಸರ್ವೇ ಮತ್ತು ಸ್ವಮಿತ್ವ ದಾಖಲೆಗಳು ಸಹಕಾರಿಯಾಗುವುದರಿಂದ ಈ ಪ್ರಕ್ರಿಯೆಗೆ ರೈತರು ಇಲಾಖೆಯಿಂದ ಸದರಿ ದಾಖಲೆ ಪತ್ರಗಳನ್ನು ಪಡೆದುಕೊಳ್ಳಬೇಕೆಂದು ಕುಲಕರ್ಣಿ ಸಲಹೆ ನೀಡಿದ್ದಾರೆ.

ಎರಡು ವರ್ಷಗಳ ಬಳಿಕ ಕೇರಳ ಪತ್ರಕರ್ತ ಸಿದ್ದಿಕಿ ಕಪ್ಪನ್ ಜೈಲಿನಿಂದ ಬಿಡುಗಡೆ

ಲಖನೌ, ಫೆ.2– ಕೇರಳ ಪತ್ರಕರ್ತ ಸಿದ್ದಿಕಿ ಕಪ್ಪನ್ ಜಾಮೀನಿನ ಮೇರೆಗೆ ಉತ್ತರ ಪ್ರದೇಶ ಜೈಲಿನಿಂದ ಹೊರಗೆ ಬಂದಿದ್ದಾರೆ. ನಿಷೇಧಿತ ಸಂಘಟನೆಯೊಂದಿಗೆ ನಂಟು ಮತ್ತು ಕಾನೂನು ಬಾಹಿರ ಚಟುವಟಿಕೆ



ತಡೆ ಕಾಯ್ದೆಯಡಿ ಅವರನ್ನು 2020ರಲ್ಲಿ ಬಂಧಿಸಲಾಗಿತ್ತು. ಎರಡು ವರ್ಷಗಳ ನಂತರ ಇದೀಗ ಅವರು ಜೈಲಿನಿಂದ ಹೊರಗೆ ಬಂದಿದ್ದಾರೆ.

ಪಿಎಂಎಲ್‌ಎ ಕಾಯ್ದೆಯಡಿ ಬಂಧಿತರಾಗಿದ್ದ ಸಿದ್ದಿಕಿ ಕಪ್ಪನ್ ತಲಾ 1 ಲಕ್ಷ ರೂ. ಗಳ ಎರಡು ಶ್ಯೂರಿಟಿಯನ್ನು ಲಖನೌ ನ್ಯಾಯಾಲಯಕ್ಕೆ ಸಲ್ಲಿಸಿದ ನಂತರ ಬುಧವಾರ ಜಾಮೀನು ಸಿಕ್ಕಿತ್ತು. ಇಂದು ಬೆಳಗ್ಗೆ 9–15ರ ಸುಮಾರಿನಲ್ಲಿ ಅವರು ಜೈಲಿನಿಂದ ಹೊರಗೆ ಬಂದಿರುವುದಾಗಿ ಲಖನೌ ಜಿಲ್ಲಾ ಕಾರಾಗೃಹದ ಅಧಿಕಾರಿ ರಾಜೇಂದ್ರ ಸಿಂಗ್ ತಿಳಿಸಿದ್ದಾರೆ.

ಜೈಲಿನಿಂದ ಬಿಡುಗಡೆಯಾದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಿದ್ದಿಕಿ, 28 ತಿಂಗಳ ಬಳಿಕ ಜೈಲಿನಿಂದ ಹೊರಗೆ ಬಂದಿದ್ದೇನೆ. ನನ್ನನ್ನು ಬೆಂಬಲಿಸಿದ ಮಾಧ್ಯಮಗಳಿಗೆ ಧನ್ಯವಾದ ಸಲ್ಲಿಸುತ್ತೇನೆ. ನನ್ನ ವಿರುದ್ಧ ಸುಳ್ಳು ಆರೋಪ ಮಾಡಲಾಗಿತ್ತು. ಇದೀಗ ಸಂತೋಷವಾಗಿ ಜೈಲಿನಿಂದ ಹೊರಗೆ ಬಂದಿರುವುದಾಗಿ ಹೇಳಿದರು. ಪತ್ರಕರ್ತ ಸಿದ್ದಿಕಿ ಕಪ್ಪನ್ ಉತ್ತರಪ್ರದೇಶದ ಹಾಥ್ರಸ್ ಪಟ್ಟಣದಲ್ಲಿ 2020 ಅಕ್ಟೋಬರ್ 5ರಂದು ದಲಿತ ಮಹಿಳೆ ಮೇಲೆ ಸಂಭವಿಸಿದ ಸಾಮೂಹಿಕ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಸುದ್ದಿಯನ್ನು ಕವರ್ ಮಾಡಲೆಂದು ಹೋಗಿದ್ದಾಗ ಅವರೊಂದಿಗೆ ಇತರ ಮೂವರು ಪತ್ರಕರ್ತರನ್ನು ಉತ್ತರಪ್ರದೇಶ ಪೊಲೀಸರು ಬಂಧಿಸಿದ್ದರು. ಈ ನಾಲ್ವರು ಪಿಎಫ್‌ಐ ಸಂಘಟನೆಯ ಸಕ್ರಿಯ ಸದಸ್ಯರಾಗಿದ್ದು, ಕಾನೂನು ವ್ಯವಸ್ಥೆಯನ್ನು ಹಾಳು ಮಾಡುವ ಸಂಚು ರೂಪಿಸಿದ್ದರು ಎಂಬುದು ಪೊಲೀಸರ ಆರೋಪವಾಗಿತ್ತು. ಅದರಂತೆ ಐಟಿ, ಯುಎಪಿಎ ಮತ್ತು ಇಪಿಸಿ ಕಾಯ್ದೆಗಳ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಕಪ್ಪನ್ ವಿರುದ್ಧ ಪ್ರಕರಣಗಳು ದಾಖಲಾದವು. ನಂತರ ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯಡಿ ಜಾರಿ ನಿರ್ದೇಶನಾಲಯ ಸಿದ್ದಿಕಿ ಕಪ್ಪನ್ ಮೇಲೆ ಪ್ರಕರಣ ದಾಖಲಿಸಿತ್ತು.

ಕೇರಳದಲ್ಲಿ ಭಾರತದ ಮೊದಲ ಟ್ರಾನ್ಸ್ ಹುಮೆನ್ ಸಹದ್ 8 ತಿಂಗಳ ತುಂಬು ಗರ್ಭಿಣಿ!

ಕೊಟ್ಟಾಯಂ(ಕೇರಳ), ಫೆ.2– ಕೋಝಿಕ್ಕೋಡ್‌ನ ಉಮ್ಮಲತ್ತೂರ್‌ನ ಟ್ರಾನ್ಸ್ ಜೆಂಡರ್ ದಂಪತಿ ಸಿಯಾ ಮತ್ತು ಸಹದ್ ಅವರಿಗೆ ಕುತೂಹಲ ಮತ್ತು ಕಾತುರವನ್ನು ತಡೆಯಲಾಗಲಿಲ್ಲ. ಹೆಣ್ಣಾಗಿ ಹುಟ್ಟಿ ಗಂಡಾಗಿ ಬದಲಾದ ಸಹದ್ ಮತ್ತು ಗಂಡಾಗಿ ಹುಟ್ಟಿ ಹೆಣ್ಣಾಗಿ ಬದಲಾದ ಜಿಯಾ ತಮ್ಮ ಸುವರ್ಣಾವಕಾಶಕ್ಕಾಗಿ ಕಾಯುತ್ತಿದ್ದಾರೆ. ಸಹದ್ ಗರ್ಭಧಾರಣೆಯ ಮೂಲಕ ಭಾರತದ ಮೊದಲ ಟ್ರಾನ್ಸ್‌ಮ್ಯಾನ್ ತಂದೆಯಾಗಲು ಸಿದ್ಧರಾಗಿದ್ದಾರೆ.



ಮಗುವನ್ನು ದತ್ತು ಪಡೆಯಲು ಪ್ರಯತ್ನಿಸಲಾಗಿದ್ದರೂ, ಟ್ರಾನ್ಸ್‌ಜೆಂಡರ್ ದಂಪತಿಗೆ ಕಾನೂನು ಪ್ರಕ್ರಿಯೆಯು ಸವಾಲಾಗಿತ್ತು. ಆಗ ಸಹದ್‌ಗೆ ಗಂಡಾಗಿದ್ದರೂ ಗರ್ಭಿಣಿಯಾಗುವ ಯೋಚನೆ ಬರುತ್ತದೆ. ಜನರು ಏನು ಹೇಳುತ್ತಾರೋ ಎಂಬ ಆತಂಕದಲ್ಲಿ ಆರಂಭದಲ್ಲಿ ಹಿಂಜರಿಯುತ್ತಿದ್ದೆ. ಅಲ್ಲದೆ ಒಮ್ಮೆ ಕೈಬಿಟ್ಟ ಸ್ತ್ರೀತ್ವಕ್ಕೆ ಮರಳುವುದು ಒಂದು ಸವಾಲಾಗಿ ಪರಿಣಮಿಸಿತು. ಆದರೆ ಸಿಯಾಳ ಪ್ರೀತಿ ಮತ್ತು ತಾಯಿಯಾಗಬೇಕೆಂಬ ಅದಮ್ಯ ಬಯಕೆ ಸಹದ್ ನಿರ್ಧಾರವನ್ನೇ ಬದಲಿಸಿತು. ಕೋಝಿಕ್ಕೋಡ್ ಮೆಡಿಕಲ್ ಕಾಲೇಜಿನ ವೈದ್ಯರ ಮಾರ್ಗ ದರ್ಶನದಲ್ಲಿ ತಜ್ಞ ಪರೀಕ್ಷೆಗಳನ್ನು ನಡೆಸಿ ಆರೋಗ್ಯ ಸಮಸ್ಯೆ ಇಲ್ಲ ಎಂದು ಖಚಿತಪಡಿಸಿಕೊಂಡ ನಂತರ ಚಿಕಿತ್ಸೆ ಆರಂಭಿಸಲಾಯಿತು. ಸಹದ್ ಹೆಣ್ಣಿನಿಂದ ಗಂಡಾಗಿ ಪರಿವರ್ತನೆಯ ಭಾಗವಾಗಿ, ಸ್ತನಗಳನ್ನು ಶಸ್ತ್ರಚಿಕಿತ್ಸೆಯಿಂದ ತೆಗೆದುಹಾಕಲಾಯಿತು. ಆದರೆ ಗರ್ಭಾಶಯ ಇತ್ಯಾದಿಗಳನ್ನು ಬದಲಾಯಿಸಲಾಗಿಲ್ಲ. ಹಾಲಿನ ಬ್ಯಾಂಕ್ ಮೂಲಕ ಮಗುವಿಗೆ ಹಾಲುಣಿಸಲು ನಿರ್ಧರಿಸಲಾಗಿದೆ. ಸಿಯಾ ಒಬ್ಬ ನರ್ತಕಿ. ಸಹದ್ ಖಾಸಗಿ ಸಂಸ್ಥೆ ಯೊಂದರಲ್ಲಿ ಅಕೌಂಟೆಂಟ್ ಆಗಿದ್ದಾರೆ.

ಜೆಡಿಎಸ್ ಯುವ ನಾಯಕ ನಿಖಿಲ್ ಕುಮಾರಸ್ವಾಮಿ, ಜಿ.ಡಿ.ಹರೀಶ್‌ಗೌಡರ ಅದ್ಧೂರಿ ಹುಟ್ಟುಹಬ್ಬ ಆಚರಣೆ ಹಿನ್ನೆಲೆ

ಚಾಮುಂಡೇಶ್ವರಿ ಕ್ಷೇತ್ರದ ಜಯಪುರದಲ್ಲಿ ಫೆ.5ಕ್ಕೆ ಬೃಹತ್ ಸಮಾವೇಶ


ಜೆಡಿಎಸ್ ಪಕ್ಷದ ಶಕ್ತಿ ಪ್ರದರ್ಶನದ ಜೊತೆಗೆ ಜಿ.ಟಿ.ದೇವೇಗೌಡರ ವಿರೋಧಿಗಳಿಗೆ ಖಡಕ್ ಸಂದೇಶ ಸಾಧ್ಯತೆ

ಮೈಸೂರು, ಫೆ.2(ಎಸ್‌ಬಿಡಿ)– ಚುನಾವಣೆ ಘೋಷಣೆಗೂ ಮುನ್ನವೇ ಮೈಸೂರಿನ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ರಂಗೇರುತ್ತಿದ್ದು, ಜೆಡಿಎಸ್ ಯುವ ನಾಯಕರ ಹುಟ್ಟುಹಬ್ಬದ ನೆಪದಲ್ಲಿ ಪಕ್ಷದ ಶಕ್ತಿ ಪ್ರದರ್ಶನಕ್ಕೆ ವೇದಿಕೆ ಸಜ್ಜಾಗಿದೆ.

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಪುತ್ರ ನಿಖಿಲ್ ಕುಮಾರಸ್ವಾಮಿ ಹಾಗೂ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ಪುತ್ರ ಜಿ.ಡಿ.ಹರೀಶ್‌ಗೌಡರ ಹುಟ್ಟುಹಬ್ಬವನ್ನು ಕ್ಷೇತ್ರದಲ್ಲಿ ಅದ್ಧೂರಿಯಾಗಿ ಆಚರಿಸಲು ಸಿದ್ಧತೆ ಮಾಡಿಕೊಂಡಿದ್ದು, ಅದು ಜೆಡಿಎಸ್ ಕಾರ್ಯಕರ್ತರ ಬೃಹತ್ ಸಮಾವೇಶವೂ ಆಗಿರಲಿದೆ. ಈ ಮೂಲಕ ಪಕ್ಷದ ಶಕ್ತಿ ಪ್ರದರ್ಶನದ ಜೊತೆಗೆ ಜಿ.ಟಿ.ದೇವೇಗೌಡರ ವಿರೋಧಿ ಪಾಳಯಕ್ಕೆ ಖಡಕ್ ಸಂದೇಶ ನೀಡಲಾಗುತ್ತಿದೆಯೇ ಎಂಬ ಚರ್ಚೆ ಶುರುವಾಗಿದೆ.

ಜಯಪುರ ಗ್ರಾಮದ ಹೊರವಲಯ ಕೆಎಸ್‌ಆರ್‌ಟಿಸಿ ಬಡಾವಣೆ ಖಾಲಿ ಜಾಗದಲ್ಲಿ ಫೆ.5ರಂದು ಮಧ್ಯಾಹ್ನ 12ಕ್ಕೆ ಬೃಹತ್ ಸಮಾವೇಶ ಆಯೋಜಿಸಿದ್ದು, ಇದಕ್ಕಾಗಿ ವಿಸ್ತಾರ ವೇದಿಕೆ ಹಾಗೂ ಪೆಂಡಾಲ್ ನಿರ್ಮಿಸಲಾಗುತ್ತಿದೆ. ಅದಕ್ಕೂ ಮುನ್ನ ಹಿನಕಲ್ ಮೇಲ್ಸೇತುವೆ ಬಳಿಯಿಂದ ಬೋಗಾದಿ, ಶ್ರೀರಾಂಪುರ, ಎಚ್.ಡಿ.ಕೋಟೆ ಹೆದ್ದಾರಿ ಮಾರ್ಗವಾಗಿ ಕಾರ್ಯಕ್ರಮದ ಸ್ಥಳದವರೆಗೆ ಬೃಹತ್ ಬೈಕ್ ರ‍್ಯಾಲಿ ನಡೆಸಲು ಕಾರ್ಯಕರ್ತರು ತೀರ್ಮಾನಿಸಿದ್ದಾರೆ.

ಹೆಲಿಕಾಪ್ಟರ್‌ನಲ್ಲಿ ಪುಷ್ಪಾರ್ಚನೆ: ಪ್ರಬಲ ರಾಜಕೀಯ ನಾಯಕರಿಗೆ ವೈವಿಧ್ಯಮಯ ಬೃಹತ್ ಹಾರ ಅರ್ಪಣೆ,



ಹೆಲಿಕಾಪ್ಟರ್ ಮೂಲಕ ಪುಷ್ಪವೃಷ್ಟಿಗರೆಯುವುದು ರಾಜಕೀಯದಲ್ಲಿ ಟ್ರೆಂಡ್ ಆಗಿದೆ. ಜೆಡಿಎಸ್ ಯುವ ನಾಯಕರಿಬ್ಬರನ್ನು ಹೀಗೆಯೇ ಅತ್ಯಂತ ಅದ್ಧೂರಿಯಾಗಿ ಸ್ವಾಗತಿಸಲು ಚಾಮುಂಡೇಶ್ವರಿ ಕಾರ್ಯಕರ್ತರು ನಿರ್ಧರಿಸಿದ್ದಾರೆ. ಕಾರ್ಯಕರ್ತರ ಸಾವಿರಾರು ಬೈಕ್‌ಗಳ ನಡುವೆ ತೆರೆದ ವಾಹನದಲ್ಲಿ ನಿಖಿಲ್ ಕುಮಾರಸ್ವಾಮಿ ಹಾಗೂ ಜಿ.ಡಿ.ಹರೀಶ್‌ಗೌಡರನ್ನು ಮೆರವಣಿಗೆಯಲ್ಲಿ ಕರೆತಂದು ವೇದಿಕೆ ಬಳಿ ಆಗಮಿಸುತ್ತಿದ್ದಂತೆ ಹೆಲಿಕಾಪ್ಟರ್ ಮೂಲಕ ಪುಷ್ಪವೃಷ್ಟಿಯೊಂದಿಗೆ ಅದ್ಧೂರಿಯಾಗಿ ಸ್ವಾಗತಿಸಲು ಚಿಂತನೆ ನಡೆದಿದೆ.

ಜೆಡಿಎಸ್ ಯುವಶಕ್ತಿ: ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ರಾಮನಗರದಿಂದ ನಿಖಿಲ್ ಕುಮಾರಸ್ವಾಮಿ ಹಾಗೂ ಹುಣಸೂರಿನಿಂದ ಜಿ.ಡಿ.ಹರೀಶ್‌ಗೌಡ ಜೆಡಿಎಸ್ ಅಭ್ಯರ್ಥಿಗಳಾಗಿ ಕಣಕ್ಕಿಳಿಯಲಿದ್ದಾರೆ. ಪಕ್ಷದ ಯುವ ನಾಯಕರುಗಳಾದ ಇವರಿಬ್ಬರೂ ಆತ್ಮೀಯ ಸ್ನೇಹಿತರೂ ಕೂಡ. ಏನೆಲ್ಲಾ ರಾಜಕೀಯ ಬೆಳವಣಿಗೆಯಾದರೂ ಇವರಿಬ್ಬರ ಸ್ನೇಹ ಮಾತ್ರ ಗಟ್ಟಿಯಾಗಿದೆ. ಜ.22ರಂದು ನಿಖಿಲ್ ಹಾಗೂ ಜ.31ರಂದು ಹರೀಶ್‌ಗೌಡರ ಹುಟ್ಟುಹಬ್ಬವಿತ್ತು. ಇವರಿಬ್ಬರೂ ಪ್ರತ್ಯೇಕವಾಗಿ ಪಕ್ಷದ ಕಾರ್ಯಕರ್ತರು, ಅಭಿಮಾನಿಗಳೊಂದಿಗೆ ಹಲವೆಡೆ ಹುಟ್ಟುಹಬ್ಬ ಆಚರಿಸಿಕೊಂಡಿದ್ದಾರೆ. ಆದರೆ ಒಂದೇ ವೇದಿಕೆಯಲ್ಲಿ ಇಬ್ಬರ ಹುಟ್ಟುಹಬ್ಬ ಆಚರಿಸುವ ಉದ್ದೇಶದೊಂದಿಗೆ ಬೃಹತ್ ಸಮಾವೇಶ ಆಯೋಜನೆ ಮಾಡಿರುವುದು ಗಮನಾರ್ಹ. ಈ ಸಮಾವೇಶದ ಮೂಲಕ ಯುವ ಸಮುದಾಯವನ್ನು ಸಂಘಟಿಸಬಹುದು ಎನ್ನುವ ಲೆಕ್ಕಾಚಾರವೂ ಇದ್ದಂತಿದೆ. ಅದರಲ್ಲೂ ಜಿಟಿಡಿಗೆ ಸೆಡ್ಡು ಹೊಡೆದವರ ಪ್ರಾಬಲ್ಯವಿರುವ ಜಯಪುರದ ಬಳಿಯೇ ಕಾರ್ಯಕ್ರಮ ನಡೆಸುತ್ತಿರುವುದರ ಹಿಂದೆ ರಾಜಕೀಯ ತಂತ್ರಗಾರಿಕೆಯೂ ಇದೆ ಎನ್ನಲಾಗುತ್ತಿದೆ.

ಪಕ್ಷ ತೊರೆದವರಿಗೆ ಖಡಕ್ ಸಂದೇಶ!: ಜಿಟಿಡಿಗೆ ಟಿಕೆಟ್ ನೀಡದಂತೆ ಆಗ್ರಹಿಸಿದ್ದ ಮಾವಿನಹಳ್ಳಿ ಸಿದ್ದೇಗೌಡ, ಬೀರಿಹುಂಡಿ ಬಸವಣ್ಣ, ಯರಗನಹಳ್ಳಿ ಮಾದೇಗೌಡ, ಹಿನಕಲ್ ಕೃಷ್ಣನಾಯಕ ಅವರು ತಮ್ಮಿಚ್ಛೆ ಫಲಿಸದ ಕಾರಣ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿದ್ದಾರೆ. ಲಿಂಗದೇವರು ಕೊಪ್ಪಲಿನಲ್ಲಿ ಇತ್ತೀಚೆಗೆ 'ಸ್ವಾಭಿಮಾನಿ ಪಡೆ ಕಾಂಗ್ರೆಸ್ ಸೇರ್ಪಡೆ' ಬೃಹತ್ ಕಾರ್ಯಕ್ರಮ ಏರ್ಪಡಿಸಿ ಮಾಜಿ ಸಿಎಂ ಸಿದ್ದರಾಮಯ್ಯನವರ ಸಮ್ಮುಖದಲ್ಲಿ ಕಾಂಗ್ರೆಸ್ ಸೇರಿದ್ದರು. ಆ ವೇಳೆ ಜಿ.ಟಿ.ದೇವೇಗೌಡರಿಗೆ 20 ಸಾವಿರ ಜನ ಸೇರಿಸುವುದಕ್ಕೆ ಆಗುವುದೇ ಎಂದು ಮಾವಿನಹಳ್ಳಿ ಸಿದ್ದೇಗೌಡರು ಸವಾಲು ಹಾಕಿದ್ದರು. ಅದನ್ನು ಸವಾಲಾಗಿ ಸ್ವೀಕರಿಸಿರುವ ಜೆಡಿಎಸ್ ಕಾರ್ಯಕರ್ತರು, ಫೆ.5ರ ಸಮಾವೇಶದಲ್ಲಿ 40 ಸಾವಿರ ಜನರನ್ನು ಸೇರಿಸಲು ಉತ್ಸುಕರಾಗಿದ್ದಾರೆ. ಜಯಪುರ, ಸುತ್ತಮುತ್ತಲ ಗ್ರಾಮದ ಮುಖಂಡರೇ ಸಮಾವೇಶದ ವೆಚ್ಚ ಭರಿಸಲು ಮುಂದಾಗಿದ್ದಾರೆ ಎಂದು ತಿಳಿದುಬಂದಿದೆ.

ನಾಲ್ವರು ಹೋದರೂ ಸಾವಿರ ಸಾವಿರ ನಾಯಕರು ಜೊತೆಗಿದ್ದಾರೆ

ಮೈಸೂರು: ಫೆ.5ರಂದು ಸಮಾವೇಶ ನಡೆಯಲಿರುವ ಸ್ಥಳಕ್ಕೆ ಗುರುವಾರ ಶಾಸಕ ಜಿ.ಟಿ.ದೇವೇಗೌಡರು ಭೇಟಿ ನೀಡಿ ಪರಿಶೀಲಿಸಿದರು. ಸಮಾವೇಶದ ರೂವಾರಿಗಳಾದ ಮುಖಂಡರಿಗೆ ಕೃತಜ್ಞತೆ ಸಲ್ಲಿಸಿ, ಕಾರ್ಯಕ್ರಮದ ರೂಪುರೇಷೆ ಬಗ್ಗೆ ಚರ್ಚೆ ನಡೆಸಿದರು. ಪೆಂಡಾಲ್ ಅಳವಡಿಸುವ ಕಾರ್ಯ ಭರದಿಂದ ಸಾಗಿದ್ದು, ಸಮಾವೇಶಕ್ಕೆ ಆಗಮಿಸುವವರಿಗೆ ಊಟೋಪಚಾರದ ವ್ಯವಸ್ಥೆಗೂ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ಈ ವೇಳೆ ಪ್ರತಿಕ್ರಿಯಿಸಿದ ಜಿಟಿಡಿ, ನಿಖಿಲ್ ಕುಮಾರಸ್ವಾಮಿ ಹಾಗೂ ಹರೀಶ್‌ಗೌಡರ ಹುಟ್ಟುಹಬ್ಬವನ್ನು ಜೆಡಿಎಸ್ ಕಾರ್ಯಕರ್ತರು, ಅಭಿಮಾನಿಗಳು ಸಂಭ್ರಮದಿಂದ ಆಚರಿಸಲು ತೀರ್ಮಾನಿಸಿದ್ದಾರೆ. ಅದೂ ತಮ್ಮ ಸ್ವಂತ ಖರ್ಚಿನಲ್ಲಿ ಸಮಾವೇಶ ಆಯೋಜಿಸಿದ್ದಾರೆ. ಪಕ್ಷ ಬಿಟ್ಟು ಹೋಗಿರುವ ನಾಲ್ವರಿಗೆ ಸಮಾನರಾದ ಸಾವಿರ ನಾಯಕರು ನಮ್ಮ ಜತೆಗೆ ಇದ್ದಾರೆ. ಆದ್ದರಿಂದ ಸವಾಲು ಎನ್ನುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಜನರ ಪ್ರೀತಿ ವಿಶ್ವಾಸಕ್ಕೆ ನಾವು ಚಿರಋಣಿಯಾಗಿರುತ್ತೇವೆ ಎಂದರು.

ಭವಿಷ್ಯದ ದೃಷ್ಟಿಯಿಂದ ದಿ ಬೆಸ್ಟ್ ಬಜೆಟ್

ಕೇಂದ್ರದ ಬಜೆಟ್ ವಿಶ್ಲೇಷಣೆ ವೇಳೆ ಲೆಕ್ಕ ಪರಿಶೋಧಕರ ಅಭಿಮತ





ಮೈಸೂರು, ಫೆ.2 (ಎಂಕೆ)– ಭವಿಷ್ಯದ ದೃಷ್ಟಿಯಿಂದ ವಿತ್ತ ಸಚಿವರು ಒಳ್ಳೆಯ ಬಜೆಟ್ ಮಂಡಿಸಿದ್ದಾರೆ. ಮಧ್ಯಮ ವರ್ಗಕ್ಕೆ ಅನುಕೂಲಕರವಾಗಿದ್ದು, ಸಪ್ತರ್ಷಿ ಯೋಜನೆ ಮೂಲಕ ಅಗತ್ಯ ಅಂಶಗಳನ್ನು ಪರಿಗಣಿಸಲಾಗಿದೆ ಎಂಬ ಅಭಿಪ್ರಾಯಗಳು ವ್ಯಕ್ತವಾದವು.

ಮೈಸೂರಿನ ಚಾಮುಂಡಿಬೆಟ್ಟದ ರಸ್ತೆಯಲ್ಲಿರುವ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ (ಎಸ್‌ಡಿಎಂಐಎಂಡಿ)ನಲ್ಲಿ ಆಯೋಜಿಸಿದ್ದ '2023ರ ಕೇಂದ್ರ ಬಜೆಟ್' ವಿಶ್ಲೇಷಣೆ ಕಾರ್ಯಕ್ರಮದಲ್ಲಿ ಕೇಂದ್ರ ಹಣಕಾಸು ಸಚಿವರು, ಆದಾಯ ತೆರಿಗೆ ಮಿತಿ ಹೆಚ್ಚಳ, ಸಾಲ ಯೋಜನೆಯಲ್ಲಿ ವಿಸ್ತರಣೆ, ಹೊಸ ಉಳಿತಾಯ ಯೋಜನೆ ಘೋಷಣೆ ಮಾಡುವ ಮೂಲಕ ಉತ್ತಮ ಬಜೆಟ್ ಮಂಡಿಸಿದ್ದಾರೆ ಎಂದು ಹಲವರು ವಿಶ್ಲೇಷಿಸಿದರು.

ಈ ವೇಳೆ ಪ್ರತ್ಯಕ್ಷ ತೆರಿಗೆ ಕುರಿತು ಮಾತನಾಡಿದ ಚಾರ್ಟರ್ಡ್ ಅಕೌಂಟೆಂಟ್ ಲಕ್ಷ್ಮಿ ನಾರಾಯಣಸಿಂಹ, ತೆರಿಗೆ ಮಿತಿ ಹೆಚ್ಚಳ ಹಾಗೂ ಹೊಸ ತೆರಿಗೆ ಪದ್ಧತಿಯು ಮಧ್ಯಮ ಕುಟುಂಬ ವರ್ಗಕ್ಕೆ ಅನುಕೂಲವಾಗಲಿದ್ದು, ಬಂಡವಾಳ ಹೂಡಿಕೆಯ ಪ್ರಮಾಣವೂ ಹೆಚ್ಚಾಗಲಿದೆ. ಸ್ಟಾರ್ಟ್‌ಅಪ್‌ಗಳಿಗೆ ತೆರಿಗೆ ರಜೆ ಅವಧಿಯನ್ನು ವಿಸ್ತರಣೆ ಉತ್ತಮ ಫಲಿತಾಂಶ ನೀಡಲಿದೆ. ಅಭಿವೃದ್ಧಿ ದೃಷ್ಟಿಯಿಂದ ಸರ್ಕಾರ ಖರ್ಚು ಮಾಡುವುದು ಸರಿಯಾಗಿದ್ದು, ಇದರ ಸವಲತ್ತುಗಳ ಪ್ರಯೋಜನ ಪಡೆದುಕೊಳ್ಳಲು ಸ್ವಲ್ಪ ಸಮಯ ತೆಗೆದುಕೊಳ್ಳುತ್ತದೆ ಎಂದರಲ್ಲದೆ ಕೇಂದ್ರ ಸರ್ಕಾರ ಖರ್ಚಿನ ಬಗ್ಗೆ ಗಮನಹರಿಸಿರುವುದು ಮುಖ್ಯವಾಗಿದೆ ಎಂದರು.

ಚಾರ್ಟರ್ಡ್ ಅಕೌಂಟೆಂಟ್ ಬಿ.ಎಸ್.ರವಿಕುಮಾರ್ ಮಾತನಾಡಿ, 2023–24ನೇ ಸಾಲಿನ ಕೇಂದ್ರ ಬಜೆಟ್ ಉತ್ತಮವಾಗಿದೆ. ಕೃಷಿ, ಕೈಗಾರಿಕೆ, ಪ್ರವಾಸೋದ್ಯಮ, ಶಿಕ್ಷಣ ಸೇರಿದಂತೆ ಎಲ್ಲಾ ಕ್ಷೇತ್ರಗಳಿಗೂ ಆದ್ಯತೆ ನೀಡಲಾಗಿದೆ. ಆದರೆ ವಿದೇಶಿ ಬಂಡವಾಳಗಾರರು ಭಾರತದಲ್ಲಿ ಉದ್ದಿಮೆಗಳನ್ನು ಸ್ಥಾಪಿಸಲು ಇರುವ ಕಾನೂನು ತೊಡಕುಗಳ ಗಮನಹರಿಸುವುದು ಕೂಡ ಮುಖ್ಯವಾಗಿದೆ. ವಿದೇಶಿ ಬಂಡವಾಳಗಾರರು ಭ್ರಷ್ಟಾಚಾರ ಮತ್ತು ಕಾನೂನು ತೊಡಕುಗಳಿಂದ ಬೇರೆ ಬೇರೆ ದೇಶಗಳಲ್ಲಿ ಹೂಡಿಕೆ ಮಾಡುತ್ತಿದ್ದಾರೆ. ಇದನ್ನು ತಪ್ಪಿಸಬೇಕಾದರೆ ಕಾನೂನು ತೊಡಕು ನಿವಾರಣೆ ಜೊತೆಗೆ ಪ್ರತ್ಯೇಕ ವಲಯ ನಿರ್ಮಾಣ ಮಾಡಿಕೊಡಬೇಕು. ಇದರಿಂದ ತೆರಿಗೆ ಸಂಗ್ರಹದ ಜೊತೆಗೆ ಉದ್ಯೋಗಾವಕಾಶಗಳು ಹೆಚ್ಚಾಗುತ್ತದೆ ಎಂದು ಅಭಿಪ್ರಾಯಪಟ್ಟರು. ಇದಕ್ಕೂ ಮುನ್ನ ಬಜೆಟ್‌ನ ಪ್ರಮುಖಾಂಶಗಳನ್ನು ಕುರಿತು ವಿದ್ಯಾರ್ಥಿಗಳು ತಿಳಿಸಿಕೊಟ್ಟರು. ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್‌ನ ಪ್ರಾಧ್ಯಾಪಕ ಡಾ.ಎಸ್.ಎನ್.ಪ್ರಸಾದ್, ಅಸೋಸಿಯೇಟ್ ಪ್ರೊಫೆಸರ್ ಡಾ.ಶ್ರೀರಾಮ್ ಮತ್ತಿತರರು ಉಪಸ್ಥಿತರಿದ್ದರು.

ಅವಕಾಶಗಳ ಹೆಚ್ಚಳ...

'2023ರ ಕೇಂದ್ರ ಬಜೆಟ್' ವಿಶ್ಲೇಷಣೆ ಕಾರ್ಯಕ್ರಮದಲ್ಲಿ ಆನ್‌ಲೈನ್ ವರ್ಚುವಲ್ ಮೂಲಕ ಮಾತನಾಡಿದ ಮುಂಬೈನ ಗ್ರೀಷ್ಮಾ ಷೇರ್ಸ್ ಅಂಡ್ ಸ್ಟಾಕ್ ಲಿಮಿಟೆಡ್‌ನ ಸಂಸ್ಥಾಪಕ ನಿರ್ದೇಶಕ ಸಮೀರ್ ಪರೇಖ್, ಉದ್ಯೋಗ–ಉದ್ದಿಮೆಗಳ ಹೆಚ್ಚಿನ ಅವಕಾಶವನ್ನು ಕೇಂದ್ರ ಬಜೆಟ್ ನೀಡಿದೆ. ಬಹಳ ಪಾರದರ್ಶಕವಾಗಿದ್ದು, ಪರಿಸರ ವ್ಯವಸ್ಥೆ ಮತ್ತು ಕೈಗಾರಿಕೆಗಳ ಪ್ರೋತ್ಸಾಹದಾಯಕ ಬಜೆಟ್ ಇದಾಗಿದೆ. ದೇಶದಲ್ಲಿ ಎಲೆಕ್ಟ್ರಾನಿಕ್ ಉತ್ಪನ್ನಗಳ ತಯಾರಿಕೆ ಹೆಚ್ಚಾಗಲಿದ್ದು, ಚೀನಾ ಸಮಕ್ಕೆ ಬೆಳೆಯಲು ಇದೊಂದು ಅದ್ಭುತ ಅವಕಾಶ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾಂಗ್ರೆಸ್ ತೊರೆದು ಬಿಎಸ್‌ಪಿ ಸೇರಿದ ಕೆ.ಸಿ.ಪುಟ್ಟಸಿದ್ದಶೆಟ್ಟಿ



ಮೈಸೂರು, ಫೆ.2(ಪಿಎಂ)–ಕಾಯಕ ಸಮಾಜಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕೆ.ಸಿ.ಪುಟ್ಟಸಿದ್ದಶೆಟ್ಟಿ ಬಿಎಸ್‌ಪಿ ಸೇರ್ಪಡೆಯಾಗಿದ್ದಾರೆ. ಅವರ ಹಿರಿತನ ಪರಿಗಣಿಸಿ ಅವರನ್ನು ಬಿಎಸ್‌ಪಿ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ ಎಂದು ಬಿಎಸ್‌ಪಿ ರಾಜ್ಯಾಧ್ಯಕ್ಷ ಡಾ.ಎಂ.ಕೃಷ್ಣಮೂರ್ತಿ ಹೇಳಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್‌ನಲ್ಲಿ ಸುದೀರ್ಘ ಕೆಲಸ ಮಾಡಿ, ಅಲ್ಲಿ ಹಿಂದುಳಿದ ವರ್ಗಗಳಿಗೆ ಸೂಕ್ತ ಸ್ಥಾನಮಾನ ನೀಡುತ್ತಿಲ್ಲವೆಂಬುದನ್ನು ಅರಿತು ಬಿಎಸ್‌ಪಿ ಸೇರಿದ್ದಾರೆ ಎಂದರು.

ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಅಧಿಕಾರ ಪಡೆದುಕೊಳ್ಳಲು ಮತ ಬ್ಯಾಂಕ್ ಆಗಿ ಓಬಿಸಿ, ಎಸ್‌ಸಿ–ಎಸ್‌ಟಿ ಮತ್ತು ಅಲ್ಪಸಂಖ್ಯಾತರನ್ನು ಬಳಸಿಕೊಳ್ಳುತ್ತಿವೆ. ಇದರ ಹೊರತು ನಮ್ಮ ರಾಜ್ಯದಲ್ಲಿ ಮುಖ್ಯಮಂತ್ರಿ ಸ್ಥಾನ ನೀಡಿಲ್ಲ. ದೇಶದ ಪ್ರಧಾನಮಂತ್ರಿ ಸ್ಥಾನಮಾನ ಸಹ ನೀಡಿಲ್ಲವೆಂದು ತಿಳಿಸಿದ ಅವರು, ಪ್ರಧಾನಿ ನರೇಂದ್ರ ಮೋದಿಯವರು ಹಿಂದುಳಿದ ವರ್ಗಕ್ಕೆ (ಓಬಿಸಿ) ಸೇರಿದವರಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಹೊಂದಾಣಿಕೆ ಇಲ್ಲ: 2023ರ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಯಾವುದೇ ಪಕ್ಷದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ. 100 ಕ್ಷೇತ್ರಗಳಲ್ಲಿ ಅತ್ಯಂತ ಹಿಂದುಳಿದ ವರ್ಗದವರಿಗೆ ಪಕ್ಷದ ಟಿಕೆಟ್ ನೀಡಲಾಗುವುದು. ಮತ್ತೆ 100 ಕ್ಷೇತ್ರಗಳಲ್ಲಿ ಎಸ್‌ಸಿ–ಎಸ್‌ಟಿ ಸಮುದಾಯದವರಿಗೆ ಟಿಕೆಟ್ ನೀಡುತ್ತಿದ್ದು, ಉಳಿದ 24 ಕ್ಷೇತ್ರಗಳಲ್ಲಿ ಪಕ್ಷದ ಸಿದ್ಧಾಂತ ಒಪ್ಪಿ ಬರುವ ಮೇಲ್ವರ್ಗದವರಿಗೆ ಟಿಕೆಟ್ ನೀಡಲಾಗುವುದು. ಫೆಬ್ರವರಿ ಅಂತ್ಯದ ವೇಳೆಗೆ 224 ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿ ಬಿಡುಗಡೆಯಾಗಲಿದೆ ಎಂದು ಕೃಷ್ಣಮೂರ್ತಿ ತಿಳಿಸಿದರು.

ವೈಯಕ್ತಿಕ ನಿಲುವು: ಮಾಜಿ ಮೇಯರ್ ಪುರುಷೋತ್ತಮ್ ಬಿಎಸ್‌ಪಿ ತೊರೆದು ಮತ್ತೆ ಕಾಂಗ್ರೆಸ್ ಸೇರುತ್ತಿರುವ ಬಗ್ಗೆ ಪ್ರತಿಕ್ರಿಯಿಸಿ, ಬಿಎಸ್‌ಪಿಯಿಂದ ನನಗೆ ಯಾವುದೇ ತೊಂದರೆ ಆಗಿಲ್ಲವೆಂದು ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಕಾಂಗ್ರೆಸ್ ಸೇರಿರುವುದು ಅವರ ವೈಯಕ್ತಿಕ ನಿಲುವು ಎಂದರು.

ಮಾಜಿ ಎಂಎಲ್‌ಸಿ ಕೆ.ಸಿ.ಪುಟ್ಟಸಿದ್ದಶೆಟ್ಟಿ ಮಾತನಾಡಿ, ಕಾಂಗ್ರೆಸ್, ಬಿಜೆಪಿ, ಜೆಡಿಎಸ್ 3 ಪಕ್ಷಗಳು ಸಾಮಾಜಿಕ ನ್ಯಾಯ ಕೊಡುವುದಿಲ್ಲ ಎಂಬುದನ್ನು ಮನಗಂಡು ಬಿಎಸ್‌ಪಿ ಸೇರಿದ್ದೇನೆ. ಬಿಎಸ್‌ಪಿ ನಿಷ್ಠಾವಂತ ಕಾರ್ಯಕರ್ತನಾಗಿ ದೇಶ–ರಾಜ್ಯದಲ್ಲಿ ಅಧಿಕಾರಕ್ಕೆ ಬರಬೇಕೆಂಬ ಗುರಿಯೊಂದಿಗೆ ಪಕ್ಷದ ಎಲ್ಲರೊಂದಿಗೆ ಕೆಲಸ ಮಾಡುತ್ತೇನೆ ಎಂದರು. ಬಿಎಸ್‌ಪಿ ಮುಖಂಡರಾದ ಮಾರಸಂದ್ರ ಮುನಿಯಪ್ಪ, ಆರ್.ಮುನಿಯಪ್ಪ, ಎಂ.ಗೋಪಿನಾಥ್, ಮಹದೇವಯ್ಯ, ಶಿವನಾಗ, ಪುಟ್ಟಸ್ವಾಮಿ ಮತ್ತಿತರರು ಗೋಷ್ಠಿಯಲ್ಲಿದ್ದರು.

ರಾಜ್ಯದಲ್ಲೀಗ ಕಾಂಗ್ರೆಸ್ ಇಬ್ಬರು ವ್ಯಕ್ತಿಗಳ ಪಾರ್ಟಿ

ಕಾಂಗ್ರೆಸ್ ಮತ್ತು ಬಿಜೆಪಿ ಒಂದೇ ನಾಣ್ಯದ ಎರಡು ಮುಖಗಳು. ಕಾಂಗ್ರೆಸ್ ಈ ದೇಶಕ್ಕೆ ಅಂಟಿದ ಶಾಪ. ಅಧಿಕಾರ ಹಿಡಿಯುವುದೊಂದೇ ಅದರ ಮುಖ್ಯ ಉದ್ದೇಶ. ಕಾಂಗ್ರೆಸ್‌ನಲ್ಲಿ ಸಾವಿರಾರು ಕೋಟಿಯ ನೇತಾರ ಒಬ್ಬರು ಇದ್ದಾರೆ. ಇನ್ನೊಬ್ಬರು ರಾಜ್ಯದಲ್ಲಿ 6 ಕೋಟಿ ಜನತೆ ನನ್ನ ಜೊತೆಯಲ್ಲೇ ಇದ್ದಾರೆ ಎನ್ನುತ್ತಾರೆ. ಇವರ ಕಣ್ಣು ನೆಲದ ಮೇಲೆ ಇಲ್ಲದೆ, ಆಕಾಶದತ್ತ ಇದೆ. ನಾನೇ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಕಚ್ಚಾಡುತ್ತಾರೆ. ಸಾರ್ವಜನಿಕ ಸಭೆಯಲ್ಲಿ ಮುಂದಿನ ಮುಖ್ಯಮಂತ್ರಿ ಎಂದು ಘೋಷಣೆ ಕೂಗಿಸಿಕೊಳ್ಳುತ್ತಾರೆ. ಕಾಂಗ್ರೆಸ್ ಈಗ ಇಬ್ಬರು ವ್ಯಕ್ತಿಗಳ ಪಾರ್ಟಿ. **–ಕೆ.ಸಿ.ಪುಟ್ಟಸಿದ್ದಶೆಟ್ಟಿ**

ಅದಾನಿ ಸಮೂಹದ ಬಿಕ್ಕಟ್ಟು: ಜೆಪಿಸಿ ಅಥವಾ ಸುಪ್ರೀಂ ಮೇಲ್ವಿಚಾರಣೆಯಲ್ಲಿ ತನಿಖೆಗೆ ವಿಪಕ್ಷಗಳ ಒತ್ತಾಯ

ನವದೆಹಲಿ,ಫೆ.2–ಅದಾನಿ ಸಮೂಹ ಸಂಸ್ಥೆಯ ಬಿಕ್ಕಟ್ಟನ್ನು ಸಂಸತ್ತಿನ ಜಂಟಿ ಸದನ ಸಮಿತಿ ಅಥವಾ ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಸಬೇಕೆಂದು ಕಾಂಗ್ರೆಸ್ ಮತ್ತಿತರ ವಿಪಕ್ಷಗಳು ಗುರುವಾರ ಒತ್ತಾಯಿಸಿವೆ. ಸಾರ್ವಜನಿಕರ ಹಣಕ್ಕೆ ಸಂಬಂಧಿಸಿದ ವಿಷಯದ ಕುರಿತು ಜಂಟಿ ಸದನ ಸಮಿತಿ (ಜೆಪಿಸಿ) ಅಥವಾ ಸುಪ್ರೀಂ ಮೇಲ್ವಿಚಾರಣೆಯ ತನಿಖೆಯ ದೈನಂದಿನ ವರದಿಗೂ ವಿರೋಧ ಪಕ್ಷಗಳು ಕರೆ ನೀಡಿವೆ ಎಂದು ಮಲ್ಲಿಕಾರ್ಜುನ ಖರ್ಗೆ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಖರ್ಗೆ, ಸಾರ್ವಜನಿಕರ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು, ಅದಾನಿ ಸಮೂಹ ಸಂಸ್ಥೆಯ ಬಿಕ್ಕಟ್ಟಿನ ಬಗ್ಗೆ ಜಂಟಿ ಸದನ ಸಮಿತಿ (ಜೆಪಿಸಿ) ಅಥವಾ ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯ ತನಿಖೆಯಾಗಬೇಕೆಂದು ನಾವು ಬಯಸುತ್ತೇವೆ. ಈ ವಿಷಯದ ತನಿಖೆ ಕುರಿತು ದೈನಂದಿನ ವರದಿಯಾಗಬೇಕು ಎಂದರು.

ಖರ್ಗೆ ಸೇರಿದಂತೆ ಹಲವು ಪ್ರತಿಪಕ್ಷಗಳ ಸದಸ್ಯರು ಅದಾನಿ ವಿಷಯದ ಬಗ್ಗೆ ಚರ್ಚಿಸಲು ನೋಟಿಸ್ ನೀಡಿದ್ದರು, ಆದರೆ ಅವುಗಳನ್ನು ಸಭಾಪತಿ ತಿರಸ್ಕರಿಸಿದ



ನಂತರ ಪ್ರತಿಪಕ್ಷಗಳು ಗದ್ದಲ ಎಬ್ಬಿಸಿದ್ದರಿಂದ ಉಭಯ ಸದನಗಳನ್ನು ಮಧ್ಯಾಹ್ನ 2 ಗಂಟೆಗೆ ಮುಂದೂಡಲಾಯಿತು. ಇತ್ತೀಚಿನ ದಿನಗಳಲ್ಲಿ ಕೋಟ್ಯಂತರ ಭಾರತೀಯರ ಉಳಿತಾಯಕ್ಕೆ ಅಪಾಯ ತಂದೊಡ್ಡಿರುವ ಎಲ್‌ಐಸಿ, ಎಸ್‌ಬಿಐ ಮತ್ತು ಇತರ ಸಾರ್ವಜನಿಕ ಸಂಸ್ಥೆಗಳ ಬಲವಂತದ ಹೂಡಿಕೆಗಳ ತನಿಖೆಗೆ ಸರ್ಕಾರವು ಒಪ್ಪದ ಕಾರಣ ಸಂಸತ್ತಿನ ಉಭಯ ಸದನಗಳನ್ನು ಇಂದು ಮಧ್ಯಾಹ್ನ 2 ಗಂಟೆಗೆ ಮುಂದೂಡಲಾಗಿತ್ತು.

ಜನರು ತಮ್ಮ ಹಣವನ್ನು ಅದಾನಿಗೆ ಸಾಲ ನೀಡಿರುವ ಸಾರ್ವಜನಿಕ ವಲಯದ ಬ್ಯಾಂಕುಗಳು ಮತ್ತು ಸಂಸ್ಥೆಗಳಲ್ಲಿ ಹೂಡಿಕೆ ಮಾಡಿರುವುದರಿಂದ ಜನರು ಭಯಭೀತರಾಗಿದ್ದಾರೆ ಎಂದು ಸಮಾಜವಾದಿ ಪಕ್ಷದ ರಾಮ್ ಗೋಪಾಲ್ ಯಾದವ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

ರಾಜ್ಯಸಭೆಯಲ್ಲಿ ಒಂಬತ್ತು ಪಕ್ಷಗಳು ನಿಲುವಳಿ ಸೂಚನೆಗಳನ್ನು ನೀಡಿವೆ, ಆದರೆ ಅಧ್ಯಕ್ಷರು ನೋಟಿಸ್‌ಗಳು ಕ್ರಮಬದ್ಧವಾಗಿಲ್ಲ ಎಂದು ಹೇಳಿರುವುದಾಗಿ ಭಾರತ್ ರಾಷ್ಟ್ರ ಸಮಿತಿಯ (ಬಿಆರ್‌ಎಸ್) ಕೇಶವರಾವ್ ತಿಳಿಸಿದರು.

ನಿಯಮ 267ರ ಅಡಿಯಲ್ಲಿ ವಿಷಯದ ಬಗ್ಗೆ ಚರ್ಚೆಗೆ ವಿರೋಧ ಪಕ್ಷದ ಬೇಡಿಕೆಯು ತರ್ಕಬದ್ಧವಾಗಿದ್ದು ಅದಕ್ಕೆ ಅವಕಾಶ ನೀಡಬೇಕು ಎಂದು ಟಿಎಂಸಿಯ ಶಾಂತನು ಸೇನ್ ಒತ್ತಾಯಿಸಿದ್ದಾರೆ. ಕೈಗಾರಿಕೋದ್ಯಮಿ ಗೌತಮ್ ಅದಾನಿ ಮತ್ತು ಅವರ ಕಂಪನಿ ದೇಶವನ್ನು ಲೂಟಿ ಮಾಡಿದೆ ಎಂದು ಆರೋಪಿಸಿದ ಸಿಪಿಎಂ ನಾಯಕ ಎಳಮರಮ್ ಕರೀಂ ಎಲ್‌ಐಸಿ ಮತ್ತು ಎಸ್‌ಬಿಐ ಹಣವು ಸರ್ಕಾರದ ಆಶ್ರಯದಲ್ಲಿದ್ದು, ಇದು ದೊಡ್ಡ ಹಗರಣ ಮತ್ತು ಸಾಮಾನ್ಯ ಜನರಿಗೆ ಜ್ವಲಂತ ಸಮಸ್ಯೆಯಾಗಿದೆ ಮತ್ತು ತನಿಖೆಗೆ ಅರ್ಹವಾಗಿದೆ ಎಂದರು.

ಈ ಬೃಹತ್ ಹಗರಣದ ಬಗ್ಗೆ ಸರ್ಕಾರ ಏಕೆ ಮೌನವಾಗಿದೆ ಎಂದು ಪ್ರಶ್ನಿಸಿದ ಎಎಪಿ ಸಂಸದ ಸಂಜಯ್ ಸಿಂಗ್, ಅದಾನಿ ಇದರ ಕಿಂಗ್ ಪಿನ್ ಎಂದು ಆರೋಪಿಸಿದರು. ಸಭೆಯಲ್ಲಿ ಶಿವಸೇನೆಯ (ಠಾಕ್ರೆ) ಪ್ರಿಯಾಂಕಾ ಚತುರ್ವೇದಿ, ಡಿಎಂಕೆ ನಾಯಕಿ ಕನಿಮೊಳಿ ಇದ್ದರು.

ಮೂರು ದಿನಗಳ 'ಕದಂಬ ರಾಜ್ಯ ಮಟ್ಟದ ಏಕವ್ಯಕ್ತಿ ಮಹಿಳಾ ನಾಟಕೋತ್ಸವ'ಕ್ಕೆ ಚಾಲನೆ

ಮೈಸೂರು, ಫೆ.2(ಎಂಕೆ)– ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ಕದಂಬ ರಂಗ ವೇದಿಕೆ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಆಯೋಜಿಸಿರುವ ಮೂರು ದಿನಗಳ 'ಕದಂಬ ರಾಜ್ಯ ಮಟ್ಟದ ಏಕವ್ಯಕ್ತಿ ಮಹಿಳಾ ನಾಟಕೋತ್ಸವ'ಕ್ಕೆ ಗುರುವಾರ ಚಾಲನೆ ನೀಡಲಾಯಿತು.



ಹಿರಿಯ ರಂಗನಟಿ ಶ್ರೀಮತಿ ಸುಂದರಶ್ರೀ, ಜಂಬೆ ಬಾರಿಸುವ ಮೂಲಕ ಏಕವ್ಯಕ್ತಿ ಮಹಿಳಾ ನಾಟಕೋತ್ಸವಕ್ಕೆ ಚಾಲನೆ ನೀಡಿದರಲ್ಲದೆ ಮಹಿಳಾ ಕಲಾವಿದರಿಗೆ ಶುಭ ಕೋರಿದರು. ಬಳಿಕ ರಂಗಾಯಣ ಉಪನಿರ್ದೇಶಕಿ ನಿರ್ಮಲಾ ಮಠಪತಿ ಮಾತನಾಡಿ, ಹಿಂದೆ ನಾಟಕಗಳಲ್ಲಿ ಮಹಿಳೆಯರ ಪಾತ್ರಗಳನ್ನು ಪುರುಷರೇ ನಿರ್ವಹಿಸುತ್ತಿದ್ದರು. ತದನಂತರ ಮಹಿಳೆಯರು ನಾಟಕಗಳಲ್ಲಿ ಅಭಿನಯಿಸಲು ಪ್ರಾರಂಭಿಸಿದಾಗ ರಂಗಭೂಮಿಗೆ ಹೊಸ ಮೆರಗು ಬಂದಂತಾಯಿತು. ಇತ್ತೀಚಿನ ದಿನಗಳಲ್ಲಿ ಪುರುಷರಿಗಿಂತ ಮಹಿಳೆಯರೇ ಹೆಚ್ಚಾಗಿ ರಂಗಭೂಮಿ ಅಥವಾ ನಟನೆಯತ್ತ ಬರುತ್ತಿರುವುದು ಸಂತಸದ ವಿಚಾರವಾಗಿದೆ ಎಂದರು.

ಏಕವ್ಯಕ್ತಿ ನಾಟಕಗಳಲ್ಲಿಯೂ ಮಹಿಳಾ ಕಲಾವಿದರು ತಮ್ಮದೇ ಛಾಪು ಮೂಡಿಸಿದ್ದಾರೆ. ರಂಗಾಯಣದಲ್ಲಿ ಮಹಿಳಾ ಕಲಾವಿದರಿಗಾಗಿ 'ಅಕ್ಕ' ನಾಟಕೋತ್ಸವ ಆಯೋಜಿಸಲಾಗಿತ್ತು. ಹಾಗೆಯೇ ಕದಂಬ ರಂಗ ವೇದಿಕೆ ವತಿಯಿಂದ ಮೊದಲ ಬಾರಿಗೆ ಏಕವ್ಯಕ್ತಿ ಮಹಿಳಾ ನಾಟಕೋತ್ಸವ ಆಯೋಜಿಸಿರುವುದು ಶ್ಲಾಘನೀಯ. ಇದರಿಂದ ಮಹಿಳಾ ಕಲಾವಿದರಿಗೆ ಪ್ರೋತ್ಸಾಹ ದೊರೆತಂತಾಗುತ್ತದೆ ಎಂದರು.

ಹಿರಿಯ ರಂಗಭೂಮಿ ಕಲಾವಿದೆ ರಾಜೇಶ್ವರಿ ವರ್ಮ ಮಾತನಾಡಿ, ಮೈಸೂರಿನಲ್ಲಿ ಮಹಿಳಾ ನಾಟಕೋತ್ಸವ ಮಾಡುತ್ತಿರುವುದು ಮೆಚ್ಚುವ ಸಂಗತಿಯಾಗಿದ್ದು, ಆಯೋಜಕರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರಲ್ಲದೆ ಸ್ತ್ರೀಯರು ರಂಗಭೂಮಿ ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿಕೊಳ್ಳುವುದು ಸಂತಸದ ವಿಚಾರವಾಗಿದೆ ಎಂದರು. ಬಳಿಕ ಸಾಣೇಹಳ್ಳಿ ಗ್ರಾಮರಂಗ ಸಾಂಸ್ಕೃತಿಕ ಟ್ರಸ್ಟ್ ಕಲಾವಿದೆ ಮಂಜುಳಾ ಬಾದಾಮಿ ಅವರಿಂದ 'ವಸುಂಧರೆ(ಭೂಮಿಯ ಅಂತರಾಳದ ಅನಾವರಣ) ನಾಟಕ ಪ್ರದರ್ಶನವಾಯಿತು. ರಂಗಕರ್ಮಿ ರಾಜಶೇಖರ ಕದಂಬ ಉಪಸ್ಥಿತರಿದ್ದರು.



ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕಿನ ನೂತನ ಉಪಾಧ್ಯಕ್ಷರಾಗಿ ಆಯ್ಕೆಯಾದ ಹೆಚ್.ಹರೀಶ್‌ಕುಮಾರ್ ಅವರನ್ನು ಬಿಜೆಪಿ ಮುಖಂಡ ಎಲ್.ಚೌಡಪ್ಪ, ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ ಅಭಿನಂದಿಸಿದರು. ಈ ವೇಳೆ ಮಾಜಿ ಉಪ ಮೇಯರ್ ಎ.ಜಿ.ಅರ್ಜುನ್‌ಕುಮಾರ್, ಮಾಜಿ ಅಧ್ಯಕ್ಷರಾದ ಕೆ.ಉಮಾಶಂಕರ್, ನಿರ್ದೇಶಕರಾದ ಪಡುವಾರಹಳ್ಳಿ ಎಂ.ರಾಮಕೃಷ್ಣ, ಎಸ್.ಅರವಿಂದ್, ಪರಶಿವ, ಶಾಂತಿ, ಹೇಮಂತ, ವಾಣೀಶ್, ರೋಹಿತ್ ಸಾಹಿ, ಅಶೋಕ್ ಇನ್ನಿತರರಿದ್ದರು.

ಇಂದಿನಿಂದ ಬೇವಿನಮರದ ಶ್ರೀ ಯಲ್ಲಮ್ಮನವರ ವಾರ್ಷಿಕ ಮಹೋತ್ಸವ

ಮೈಸೂರು, ಫೆ.2– ಮೈಸೂರಿನ ಕೆ.ಆರ್.ಮೊಹಲ್ಲಾದ ನಾಲಾ ಬೀದಿಯಲ್ಲಿರುವ ಕೆ.ಆರ್.ಯಲ್ಲಪ್ಪರಾಯರ ಶ್ರೀ ಯಲ್ಲಮ್ಮನವರ ದೇವಸ್ಥಾನದಲ್ಲಿ 'ಬೇವಿನ ಮರದ ಶ್ರೀ ಯಲ್ಲಮ್ಮನವರ 75ನೇ ವರ್ಷದ ಮಹೋತ್ಸವ'ವನ್ನು ಏರ್ಪಡಿಸಲಾಗಿದೆ.

ಫೆಬ್ರವರಿ 3ರಿಂದ 6ರವರೆಗೆ ಮಹೋತ್ಸವ ನಡೆಯಲಿದ್ದು, ಪ್ರತಿದಿನ ವಿಶೇಷ ಪೂಜಾ ಕೈಂಕರ್ಯ, ಪ್ರಸಾದ ವಿನಿಯೋಗ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಜಲ್ಲಿಕಟ್ಟಿಗೆ ಬಿಗಿಪಟ್ಟು; ಕೃಷ್ಣಗಿರಿಯಲ್ಲಿ ಕಲ್ಲು ತೂರಾಟ, ಲಾಠಿಚಾರ್ಜ್

ಚೆನ್ನೈ,ಫೆ.2–ಜಲ್ಲಿಕಟ್ಟು ಕ್ರೀಡೆಗೆ ಅನುಮತಿ ನೀಡದ್ದಕ್ಕೆ ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯಲ್ಲಿ ನಡೆಯುತ್ತಿದ್ದ ಪ್ರತಿಭಟನೆ ಹಿಂಸಾರೂಪಕ್ಕೆ ತಿರುಗಿದೆ. ರೊಚ್ಚಿಗೆದ್ದ ಜನರು ಪೊಲೀಸ್ ವಾಹನಗಳ ಮೇಲೆ ಕಲ್ಲು ತೂರಾಟ ನಡೆಸಿದ್ದು, ಪರಿಸ್ಥಿತಿ ನಿಯಂತ್ರಿಸಲು ಪೊಲೀಸರು ಹರಸಾಹಸ ಪಟ್ಟಿದ್ದಾರೆ.

ಕೃಷ್ಣಗಿರಿ ಜಿಲ್ಲೆಯಲ್ಲಿ ಜಲ್ಲಿಕಟ್ಟು ಕ್ರೀಡೆ ಆಯೋಜಿಸಲು ತೀರ್ಮಾನಿಸಲಾಗಿತ್ತು. ಆದರೆ ಜಿಲ್ಲಾಡಳಿತ ಅದಕ್ಕೆ ಅನುಮತಿ ನೀಡಲು ನಿರಾಕರಿಸಿದ್ದೇ ಈ ಉಗ್ರಹೋರಾಟಕ್ಕೆ ಕಾರಣವಾಗಿದೆ. ಸ್ಥಳಕ್ಕೆ ಬಂದ ಪೊಲೀಸರು ಜನರನ್ನು ಚದುರಿಸಲು ಅಶ್ರುವಾಯು ಸಿಡಿಸಿ, ಲಾಠಿಚಾರ್ಜ್ ಮಾಡಿದ್ದಾರೆ. ಜಲ್ಲಿಕಟ್ಟು ಹೋರಾಟಗಾರರು ಬೆಂಗಳೂರು–ಚೆನ್ನೈ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು. ಈ ಪ್ರತಿಭಟನೆಯಿಂದ 2 ಗಂಟೆಗಳ ಕಾಲ ಬೆಂಗಳೂರು–ಚೆನ್ನೈ ಹೆದ್ದಾರಿ ಸಂಚಾರ ಬಂದ್ ಆಗಿತ್ತು. ಕೊನೆಗೆ ಪೊಲೀಸರು ಜಲಫಿರಂಗಿ ಬಳಸಿ ಪರಿಸ್ಥಿತಿಯನ್ನ ನಿಯಂತ್ರಿಸಿದ್ದಾರೆ.

ಬೇಸಿಗೆ ಬಂತು: ಹಾಸ್ಟೆಲ್‌ಗಳಲ್ಲಿ ಶುಚಿತ್ವ ಕಾಯ್ದುಕೊಳ್ಳಿ



ಮೈಸೂರಿನಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಯೋಜನಾ ಸಮನ್ವಯಾಧಿಕಾರಿ ಎನ್.ಮುನಿರಾಜು, ವಿದ್ಯಾರ್ಥಿನಿಲಯಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ಮೈಸೂರು, ಫೆ.2(ಎಸ್‌ಬಿಡಿ)– ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವಾಲ್ಮೀಕಿ ಆಶ್ರಮಶಾಲೆ ಹಾಗೂ ವಿದ್ಯಾರ್ಥಿನಿಲಯಗಳಲ್ಲಿ ಶುಚಿತ್ವ ಕಾಯ್ದುಕೊಳ್ಳುವಂತೆ ಇಲಾಖೆ ಯೋಜನಾ ಸಮನ್ವಯಾಧಿಕಾರಿ ಎನ್.ಮುನಿರಾಜು ಸೂಚನೆ ನೀಡಿದರು.

ಮೈಸೂರಿನ ಪಡುವಾರಹಳ್ಳಿಯಲ್ಲಿರುವ ಡಾ.ಬಾಬು ಜಗಜೀವನರಾಂ ಭವನದಲ್ಲಿ ಗುರುವಾರ ವಿದ್ಯಾರ್ಥಿನಿಲಯಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಆಶ್ರಮ ಶಾಲೆ ಹಾಗೂ ಹಾಸ್ಟೆಲ್‌ಗಳಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಕುಡಿಯುವ ನೀರಿನ ಸಂಪು ಹಾಗೂ ಟ್ಯಾಂಕ್‌ಗಳನ್ನು ಆಗಾಗ್ಗೆ ಸ್ವಚ್ಛ ಮಾಡಿಸಬೇಕು. ಆವರಣ, ಅಡುಗೆ ಮನೆ, ದಾಸ್ತಾನು ಕೊಠಡಿ, ವಸತಿ ಕೊಠಡಿಗಳು, ಸ್ನಾನದ ಮನೆ ಮತ್ತು ಶೌಚಾಲಯಗಳನ್ನು ಶುಚಿಯಾಗಿಡಬೇಕು. ಅನುಪಯುಕ್ತ ವಸ್ತುಗಳನ್ನು ಸರ್ಕಾರದ ನಿರ್ದೇಶನದಂತೆ ಶೀಘ್ರವಾಗಿ ವಿಲೇವಾರಿ ಮಾಡಬೇಕೆಂದು ತಿಳಿಸಿದರು.

ವಿದ್ಯಾರ್ಥಿಗಳಿಗೆ ಮೂಲ ಸೌಕರ್ಯಗಳ ಕೊರತೆಯಾಗದಂತೆ ಎಚ್ಚರ ವಹಿಸಿ. ಅವರಿಗೆ ಲಭ್ಯವಿರುವ ಸೌಲಭ್ಯಗಳನ್ನು ನಿಗದಿತ ಅವಧಿಯಲ್ಲಿ ಕಲ್ಪಿಸಿ. ವಿದ್ಯಾರ್ಥಿಗಳ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದರ ಜೊತೆಗೆ ಸಾಧ್ಯವಾದಲ್ಲಿ ಆರೋಗ್ಯ ತಪಾಸಣಾ ವ್ಯವಸ್ಥೆ ಮಾಡಿ. ಶಾಲೆಗಳಲ್ಲಿ ಹೆಚ್ಚುವರಿ ಸಾಮಗ್ರಿಗಳಿದ್ದರೆ ಅದರ ಬಗ್ಗೆ ಮಾಹಿತಿ ಹಂಚಿಕೊಂಡು ತಾಲೂಕು ಮಟ್ಟದಲ್ಲಿ ಅಗತ್ಯವಿರುವ ಶಾಲೆಗಳಿಗೆ ಹಸ್ತಾಂತರಿಸಲು ಕ್ರಮ ವಹಿಸಬೇಕು ಎಂದು ಸೂಚನೆ ನೀಡಿದರು.

ನಿರ್ಲಕ್ಷಿಸಿದರೆ ಕ್ರಮ: ಆಶ್ರಮ ಶಾಲೆ ಹಾಗೂ ವಿದ್ಯಾರ್ಥಿನಿಲಯಗಳನ್ನು ಉತ್ತಮವಾಗಿ ನಿರ್ವಹಿಸುವ ಮೂಲಕ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಒತ್ತಾಸೆಯಾಗಿರಬೇಕು. ಈ ನಿಟ್ಟಿನಲ್ಲಿ ಹಾಸ್ಟೆಲ್‌ಗಳಲ್ಲಿ ಪೂರಕ ವಾತಾವರಣ ಕಲ್ಪಿಸಿಕೊಡಬೇಕು. ಏನಾದರೂ ಲೋಪದೋಷಗಳು ಕಂಡು ಬಂದರೆ ಅದಕ್ಕೆ ಆಯಾಯ ತಾಲೂಕು ಅಧಿಕಾರಿಗಳು, ನಿಲಯ ಮೇಲ್ವಿಚಾರಕರು, ಮುಖ್ಯಶಿಕ್ಷಕರುಗಳು ಜವಾಬ್ದಾರರಾಗುತ್ತೀರಿ. ನಿರ್ಲಕ್ಷ ವಹಿಸಿದವರ ವಿರುದ್ಧ ಕ್ರಮಕ್ಕೆ ಶಿಫಾರಸು ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಸಭೆಯಲ್ಲಿ ತಾಲೂಕು ಕಲ್ಯಾಣಾಧಿಕಾರಿಗಳಾದ ನಾರಾಯಣಸ್ವಾಮಿ, ಸಿದ್ದೇಗೌಡ, ಅಶೋಕ್, ಕೋಮಲ, ಬಸವರಾಜು, ಮೊಹಮ್ಮದ್ ಷಫೀರ್, ಕಛೇರಿ ಅಧೀಕ್ಷಕರಾದ ಹನುಮಂತರಾಯಪ್ಪ, ರಾಧಾ, ಆರಾಧ್ಯ, ಜ್ಯೂಲಿಯೇಟ್, ಚೇತನ್, ಲತಾ ಶಿವರಾಂ, ಸರಸ್ವತಿ, ಆಶ್ರಮ ಶಾಲೆಗಳ ಮುಖ್ಯಶಿಕ್ಷಕರು, ನಿಲಯ ಪಾಲಕರು ಹಾಜರಿದ್ದರು.

ಮರಳು ಸಾಗಣೆ ಕೇಸು ದಾಖಲಿಸುವ ಬೆದರಿಕೆಯೊಡ್ಡಿ ಹಣಕ್ಕೆ ಡಿಮ್ಯಾಂಡ್ ಮಾಡುತ್ತಿದ್ದ ಪೊಲೀಸ್ ಬಂಧನ

▸ ಲೋಕಾಯುಕ್ತ ಪೊಲೀಸರ ಕಾರ್ಯಾಚರಣೆ ▸ ಪೇದೆ ಬದಲು ಲಂಚ ಸ್ವೀಕರಿಸುತ್ತಿದ್ದ ಬೀಡಾ ಅಂಗಡಿ ಮಾಲೀಕ ವಶಕ್ಕೆ

ಮಡಿಕೇರಿ, ಫೆ.2– ಮನೆಗೆ ಮಣ್ಣು ಸಾಗಿಸುತ್ತಿದ್ದ ವ್ಯಕ್ತಿಯೊಬ್ಬರ ಮೇಲೆ ಮರಳು ಸಾಗಾಟದ ಕೇಸ್ ದಾಖಲಿಸುವುದಾಗಿ ಬೆದರಿಸಿ ಹಣಕ್ಕೆ ಡಿಮ್ಯಾಂಡ್ ಮಾಡುತ್ತಿದ್ದ ಆರೋಪದಡಿ ಪೊಲೀಸ್ ಪೇದೆಯೋರ್ವನನ್ನು ಮಡಿಕೇರಿ ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ. ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆ ಸಿಬ್ಬಂದಿ ಸೋಮ ಶೇಖರ್ ಸಜ್ಜನ್ ಬಂಧಿತ ಆರೋಪಿ.

ಪ್ರಕರಣ ಹಿನ್ನೆಲೆ: ಬಿಳಿಗೇರಿ ಗ್ರಾಮದ ವ್ಯಕ್ತಿಯೊಬ್ಬರು ಬೊಲೆರೋ ವಾಹನದಲ್ಲಿ ಮನೆಗೆ ಮಣ್ಣು ಸಾಗಿಸುತ್ತಿದ್ದರು ಎನ್ನಲಾಗಿದೆ. ಈ ವೇಳೆ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯ ಪೇದೆ ಸೋಮಶೇಖರ್ ಸಜ್ಜನ್ ಮರಳು ಸಾಗಾಟದ ಕೇಸು ದಾಖಲಿಸುವುದಾಗಿ ಬೆದರಿಸಿ 30 ಸಾವಿರ ರೂ.ಗಳಿಗೆ ಬೇಡಿಕೆ ಇಟ್ಟಿದ್ದ ಎನ್ನಲಾಗಿದೆ. ಈ ಸಂದರ್ಭ ವ್ಯಕ್ತಿಯಿಂದ 7,500 ರೂ.ಗಳನ್ನು ಪಡೆದುಕೊಳ್ಳಲಾಗಿತ್ತು. ಬಳಿಕ ಹೆಚ್ಚುವರಿ 20 ಸಾವಿರ ರೂ.ಗಳನ್ನು ನೀಡುವಂತೆ ಒತ್ತಡ ಹಾಕುತ್ತಿದ್ದ. ಈ ವೇಳೆ ಮಾತುಕತೆ ನಡೆದು 10 ಸಾವಿರ ರೂ.ಗಳಿಗೆ ಅಂತಿಮಗೊಳಿಸಲಾಗಿತ್ತು ಎಂದು ಹೇಳಲಾಗುತ್ತಿದೆ.

> **ಲಂಚದ ಹಣಕ್ಕೆ ಬೇಡಿಕೆ ಇಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಪೇದೆ ಸೋಮಶೇಖರ್ ಸಜ್ಜನ್ ಎಂಬುವರನ್ನು ಟ್ರ್ಯಾಪ್ ಮಾಡಿ ಬಂಧಿಸಲಾಗಿದೆ. ಹಣ ಪಡೆದ ಬೀಡಾ ಶಾಪ್ ಮಾಲೀಕ ಹಮೀದ್ ಎಂಬವರನ್ನು ವಶಕ್ಕೆ ಪಡೆದು ಹೇಳಿಕೆ ಪಡೆಯಲಾಗಿದೆ. ಈ ಪ್ರಕರಣದಲ್ಲಿ ಕೆಲವು ತಾಂತ್ರಿಕ ಸಾಕ್ಷ್ಯಗಳನ್ನು ಸಂಗ್ರಹಿಸಲಾಗಿದ್ದು, ಅದರ ಆಧಾರದಲ್ಲಿ ತನಿಖೆ ಮುಂದುವರೆದಿದೆ.**
>
> **–ಸುರೇಶ್ ಬಾಬು, ಲೋಕಾಯುಕ್ತ ಎಸ್.ಪಿ., ಮೈಸೂರು ವಿಭಾಗ**

ಬೀಡಾ ಶಾಪಲ್ಲಿ ಡೀಲ್: ಈ 10 ಸಾವಿರ ರೂ.ಗಳನ್ನು ನೇರವಾಗಿ ಪಡೆದುಕೊಳ್ಳದೇ ನಗರದ ಹಳೇ ಖಾಸಗಿ ಬಸ್ ನಿಲ್ದಾಣದ ಬಳಿ ಇರುವ ಬೀಡಾ ಮಳಿಗೆಯ ಮಾಲೀಕ ಹಮೀದ್ ಎಂಬುವರಿಗೆ ನೀಡುವಂತೆ ಸೋಮಶೇಖರ್ ಸಜ್ಜನ್ ವ್ಯಕ್ತಿಗೆ ತಿಳಿಸಿದ್ದ. ಈ ಎಲ್ಲಾ ಬೆಳವಣಿಗೆಗಳಿಂದ ಮನನೊಂದ ವ್ಯಕ್ತಿ, ಲೋಕಾಯುಕ್ತಕ್ಕೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡ ಲೋಕಾಯುಕ್ತ ಪೊಲೀಸರು ದೂರುದಾರರಿಂದ ಲಂಚದ ರೂಪದಲ್ಲಿ ಹಣ ಸ್ವೀಕರಿಸುತ್ತಿದ್ದ ಸಂದರ್ಭ ಬೀಡಾ ಅಂಗಡಿ ಮಾಲೀಕ ಹಮೀದ್‌ನನ್ನು ಹಣದ ಸಹಿತ ವಶಕ್ಕೆ ಪಡೆದಿದ್ದಾರೆ. ಆತ ನೀಡಿದ ಮಾಹಿತಿ ಆಧರಿಸಿ ಪೇದೆ ಸೋಮಶೇಖರ್ ಸಜ್ಜನ್ ಎಂಬಾತನನ್ನು ಲೋಕಾಯುಕ್ತ ಪೊಲೀಸರು ದಸ್ತಗಿರಿ ಮಾಡಿದ್ದಾರೆ. ಈ ಪ್ರಕರಣದ ಕುರಿತು ತನಿಖೆ ಮುಂದುವರೆದಿದೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ನುಡಿ ಹಬ್ಬಕ್ಕೆ ಸಜ್ಜುಗೊಂಡ ಕುಶಾಲನಗರ

ಮಧುವಣಗಿತ್ತಿಯಂತೆ ಶೃಂಗಾರಗೊಂಡಿರುವ ಪಟ್ಟಣ



ಕುಶಾಲನಗರ, ಫೆ.2– ತಾಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಕ್ಷಣಗಣನೆ ಆರಂಭಗೊಂಡಿದೆ. ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಶುಕ್ರವಾರ (ಫೆ.3) ನಡೆಯುವ ಸಮ್ಮೇಳನಕ್ಕೆ ಪಟ್ಟಣ ಮಧುವಣಗಿತ್ತಿಯಂತೆ ಶೃಂಗಾರಗೊಂಡಿದೆ.

ರಾಜ್ಯಕ್ಕೆ ಮುಖ್ಯಮಂತ್ರಿಗಳನ್ನು ನೀಡಿದ ಹೆಮ್ಮೆಯ ಕುಶಾಲನಗರ ಪಟ್ಟಣ ಇದೀಗ ತಾಲೂಕು ಕೇಂದ್ರವಾಗಿ ರೂಪುಗೊಂಡಿದೆ. ಜೊತೆಗೆ ಪಟ್ಟಣ ಪಂಚಾಯಿತಿಯನ್ನು ಸರ್ಕಾರ ಪುರಸಭೆಯಾಗಿ ಮೇಲ್ದರ್ಜೆಗೇರಿಸಿದೆ. ಪ್ರಥಮ ಕನ್ನಡ ಹಬ್ಬ ರೈತ ಸಹಕಾರ ಭವನದಲ್ಲಿ ಮೇಳೈಸಲಿದೆ.

ಮಡಿಕೇರಿ ಶಾಸಕ ಎಂ.ಪಿ. ಅಪ್ಪಚ್ಚು ರಂಜನ್ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿ ರಚನೆಗೊಂಡಿದ್ದು, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಎಂ.ಪಿ. ಕೇಶವ ಕಾಮತ್ ಸಮಿತಿಯ ಗೌರವಾಧ್ಯಕ್ಷರಾಗಿ, ತಾಲೂಕು ಅಧ್ಯಕ್ಷ ಕೆ.ಎಸ್. ಮೂರ್ತಿ ಕಾರ್ಯಾಧ್ಯಕ್ಷತೆಯಲ್ಲಿ ವಿವಿಧ ಉಪ ಸಮಿತಿಗಳು ರಚನೆಗೊಂಡಿದ್ದು, ಅದ್ದೂರಿಯ ಸಮ್ಮೇಳನಕ್ಕೆ ಪೂರ್ವ ಸಿದ್ಧತೆ ನಡೆದಿದೆ.

ಫೆ.3ರ ಶುಕ್ರವಾರ ಬೆಳಗ್ಗೆ 8 ಗಂಟೆಗೆ ರೈತ ಸಹಕಾರ ಭವನ ಆವರಣದಲ್ಲಿ ಕುಶಾಲನಗರ ಪುರಸಭೆ ಅಧ್ಯಕ್ಷ ಬಿ.ಜಯವರ್ಧನ್ ರಾಷ್ಟ್ರ ಧ್ವಜಾರೋಹಣ, ಜಿಲ್ಲಾಧ್ಯಕ್ಷ ಎಂ.ಪಿ. ಕೇಶವ ಕಾಮತ್ ಕನ್ನಡ ಸಾಹಿತ್ಯ ಪರಿಷತ್ ಧ್ವಜಾರೋಹಣ ನೆರವೇರಿಸುವರು.

ಕನ್ನಡ ಧ್ವಜಾರೋಹಣವನ್ನು ತಾಲೂಕು ಕೆ.ಎಸ್ ಮೂರ್ತಿ ನೆರವೇರಿಸಲಿದ್ದಾರೆ. ಇದೇ ಸಂದರ್ಭ ಕುಶಾಲನಗರ ಪಟ್ಟಣದ ಪ್ರಮುಖ ದ್ವಾರಗಳಲ್ಲಿ ಗಣ್ಯರ ನೆನಪಿನ ದ್ವಾರಗಳ ಉದ್ಘಾಟನೆ ಏಕ ಕಾಲಕ್ಕೆ ನಡೆಯಲಿದೆ. ಎಸ್.ಎನ್ ನರಸಿಂಹಮೂರ್ತಿ, ವಾಲ್ನೂರು ವೀರಪ್ಪಗೌಡ, ಕೂಡಿಗೆ ಮೂಡ್ಲಿ ಗೌಡ, ಗುಡ್ಡೆಹೊಸೂರು ಬಿ.ಟಿ ವಿಶ್ವನಾಥ, ಎಸ್.ಎನ್ ಲಕ್ಷಣ ಶೆಟ್ಟಿ ಹೆಸರಿನ ನೆನಪಿನ ದ್ವಾರ ನಿರ್ಮಿಸಲಾಗಿದ್ದು, ತಾಲೂಕಿನ ಗಣ್ಯರ ಉಪಸ್ಥಿತಿಯಲ್ಲಿ ಉದ್ಘಾಟನೆಗೊಳ್ಳಲಿದೆ.



ಸಮ್ಮೇಳನಾಧ್ಯಕ್ಷರ ಮೆರವಣಿಗೆ ಕುಶಾಲನಗರ ಕೊಪ್ಪ ಗಡಿಭಾಗದ ಕಾವೇರಿ ನದಿ ದಂಡೆಯಿಂದ ಮುಖ್ಯ ರಸ್ತೆ ಮೂಲಕ ರೈತ ಸಹಕಾರ ಭವನದ ವೇದಿಕೆ ತನಕ ಸಾಗಲಿದೆ. ಸಮ್ಮೇಳನಾಧ್ಯಕ್ಷರಾದ ಹಿರಿಯ ಸಾಹಿತಿ ಹಾಗೂ ಪತ್ರಕರ್ತರಾದ ಬಿ.ಆರ್ ನಾರಾಯಣ ಅವರನ್ನು ಮೆರವಣಿಗೆಯಲ್ಲಿ ಸಭಾಂಗಣಕ್ಕೆ ಕರೆತರಲಾಗುವುದು.

ಸಮ್ಮೇಳನವನ್ನು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಉದ್ಘಾಟಿಸುವರು. ಕ್ಷೇತ್ರದ ಶಾಸಕರು ಹಾಗೂ ಸಮ್ಮೇಳನ ಸ್ವಾಗತ ಸಮಿತಿಯ ಅಧ್ಯಕ್ಷ ಎಂ.ಪಿ. ಅಪ್ಪಚ್ಚುರಂಜನ್ ಆಶಯ ನುಡಿಗಳನ್ನಾಡಲಿದ್ದಾರೆ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಎಂ.ಪಿ. ಕೇಶವ ಕಾಮತ್ ಅವರ ಪ್ರಾಸ್ತಾವಿಕ ನುಡಿಗಳೊಂದಿಗೆ ಸಮ್ಮೇಳನಾಧ್ಯಕ್ಷ ಹಿರಿಯ ಪತ್ರಕರ್ತರು, ಸಾಹಿತಿಗಳಾದ ಬಿ.ಆರ್. ನಾರಾಯಣ ಅವರ ಭಾಷಣ, ನಂತರ ಮುಖ್ಯ ಭಾಷಣಕಾರರಾಗಿ ಮಂಗಳೂರು ವಿಶ್ವ ವಿದ್ಯಾನಿಲಯದ ಪರೀಕ್ಷಾಂಗ ವಿಭಾಗದ ಕುಲಸಚಿವರಾದ ಡಾ. ಪಿ.ಎಲ್. ಧರ್ಮ ಅವರು ಪಾಲ್ಗೊಳ್ಳಲಿದ್ದಾರೆ. ಸ್ಮರಣ ಸಂಚಿಕೆಯ ಮುಖಪುಟವನ್ನು ವಿಧಾನ ಪರಿಷತ್ ಸದಸ್ಯರಾದ ಸುಜಾ ಕುಶಾಲಪ್ಪ ಅವರು ಬಿಡುಗಡೆಗೊಳಿಸುವರು.

ಮಧ್ಯಾಹ್ನ 2 ಗಂಟೆಯಿಂದ ವಿಚಾರ ಗೋಷ್ಠಿ ನಡೆಯಲಿದೆ. ಮಧ್ಯಾಹ್ನ 3ರಿಂದ 4 ಗಂಟೆ ತನಕ ಕವಿಗೋಷ್ಠಿ ಆಯೋಜಿಸಲಾಗಿದೆ. ಬಹಿರಂಗ ಅಧಿವೇಶನ 4 ಗಂಟೆಗೆ ಹಮ್ಮಿಕೊಳ್ಳಲಾಗಿದ್ದು, ತಾಲೂಕು ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಕೆ.ಎಸ್ ಮೂರ್ತಿ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಪರಿಷತ್ತಿನ ಗೌರವ ಕಾರ್ಯದರ್ಶಿ ಎಸ್. ನಾಗರಾಜು, ಟಿ.ವಿ. ಶೈಲ ಮತ್ತು ಕೋಶಾಧಿಕಾರಿ ಕೆ.ವಿ. ಉಮೇಶ್ ನಿರ್ಣಯ ಮಂಡಿಸಲಿದ್ದಾರೆ. ಸಮಾರೋಪ ಸಮಾರಂಭ ಸಂಜೆ 5 ಗಂಟೆಗೆ ಸಮ್ಮೇಳನ ಕಾರ್ಯಾಧ್ಯಕ್ಷ ಕೆ.ಎಸ್. ಮೂರ್ತಿ ಅಧ್ಯಕ್ಷತೆಯಲ್ಲಿ ನಡೆಯಲಿದ್ದು, ಸಮ್ಮೇಳನಾಧ್ಯಕ್ಷ ಬಿ.ಆರ್. ನಾರಾಯಣ ಆಶಯ ನುಡಿಗಳನ್ನಾಡುವವರು.

ಫೆ.5, ಸಾಮೂಹಿಕ ಸತ್ಯನಾರಾಯಣ ಪೂಜೆ

ಮಡಿಕೇರಿ ಫೆ2– ಮಡಿಕೇರಿ ತಾಲೂಕಿನ ಭಾಗಮಂಡಲದ ಶ್ರೀ ಭಗಂಡೇಶ್ವರ ದೇವಾಲಯದಲ್ಲಿ ಫೆ.5 ರಂದು ಸಂಜೆ 4 ಗಂಟೆಯಿಂದ "ಸಾಮೂಹಿಕ ಸತ್ಯ ನಾರಾಯಣ" ಪೂಜೆ ನಡೆಯಲಿದೆ.

ಭಕ್ತಾದಿಗಳು ದೇವಾಲಯಗಳಲ್ಲಿ ನಡೆಯಲಿರುವ "ಸಾಮೂಹಿಕ ಸತ್ಯನಾರಾಯಣ" ಪೂಜೆಯಲ್ಲಿ ಭಾಗವಹಿಸಿ, ಪೂಜೆಯನ್ನು ಯಶಸ್ವಿಗೊಳಿಸಬೇಕಾಗಿ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ದೊರೆ ಎಂ.ಎಸ್. ಕೋರಿದ್ದಾರೆ.

ನಗರಸಭೆ ಆಯವ್ಯಯ ಸಿದ್ಧತೆ; ಫೆ.6 ರಂದು ಪೂರ್ವಭಾವಿ ಸಭೆ

ಮಡಿಕೇರಿ ಫೆ.2. 2023–24 ನೇ ಸಾಲಿನಲ್ಲಿ ಮಡಿಕೇರಿ ನಗರಸಭೆ ಆಯವ್ಯಯ ತಯಾರಿಸುವ ಸಂಬಂಧ ಆದಾಯ ಮತ್ತು ಅಭಿವೃದ್ಧಿ ಬಗ್ಗೆ ಸೂಕ್ತ ಸಲಹೆ ಪಡೆಯಲು ನಗರಸಭೆ ಅಧ್ಯಕ್ಷರಾದ ಎನ್.ಪಿ.ಅನಿತಾ ಪೂವಯ್ಯ ಅವರ ಅಧ್ಯಕ್ಷತೆಯಲ್ಲಿ ಫೆ.6 ರಂದು ಮಧ್ಯಾಹ್ನ 3 ಗಂಟೆಗೆ ನಗರದ ಕಾವೇರಿ ಕಲಾಕ್ಷೇತ್ರದಲ್ಲಿ ಪೂರ್ವಭಾವಿ ಸಭೆ ನಡೆಯಲಿದೆ.

ಸಭೆಗೆ ಹಿರಿಯ ನಾಗರಿಕರು, ನೋಂದಾಯಿತ ಸಂಘ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು ಹಾಗೂ ಸಾರ್ವಜನಿಕರು ಸಭೆಗೆ ಹಾಜರಾಗಿ ಸೂಕ್ತ ಸಲಹೆ ಸೂಚನೆ ನೀಡಬಹುದಾಗಿದೆ ಎಂದು ಪೌರಾಯುಕ್ತರಾದ ವಿಜಯ್ ಅವರು ಕೋರಿದ್ದಾರೆ.

ಇಂದಿನಿಂದ ಕಲ್ಲಕೆರೆ ಮಾದೇವಿ ಚಿತ್ರ ಪ್ರದರ್ಶನ

ವಿರಾಜಪೇಟೆ, ಫೆ2– ಕೊಡಗಿನ ಪ್ರಥಮ ಪೌರಾಣಿಕ ಸಿನಿಮಾ 'ಕಲ್ಲಕೆರೆ ಮಾದೇವಿ' ಚಲನಚಿತ್ರ ನಾಳೆ (ಫೆ.3)ಯಿಂದ ಫೆ.5 ರವರೆಗೆ ವಿರಾಜಪೇಟೆ ಕೊಡವ ಸಮಾಜದ ಸಭಾಂಗಣದಲ್ಲಿ ಪ್ರದರ್ಶನ ಗೊಳ್ಳಲಿದ್ದು, ಬೆಳಗ್ಗೆ 10.30ಕ್ಕೆ ಉದ್ಘಾಟನಾ ಕಾರ್ಯಕ್ರಮ ನಡೆಯಲಿದೆ ಎಂದು ಚಿತ್ರದ ನಿರ್ಮಾಪಕಿ ಪಟ್ಟಡ ರೀನಾ ಪ್ರಕಾಶ್ ತಿಳಿಸಿದ್ದಾರೆ.

ಪಿಎನ್‌ಜಿ ಕ್ರಿಯೇಷನ್ ಅಡಿಯಲ್ಲಿ 'ಕೊಡಗಿನ ಪವಿತ್ರ ಗ್ರಂಥವೆಂದು ಹೇಳುವ ಪಟ್ಟೋಳೆಪಳಮೆಯಿಂದ ಆಯ್ದ ಭಾಗಗಳನ್ನು ಒಳಗೊಂಡಂತೆ ಈ ಚಲನಚಿತ್ರ ನಿರ್ಮಿಸಲಾಗಿದೆ'. ಕೊಡಗಿನ ಸಿನಿಮಾ ಕ್ಷೇತ್ರದ ಪ್ರಥಮ ಪೌರಾಣಿಕ ಚಿತ್ರ ಕೋಕೇರಿಯಲ್ಲಿ ಜ.23 ರಂದು ಪ್ರದರ್ಶನಗೊಂಡಿದ್ದು, ಸ್ಥಳೀಯರಿಂದ ಉತ್ತಮ ಪ್ರತಿಕ್ರಿಯೆ ದೊರಕಿದೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಈ ಚಿತ್ರದಲ್ಲಿ ಕೊಡವ ಕುಟುಂಬದಲ್ಲಿ ನಾಗಪ್ರತಿಷ್ಠೆ, ಕೊಡವ ಹೆಣ್ಣು ಮಕ್ಕಳ ಪತ್ತಾಕಿನಲ್ಲಿ ನಾಗಮಣಿ ಹೇಗೆ ಬಂತು, ಕೊಡವರ ದುಡಿಯ ವಿಶಿಷ್ಟತೆ ಏನು, ಕೊಡವರ ಐತಿಹಾಸಿಕ ಮದುವೆ ಸಂಪ್ರದಾಯ ಹೇಗೆ ಎಂಬ ಹಲವಾರು ವಿಚಾರಗಳನ್ನು ಒಳಗೊಂಡಿದೆ. ವಿರಾಜಪೇಟೆಯಲ್ಲಿ ಮೂರು ದಿನಗಳ ಕಾಲ ಬೆಳಗ್ಗೆ 10.30, ಮಧ್ಯಾಹ್ನ 2 ಗಂಟೆಗೆ, ಸಂಜೆ 5 ಮತ್ತು ರಾತ್ರಿ 7ಕ್ಕೆ ಪ್ರದರ್ಶನ ಕಾಣಲಿದ್ದು ಪಟ್ಟಣ ಹಾಗೂ ಸುತ್ತಲಿನ ಗ್ರಾಮದ ಜನರು ಚಿತ್ರ ವೀಕ್ಷಿಸಿ ಸಹಕಾರ ನೀಡುವಂತೆ ಕೋರಿದ್ದಾರೆ. ಗೋಷ್ಠಿಯಲ್ಲಿ ಚಿತ್ರದ ನಿರ್ದೇಶಕ ಬಾಳೆಯಡ ಪ್ರತೀಕ್ ಪೂವಯ್ಯ ಮತ್ತು ಅಚೆಯಂಡ ಗಗನ್ ಉಪಸ್ಥಿತರಿದ್ದರು.

ಬಿಗಿ ಭದ್ರತೆಯಲ್ಲಿ ಶಂಕಿತ ನಕ್ಸಲ್ ಮುಖಂಡ ಕೋರ್ಟಿಗೆ ಹಾಜರು

ಮಡಿಕೇರಿ, ಫೆ.2– ನಕ್ಸಲ್ ಸಂಘಟನೆಯ ಶಂಕಿತ ಮುಖಂಡ, ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ನಕ್ಸಲ್ ಪ್ರಕರಣವನ್ನು ಎದುರಿಸುತ್ತಿರುವ ರೂಪೇಶ್‌ನನ್ನು ಬಿಗಿ ಭದ್ರತೆಯಲ್ಲಿ ಮಡಿಕೇರಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು.



ಕೇರಳ ಹಾಗೂ ಕರ್ನಾಟಕ ಪೊಲೀಸ್ ಕಮಾಂಡೋಗಳ ಬಿಗಿ ಭದ್ರತೆಯಲ್ಲಿ ಬಂದ ರೂಪೇಶ್ ಘೋಷಣೆಗಳನ್ನು ಕೂಗಿದನು. ಕೇರಳ ರಾಜ್ಯದ ವೈವೂರು ಕೇಂದ್ರ ಕಾರಾಗೃಹದಲ್ಲಿ ಬಂಧಿಯಾಗಿರುವ ರೂಪೇಶ್‌ನನ್ನು ಬುಧವಾರ ಸಂಜೆ ವೇಳೆ ಮಡಿಕೇರಿಗೆ ಕರೆತಂದು ಜಿಲ್ಲಾ ಕೇಂದ್ರ ಕಾರಾಗೃಹದಲ್ಲಿರಿಸಲಾಗಿತ್ತು. ಗುರುವಾರ ಬೆಳಗ್ಗೆ ಶಸ್ತ್ರಸಜ್ಜಿತ ಕೊಡಗು ಕಮಾಂಡೋ ಮತ್ತು ಕೇರಳ ಥಂಡರ್ ಬೋಲ್ಟ್ ಕಮಾಂಡೋಗಳ ಬಿಗಿ ಭದ್ರತೆಯಲ್ಲಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು.

ಮಾಜಿ ಸಿಎಂ ಸಿದ್ದರಾಮಯ್ಯರ ಕಾರಿನ ಮೇಲೆ ಮೊಟ್ಟೆ ಎಸೆದ ಪ್ರಕರಣ

ಆರೋಪಿಗಳ ಗಡಿಪಾರು ಪ್ರಸ್ತಾಪ ವಿರೋಧಿಸಿ ಪ್ರತಿಭಟನೆ

ಮಡಿಕೇರಿ, ಫೆ.2– ಹಿಂದೂ ಸಂಘಟನೆಗಳ ಇಬ್ಬರು ಪ್ರಮುಖರನ್ನು ಕೊಡಗಿನಿಂದ ಗಡಿಪಾರು ಮಾಡುವ ಕುರಿತು ಉಪವಿಭಾಗಾಧಿಕಾರಿಗಳ ನ್ಯಾಯಾಲಯದಿಂದ ನೋಟೀಸ್ ನೀಡಿರುವ ಕ್ರಮವನ್ನು ಖಂಡಿಸಿ ಹಿಂದೂ ಸಂಘಟನೆಗಳು ಹಾಗೂ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು ಗಡಿಪಾರಿನ ಪ್ರಸ್ತಾಪವನ್ನು ಕೈಬಿಡಬೇಕೆಂದು ಒತ್ತಾಯಿಸಿದರು.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾರಿನ ಮೇಲೆ ಮೊಟ್ಟೆ ಎಸೆದ ಪ್ರಕರಣಕ್ಕೆ ಸಂಬಂಧಿಸಿದಂತೆ ನಗರಸಭಾ ನಾಮನಿರ್ದೇಶಿತ ಸದಸ್ಯ ಹಾಗೂ ಹಿಂದೂ ಸಂಘಟನೆಯ ಪ್ರಮುಖ ಕವನ್ ಕಾವೇರಪ್ಪ ಮತ್ತು ಅಶಾಂತಿ ಸೃಷ್ಟಿಸುವ ಆರೋಪದಡಿ ಹಿಂದೂ ಜಾಗರಣಾ ವೇದಿಕೆಯ ಹಿಂದೂ ವಾಹಿನಿಯ ಜಿಲ್ಲಾ ಸಂಚಾಲಕ್ ವಿನಯ್ ಕುಮಾರ್ ಅವರುಗಳನ್ನು ಗಡಿಪಾರು ಮಾಡುವ ಕುರಿತು ಪ್ರಸ್ತಾಪಿಸಿರುವುದು ಖಂಡನೀಯವೆಂದು ಅಸಮಾಧಾನ ವ್ಯಕ್ತಪಡಿಸಿದರು.



ಇವರಿಬ್ಬರು ಯಾವುದೇ ಗಂಭೀರ ಆರೋಪಗಳನ್ನು ಎದುರಿಸದಿದ್ದರೂ ಈ ರೀತಿಯ ಕ್ರಮಕ್ಕೆ ಮುಂದಾಗಿರುವುದು ಸರಿಯಲ್ಲ. ದೇಶದ್ರೋಹದ ಚಟುವಟಿಕೆಗಳಲ್ಲಿ ತೊಡಗಿರುವವರ ವಿರುದ್ಧ ಯಾವುದೇ ರೀತಿಯ ಕಠಿಣ ಕ್ರಮಕೈಗೊಳ್ಳದ ಪೊಲೀಸ್ ಇಲಾಖೆ ದೇಶಭಕ್ತ ಸಂಘಟನೆಯಲ್ಲಿರುವವರ ವಿರುದ್ಧ ಗಡಿಪಾರಿನಂತಹ ಕ್ರಮಕ್ಕೆ ಮುಂದಾಗಿ ರುವುದು ವಿಷಾದಕರ ವೆಂದರು.

ಗಡಿಪಾರಿನ ಪ್ರಸ್ತಾಪವನ್ನು ಕೈ ಬಿಡದಿದ್ದಲ್ಲಿ ಜಿಲ್ಲೆಯಾದ್ಯಂತ ಹೋರಾಟವನ್ನು ತೀವ್ರಗೊಳಿಸುವುದಾಗಿ ಎಚ್ಚರಿಕೆ ನೀಡಿದರು.

ಹಿಂದೂ ಜಾಗರಣ ವೇದಿಕೆಯ ಜಿಲ್ಲಾ ಸಂಚಾಲಕ ಕುಕ್ಕೇರ ಅಜಿತ್, ಸಹ ಸಂಚಾಲಕ ಚೇತನ್, ಪ್ರಮುಖರಾದ ಸುನಿಲ್ ಮಾದಾಪುರ, ವಿರಾಜಪೇಟೆ ತಾಲೂಕು ಸಂಚಾಲಕ ಅನಿಲ್, ಯೋಗೇಶ್, ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ದರ್ಶನ್ ಜೋಯಪ್ಪ, ನಗರಸಭಾ ಅಧ್ಯಕ್ಷೆ ಅನಿತಾ ಪೂವಯ್ಯ, ಉಪಾಧ್ಯಕ್ಷರಾದ ಸವಿತಾ ರಾಕೇಶ್, ನಗರಸಭಾ ಬಿಜೆಪಿ ಸದಸ್ಯರುಗಳು ಹಾಗೂ ಹಿಂದೂ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಚಾ.ನಗರದಲ್ಲಿ ಮುಂದುವರಿದ ಮನೆಗಳ್ಳತನ

- ವಾರದ ಅಂತರದಲ್ಲಿ ಮೂರನೇ ಕಳ್ಳತನ
- ಯಾರು ಇಲ್ಲದ ಮನೆಗಳೇ ಖದೀಮರ ಟಾರ್ಗೆಟ್
- ಸಾರ್ವಜನಿಕ ವಲಯದಲ್ಲಿ ಹೆಚ್ಚಿತು ಆಂತಕ

ಚಾಮರಾಜನಗರ, ಫೆ.2– ಯಾರು ಇಲ್ಲದ ಮನೆಗಳನ್ನೇ ಟಾರ್ಗೆಟ್ ಮಾಡಿಕೊಂಡು ಕಳೆದೊಂದು ವಾರದಿಂದ ಜಿಲ್ಲಾ ಕೇಂದ್ರದಲ್ಲಿ ಸರಣಿ ಕಳ್ಳತನ ನಡೆಯುತ್ತಿದ್ದು, ಸಾರ್ವಜನಿಕ ವಲಯದಲ್ಲಿ ಆತಂಕ ಸೃಷ್ಟಿಸಿದೆ.



ನಗರದ ಫಾರೆಸ್ಟ್ ನರ್ಸರಿ ಬಳಿ ಇರುವ ವಿವೇಕನಗರದ ವಕೀಲ ಷಡಕ್ಷರಸ್ವಾಮಿ ಅವರ ಮಹದೇಶ್ವರ ಮಹಲ್ ಮನೆಯಲ್ಲಿ ಕೈಚಳಕ ತೋರಿರುವ ಖದೀಮರು ಚಿನ್ನಾಭರಣ ಕಳವು ಮಾಡಿದ್ದಾರೆ. ಮಂಗಳವಾರ ತಡರಾತ್ರಿ ಘಟನೆ ನಡೆದಿದೆ ಎನ್ನಲಾಗಿದ್ದು, ವಿಚಾರ ತಡವಾಗಿ ಬೆಳಕಿಗೆ ಬಂದಿದೆ. ಮನೆಯ ಮೊದಲ ಮಹಡಿಯಲ್ಲಿನ ಮನೆಯ ಬಾಗಿಲು ಮುರಿದು ಒಳ ನುಗ್ಗಿರುವ ಖದೀಮರು ದೇವರ ಮನೆಯಲ್ಲಿದ್ದ ಐದು ಕೆ.ಜಿ. ಬೆಳ್ಳಿ, ಒಂದು ಜೊತೆ ಓಲೆ ಸೇರಿದಂತೆ ಇತರೆ ವಸ್ತುಗಳನ್ನು ಸೇರಿ ಸುಮಾರು 6–7 ಲಕ್ಷ ರೂ. ಮೌಲ್ಯದ ವಸ್ತುಗಳು ಕಳವು ಮಾಡಿದ್ದಾರೆ.

ವಕೀಲ ಷಡಕ್ಷರಸ್ವಾಮಿ ಅವರು ಮೈಸೂರಿನಲ್ಲಿ ವಾಸವಿದ್ದು, ಆಗಾಗ ಮನೆಗೆ ಬಂದು ಹೋಗುತ್ತಿದ್ದರು. ಮನೆಯ ಬಾಗಿಲು ಬೀಗ ಹಾಕಿರುವುದನ್ನು ಗಮನಿಸಿರುವ ಕಳ್ಳರು ಮನೆಯ ಬಾಗಿಲು ಮುರಿದು ಕಳವು ಮಾಡಿ ಪರಾರಿಯಾಗಿದ್ದಾರೆ. ಬುಧವಾರ ರಾತ್ರಿ ಮನೆಯ ಕಾವಲುಗಾರ ಬಂದು ನೋಡಿದಾಗ ಪ್ರಕರಣ ಬೆಳಕಿಗೆ ಬಂದಿದೆ. ಈ ಸಂಬಂಧಿಸಿದಂತೆ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮನೆಯಲ್ಲಿ ಸಿಸಿ ಕ್ಯಾಮೆರಾ ಅಳವಡಿಸಲಾಗಿದೆ. ಆದರೆ, ಇದಕ್ಕೆ ಸಂಪರ್ಕ ಕಲ್ಪಿಸಿರಲಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಒಂದೇ ತಂಡದ ಕೃತ್ಯದ ಶಂಕೆ: ವಾರದ ಅಂತರದಲ್ಲಿ ಜಿಲ್ಲಾ ಕೇಂದ್ರದ ಸಿದ್ದಾರ್ಥ ನಗರ, ಶ್ರೀಗುರುರಾಘವೇಂದ್ರ ಚಿತ್ರ ಮಂದಿರದ ಸಮೀಪದ ಭಗೀರಥ ಬಡಾವಣೆ, ಫಾರೆಸ್ಟ್ ನರ್ಸರಿ ಬಳಿ ಮನೆಗಳ್ಳತನ ನಡೆದಿದ್ದು, ಬಹುತೇಕ ಒಂದೇ ಬಗೆಯಲ್ಲಿ ಮೂರು ಕಳ್ಳತನ ನಡೆದಿದೆ. ಹೀಗಾಗಿ, ಯಾವುದೋ ಒಂದು ತಂಡದ ಖದೀಮರು ಮನೆಗಳ್ಳತನ ಮಾಡಿದ್ದಾರೆ ಎಂಬ ಶಂಕೆ ಮೂಡಿಸಿದೆ.

ಕಳ್ಳರ ಪತ್ತೆಗಾಗಿ ಮೂರು ತಂಡ ರಚನೆ

ನಗರದಲ್ಲಿ ವಾರದಿಂದ ಮನೆಗಳ್ಳತನ ಹೆಚ್ಚಾಗುತ್ತಿರುವುದರಿಂದ ಕಳ್ಳರ ಪತ್ತೆಗಾಗಿ ಮೂರು ತಂಡಗಳನ್ನು ರಚಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹೋ ತಿಳಿಸಿದರು. ಈ ಸಂಬಂಧ 'ಮೈಸೂರು ಮಿತ್ರ' ನೊಂದಿಗೆ ಮಾತನಾಡಿದ ಅವರು, ಜಿಲ್ಲಾ ಕೇಂದ್ರ ದಲ್ಲಿ ಕಳೆದ ಒಂದು ವಾರದಿಂದ ಈಚೆಗೆ ಮೂರು ಮನೆಗಳಲ್ಲಿ ಕಳ್ಳತನ ನಡೆದಿದೆ. ಈ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಕಳ್ಳರ ಪತ್ತೆಗಾಗಿ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನೇತೃತ್ವದಲ್ಲಿ ಮೂರು ಪೊಲೀಸ್ ತಂಡಗಳನ್ನು ರಚಿಸಲಾಗಿದೆ. ತಂಡದ ಸದಸ್ಯರು ಈಗಾಗಲೇ ಕಾರ್ಯಾಚಾರಣೆ ಆರಂಭಿಸಿದ್ದಾರೆ ಎಂದು ಮಾಹಿತಿ ನೀಡಿದರು.



ಹೆಲ್ಮೆಟ್ ಕಡ್ಡಾಯವಾಗಿ ಧರಿಸಿ: ಜಿಲ್ಲೆಯಲ್ಲಿ ಎರಡು ರಾಷ್ಟ್ರೀಯ ಹೆದ್ದಾರಿಗಳು ಹಾದು ಹೋಗಿದೆ. ಅಪಘಾತಗಳು ಸಂಭವಿಸಿದಾಗ ಹೆಲ್ಮೆಟ್ ಧರಿಸದೆ ವಾಹನ ಸವಾರರು ಸಾವನ್ನಪ್ಪುತ್ತಿರುವುದು ಹೆಚ್ಚುತ್ತಿದೆ. ಇದು ತಪ್ಪಬೇಕಾದರೆ, ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು. ಈ ಬಗ್ಗೆ ವಾಹನ ಸವಾರರಲ್ಲಿ ಜಾಗೃತಿ ಮೂಡಿಸಲಾಗುವುದು ಎಸ್‌ಪಿ ಪದ್ಮಿನಿ ಸಾಹೋ ತಿಳಿಸಿದರು.


ಚಾಮರಾಜನಗರ ಜಿಲ್ಲೆ ಬಗ್ಗೆ ನನಗೆ ಇಲ್ಲಿಗೆ ಬರುವ ಮೊದಲು ಸಕಾರಾತ್ಮಕ ಅಭಿಪ್ರಾಯಗಳು ಬಂದಿದೆ. ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವುದಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದ ಅವರು, ಜಿಲ್ಲಾ ಎಸ್‌ಪಿಯಾಗಿ ನನಗೆ ಇದು ಮೊದಲ ಸ್ವಾತಂತ್ರ ಜಿಲ್ಲೆಯಾಗಿದೆ. ಹೀಗಾಗಿ, ಜಿಲ್ಲೆಯಾದ್ಯಂತ ಪ್ರವಾಸ ಕೈಗೊಂಡು ಬಳಿಕ ಜಿಲ್ಲೆಯ ಪರಿಸ್ಥಿತಿ ನನಗೆ ತಿಳಿಯಲಿದೆ ಎಂದರು.

ಬಿಆರ್‌ಟಿಯಲ್ಲಿ ಹೊಸ ಪ್ರಭೇದ ಕೀಟ ಪತ್ತೆ

ಕಣಜಕ್ಕೆ 'ಸೋಲಿಗ', ಕೀಟ ಪ್ರಭೇದಕ್ಕೆ 'ಎಕಾರಿನಾಟ' ಎಂದು ನಾಮಕರಣ

ಚಾಮರಾಜನಗರ, ಫೆ.2– ಜಿಲ್ಲೆಯ ಬಿಆರ್‌ಟಿಯಲ್ಲಿ ಕಣಜ ಕುಲಕ್ಕೆ ಸೇರಿದ ಬಹುವರ್ಣಿಯ ಹೊಸ ಕೀಟ ಪತ್ತೆಯಾಗಿದ್ದು, ಈ ಹೊಸ ಕಣಜ ಕುಲಕ್ಕೆ 'ಸೋಲಿಗ' ಮತ್ತು ಕೀಟ ಪ್ರಭೇದಕ್ಕೆ 'ಎಕಾರಿನಾಟ' ಎಂದು ಹೆಸರಿಡಲಾಗಿದೆ.

ಅಶೋಕ ಟ್ರಸ್ಟ್ ಫಾರ್ ರಿಸರ್ಚ್ ಇನ್ ಎಕಾಲಜಿ ಅಂಡ್ ಎನ್ವಿರಾನ್‌ಮೆಂಟ್‌ನ ಕೀಟ ಶಾಸ್ತ್ರಜ್ಞರ ತಂಡವು ಈ ಪ್ರಭೇದವನ್ನು ಪತ್ತೆ ಹಚ್ಚಿದೆ. ಏಟ್ರೀ ಸಂಶೋಧಕರಾದ ಡಾ.ಎ.ಪಿ. ರಂಜಿತ್ ಮತ್ತು ಡಾ. ಪ್ರಿಯದರ್ಶನ್ ಧರ್ಮ ರಾಜನ್ ಈ ಪರಾವಲಂಬಿ ಕೀಟವನ್ನು ಪತ್ತೆ ಮಾಡಿ ಅದಕ್ಕೆ ಹೊಸ ಹೆಸರು ಇಟ್ಟಿದ್ದಾರೆ. ಪಶ್ಚಿಮ ಘಟ್ಟದಲ್ಲಿ ಕೀಟಗಳ ಪತ್ತೆ ಯೋಜನೆಯ ಭಾಗವಾಗಿ 15 ವರ್ಷದ ಹಿಂದೆಯೇ ಈ ಹೊಸ ಕೀಟದ ಮಾದರಿಯನ್ನು ಸಂಶೋಧಕರು ಸಂಗ್ರಹಿಸಿದ್ದರು. ನಾಗಾಲ್ಯಾಂಡ್‌ನಿಂದಲೂ ಇದೇ ಜಾತಿಗೆ ಸೇರಿದ ಕೀಟಗಳ ಮಾದರಿಗಳನ್ನು ಸಂಗ್ರಹಿಸಲಾಗಿತ್ತು.



'ಸೋಲಿಗ ಎಕಾರಿನಾಟ'ವು ಡಾರ್ವಿನ್ ಪರಾವಲಂಬಿ ಕಣಜಗಳ ಉಪ ಕುಟುಂಬವಾದ ಮೆಟೊಪಿನೆಯ (Metopiinae) ಇಚ್‌ನ್ಯೂಮೊನಿಡೆಯ (Ichneumonidae) ಕುಟುಂಬಕ್ಕೆ ಸೇರಿದೆ. ಮೆಟೊಪಿನೆಯಲ್ಲಿ 27 ಕಣಜ ಕುಲಗಳಿದ್ದು, 862 ಪ್ರಭೇದಗಳಿವೆ.

ಭಾರತದಲ್ಲಿ ಎರಡು ಕುಲಗಳು (ಜೀನಸ್) ಮಾತ್ರ ಕಂಡು ಬಂದಿದ್ದು, ದಕ್ಷಿಣ ಭಾರತದಲ್ಲಿ ಪತ್ತೆಯಾದ ಮೊದಲ ಕಣಜ ಕುಲ ಇದಾಗಿದೆ ಎಂದು ಸಂಶೋಧಕರಾದ ರಂಜಿತ್, ಪ್ರಿಯದರ್ಶನ್ ಧರ್ಮ ರಾಜನ್ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಇವರ ಸಂಶೋಧನಾ ವರದಿಯು ಯುರೋಪಿಯನ್ ಜರ್ನಲ್ ಆಫ್ ಟ್ಯಾಕ್ಸಾನಮಿಯಲ್ಲಿ ಪ್ರಕಟವಾಗಿದೆ.

ಫೆ.25ರಂದು ಗ್ರಾಪಂ ಉಪ ಚುನಾವಣೆ

ಚಾಮರಾಜನಗರ, ಫೆ.2– ಜಿಲ್ಲೆಯ ವಿವಿಧ ಗ್ರಾಮ ಪಂಚಾಯಿತಿಗಳಲ್ಲಿ ವಿವಿಧ ಕಾರಣಗಳಿಂದ ತೆರವಾಗಿರುವ 5 ಸದಸ್ಯ ಸ್ಥಾನಗಳಿಗೆ ಉಪ ಚುನಾವಣೆ ನಡೆಸುವ ಸಂಬಂಧ ಚುನಾವಣಾ ಆಯೋಗವು ವೇಳಾಪಟ್ಟಿ ಪ್ರಕಟಿಸಿದೆ.

ಚಾಮರಾಜನಗರ ತಾಲೂಕಿನ ಶಿವಪುರ, ಜ್ಯೋತಿಗೌಡನಪುರ ಗ್ರಾಮ ಪಂಚಾಯಿತಿ, ಗುಂಡ್ಲುಪೇಟೆ ತಾಲೂಕಿನ ತೆರಕಣಾಂಬಿ ಗ್ರಾಮ ಪಂಚಾಯಿತಿ, ಕೊಳ್ಳೇಗಾಲ ತಾಲೂಕಿನ ಸತ್ತೇಗಾಲ ಹಾಗೂ ಹನೂರು ತಾಲೂಕಿನ ಬಂಡಳ್ಳಿ ಗ್ರಾಮ ಪಂಚಾಯಿತಿಯ ತಲಾ ಒಂದೊಂದು ಸ್ಥಾನ ಸೇರಿದಂತೆ ಒಟ್ಟು 5 ಸ್ಥಾನಗಳಿಗೆ ಚುನಾವಣೆ ನಡೆಯಲಿದೆ.

ಫೆ.8ರಂದು ಜಿಲ್ಲಾಧಿಕಾರಿಗಳು ಅಧಿಸೂಚನೆ ಹೊರಡಿಸುವರು. ನಾಮಪತ್ರ ಸಲ್ಲಿಸಲು ಫೆ.14 ಕೊನೆಯ ದಿನವಾಗಿದೆ. ಫೆ.15ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಉಮೇದುವಾರಿಕೆ ಹಿಂತೆಗೆದುಕೊಳ್ಳಲು ಫೆ.17 ಕೊನೆಯ ದಿನವಾಗಿದೆ. ಮತದಾನ ಅವಶ್ಯವಿದ್ದರೆ ಫೆ.25 ರಂದು ಬೆಳಗ್ಗೆ 7 ರಿಂದ ಸಂಜೆ 5 ಗಂಟೆಯವರೆಗೆ ನಡೆಸಲಾಗುವುದು. ಮರು ಮತದಾನ ಅವಶ್ಯವಿದ್ದರೆ ಫೆ.27 ರಂದು ಬೆಳಗ್ಗೆ 7 ರಿಂದ ಸಂಜೆ 5 ಗಂಟೆಯವರೆಗೆ ನಡೆಸಲಾಗುವುದು. ಮತಗಳ ಎಣಿಕೆ ಕಾರ್ಯವು ಆಯಾ ತಾಲೂಕು ಕೇಂದ್ರಗಳಲ್ಲಿ ಫೆ.28ರಂದು ಬೆಳಗ್ಗೆ 8 ಗಂಟೆಗೆ ಆರಂಭವಾಗಲಿದೆ. ಫೆ.28ರಂದು ಚುನಾವಣಾ ಪ್ರಕ್ರಿಯೆ ಮುಕ್ತಾಯಗೊಳ್ಳಲಿದೆ. ಚುನಾವಣೆ ನೀತಿ ಸಂಹಿತೆಯು ಚುನಾವಣೆ ನಡೆಯುವ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಫೆ. 8ರಿಂದ 28ರವರೆಗೆ ಜಾರಿಯಲ್ಲಿರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಜಿಪಂ ಲೆಕ್ಕಾಧಿಕಾರಿ ಗಂಗಾಧರ್ ನಿಧನ

ಚಾಮರಾಜನಗರ, ಫೆ.2– ನಗರದ ಜಿಲ್ಲಾ ಪಂಚಾಯತ್ ಕಾರ್ಯಾಲಯದಲ್ಲಿ ಲೆಕ್ಕಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಎಚ್.ಎಸ್. ಗಂಗಾಧರ್(59) ತೀವ್ರ ಹೃದಯಾಘಾತದಿಂದ ಗುರುವಾರ ಮಧ್ಯಾಹ್ನ ನಿಧನರಾದರು. ಮೃತರು ರಾಮಸಮುದ್ರದ ಹೌಸಿಂಗ್ ಬೋರ್ಡ್ ಕಾಲೋನಿ ಯಲ್ಲಿ ವಾಸವಿದ್ದರು. ಇವರು ಹಿರಿಯ ಪತ್ರಕರ್ತರಾಗಿದ್ದ ದಿವಂಗತ ಎಚ್.ವಿ. ಸತ್ಯನಾರಾಯಣ್ ಅವರ ಹಿರಿಯ ಪುತ್ರರು. ಮೃತರು ಪತ್ನಿ, ಓರ್ವ ಪುತ್ರಿ, ಸಹೋದರ ಪತ್ರಕರ್ತ ಎಚ್.ಎಸ್. ಚಂದ್ರಶೇಖರ್ ಅವರನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯೂ ನಾಳೆ(ಶುಕ್ರವಾರ) ಬೆಳಗ್ಗೆ ನಗರದ ನಂಜನಗೂಡು ರಸ್ತೆಯಲ್ಲಿರುವ ದೇವಾಂಗ ಸಮುದಾಯದ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.



ನೌಕರರನ್ನು ಖಾಯಂ ಮಾಡಿ, 25 ಸಾವಿರ ಸಂಬಳ ಕೊಡಿ

ರಾಜ್ಯ ಗ್ರಾಪಂ ನೌಕರರ ಸಂಘದ ಜಿಲ್ಲಾಧ್ಯಕ್ಷ ಆಗ್ರಹ

ಚಾಮರಾಜನಗರ, ಫೆ. 2– ಗ್ರಾಮ ಪಂಚಾಯಿತಿ ನೌಕರರನ್ನು ಸರ್ಕಾರಿ ನೌಕರರನ್ನಾಗಿ ಘೋಷಿಸಿ, ಕನಿಷ್ಠ 25ಸಾವಿರ ರೂ. ವೇತನ ನೀಡಬೇಕು ಎಂದು ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಸಿದ್ದರಾಜು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ನಗರದ ಕಾರ್ಯನಿರತ ಪತ್ರಕರ್ತರ ಸಂಘದ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕರ ವಸೂಲಿಗಾರ, ಕ್ಲರ್ಕ್, ಡಾಟಾ ಎಂಟ್ರಿ ಆಪರೇಟರ್‌ಗಳು, ನೀರಗಂಟಿಗಳು, ಜವಾನ, ಸ್ವಚ್ಛತಾಗಾರರನ್ನು ಏಕಕಾಲಕ್ಕೆ ಸರ್ಕಾರಿ ನೌಕರರನ್ನಾಗಿ ಘೋಷಿಸಬೇಕು. ದಿನನಿತ್ಯ ಬಳಸುವ ವಸ್ತುಗಳ ಬೆಲೆ ಏರಿಕೆಗೆ ಅನುಗುಣವಾಗಿ ಕನಿಷ್ಠ ವೇತನ 25 ಸಾವಿರ ನಿಗದಿಪಡಿಸಬೇಕು ಎಂದು ಆಗ್ರಹಿಸಿದರು.

ಗ್ರಾಮ ಪಂಚಾಯಿತಿಗಳಲ್ಲಿ ಕೆಲಸ ನಿರ್ವಹಿಸುವ ನೌಕರರಿಗೆ ನಿವೃತ್ತಿ ಅಥವಾ ಮರಣ ಹೊಂದಿದ್ದರೆ ಅವರಿಗೆ ಪ್ರತಿ ತಿಂಗಳು ಕನಿಷ್ಠ 6 ಸಾವಿರ ರೂ. ಪಿಂಚಣಿ ವ್ಯವಸ್ಥೆ ಜಾರಿಗೊಳಿಸಬೇಕು. 2017 ಅಕ್ಟೋಬರ್ 31ಕ್ಕಿಂತ ಮುಂಚಿತವಾಗಿ ನೇಮಕಗೊಂಡು ಜಿಲ್ಲಾ ಪಂಚಾಯತ್ ಅನುಮೋದನೆ ಇಲ್ಲದೆ ಮರಣ ಹೊಂದಿದ ಕುಟುಂಬಕ್ಕೆ ಅನುಕಂಪದ ನೌಕರಿ ನೀಡಬೇಕು. ನೌಕರರಿಗೆ ಬಯೋಮೆಟ್ರಿಕ್ ಸಹಿಗೆ ಕಡ್ಡಾಯಗೊಳಿಸಿರುವುದನ್ನು ಕೈಬಿಡಬೇಕು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಸುರೇಶ್, ಖಜಾಂಚಿ ದೊರೆಸ್ವಾಮಿ, ತಾಲೂಕು ಅಧ್ಯಕ್ಷ ಕೃಷ್ಣ, ಕೊಳ್ಳೇಗಾಲ ತಾಲೂಕು ಪ್ರಧಾನ ಕಾರ್ಯದರ್ಶಿ ಮಹದೇವಸ್ವಾಮಿ ಹಾಜರಿದ್ದರು.

ಡಾ.ಬಾಬು ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಡಾ.ಎ.ಆರ್.ಬಾಬುಗೆ ಸನ್ಮಾನ



ಚಾಮರಾಜನಗರ, ಫೆ. 2– ವೈದ್ಯಕೀಯ ಕ್ಷೇತ್ರ ಹಾಗೂ ಸಮಾಜಮುಖಿ ಸೇವೆ ಸಲ್ಲಿಸುತ್ತಿರುವ ಡಾ.ಬಾಬು ಸೋಷಿಯಲ್ ವೆಲ್‌ಫೇರ್ ಮತ್ತು ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಡಾ. ಎ.ಆರ್ ಬಾಬು ಅವರನ್ನು ಚೇತನ ಕಲಾವಾಹಿನಿ ಸಂಸ್ಥೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಸನ್ಮಾನಿಸಲಾಯಿತು.

ನಗರದ ಜಿಲ್ಲಾ ಡಾ.ರಾಜ್‌ಕುಮಾರ್ ರಂಗಮಂದಿರದಲ್ಲಿ ಚೇತನ ಕಲಾವಾಹಿನಿ ಸಂಸ್ಥೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಇತ್ತೀಚಿಗೆ ನಡೆದ ದಕ್ಷಯಜ್ಞ ನಾಟಕ ಪ್ರದರ್ಶನ ಹಾಗೂ ರಂಗ ಸಂಭ್ರಮ ಕಾರ್ಯಕ್ರಮದಲ್ಲಿ ಕಳೆದ 23 ವರ್ಷಗಳಿಂದ ಚಾಮರಾಜನಗರ ಜಿಲ್ಲೆಯಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುವುದರ ಜೊತೆಗೆ ಚಾಮರಾಜನಗರ ಜಿಲ್ಲೆಯಲ್ಲಿ ತಮ್ಮ ಹೆಸರಿನಲ್ಲಿ ಟ್ರಸ್ಟ್ ಸ್ಥಾಪಿಸಿ ಮಾಡುತ್ತಿರುವ ಸಮಾಜಮುಖಿ ಸೇವೆ, ವೈದ್ಯಕೀಯ ಸೇವೆ ಗುರುತಿಸಿ ಡಾ.ಬಾಬು ಅವರನ್ನು ಸನ್ಮಾನಿಸಲಾಯಿತು.

ನಗರದ ಶ್ರೀ ಸಿದ್ದಮಲ್ಲೇಶ್ವರ ವಿರಕ್ತ ಮಠಾಧ್ಯಕ್ಷರಾದ ಶ್ರೀಚನ್ನಬಸವಸ್ವಾಮೀಜಿಗಳು, ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಸಿ.ಮಂಜುನಾಥ್ ಪ್ರಸನ್ನ, ಚೇತನ ಕಲಾವಾಹಿನಿ ಅಧ್ಯಕ್ಷ ರಾಜಪ್ಪ, ಬಸವರಾಜು, ಪುರುಷೋತ್ತಮ ಹಾಗೂ ಕಲಾವಿದರು ಹಾಜರಿದ್ದರು.



ಗುಂಡ್ಲುಪೇಟೆ ತಾಲೂಕಿನ ಚಿಕ್ಕತುಪ್ಪೂರು ಗ್ರಾಮದಲ್ಲಿ 20 ಲಕ್ಷ ರೂ. ವೆಚ್ಚದಲ್ಲಿ ಬಸವಭವನ ನಿರ್ಮಾಣ ಕಾಮಗಾರಿಗೆ ಶಾಸಕ ಸಿ.ಎಸ್.ನಿರಂಜನಕುಮಾರ್ ಭೂಮಿಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಚಿಕ್ಕತುಪ್ಪೂರು ಶಿವಪೂಜಾ ಮಠದ ಚನ್ನವೀರಸ್ವಾಮೀಜಿ, ಬಗರ್ ಹುಕುಂ ಸಮಿತಿಯ ಉಪಾಧ್ಯಕ್ಷ ನಿಟ್ರೆ ನಾಗರಾಜಪ್ಪ, ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಸಿ.ಮಹದೇವಪ್ರಸಾದ್, ಮುಖಂಡರಾದ ತೋಟದಸ್ವಾಮಿ, ಎಂ.ಸಿ.ನಾಗರಾಜು, ಎಸ್.ಸಿ.ಮಂಜುನಾಥ್, ಗೌರೀಶಂಕರ ಹಾಗೂ ಇತರರು ಇದ್ದರು.

ಅಧಿಕಾರಿ ಭೇಟಿಗೆ ಸಮಯ ಕೋರಿ ಪತ್ರ ಬರೆದ ರೈತ

ಚಾಮರಾಜನಗರ, ಫೆ.2– ಭೇಟಿಗೆ ಸಮಯ ಕೊಡಿ ಎಂದು ಬಂಡೀಪುರ ಹುಲಿ ಯೋಜನೆ ನಿರ್ದೇಶಕರಿಗೆ ರೈತರೊಬ್ಬರು ಪತ್ರ ಬರೆದು ಮನವಿ ಮಾಡಿದ್ದಾರೆ.

ಗುಂಡ್ಲುಪೇಟೆ ತಾಲೂಕಿನ ಚೌಡಹಳ್ಳಿ ಗ್ರಾಮದ ರೈತ ಸದಾಶಿವಮೂರ್ತಿ ಬಂಡೀಪುರ ಹುಲಿ ಯೋಜನೆ ನಿರ್ದೇಶಕ ರಮೇಶ್ ಕುಮಾರ್ ಭೇಟಿಗೆ ಹಲವು ಬಾರಿ ಸುತ್ತಾಡಿ ಬೇಸತ್ತಿದ್ದಾರೆ. ಕಡೆಗೆ ಅಧಿಕಾರಿ ಸಿಗದಿದ್ದಕ್ಕೆ ಸಮಯ ಕೊಡುವಂತೆ ಪತ್ರ ಬರೆದು ಮನವಿ ಸಲ್ಲಿದ್ದಾರೆ.

ಕಳೆದ ಒಂದು ತಿಂಗಳ ಹಿಂದೆ ಚಿರತೆ ದಾಳಿಗೆ ಜಮೀನಿನಲ್ಲಿ ಸಾಕು ನಾಯಿ ಬಲಿಯಾಗಿತ್ತು. ಈ ವೇಳೆ ಅಧಿಕಾರಿಗಳಿಗೆ ಕರೆ ಮಾಡಿದರೆ ಸ್ಪಂದಿಸಿರಲಿಲ್ಲ. ಇದರಿಂದ ಖುದ್ದು ಹುಲಿ ಯೋಜನೆ ನಿರ್ದೇಶಕರಿಗೆ ಭೇಟಿಗಾಗಿ ಕಚೇರಿಗೆ ಹಲವು ಬಾರಿ ತೆರಳಿದ್ದಾರೆ. ಆದರೆ ಅವರು ಭೇಟಿಗೆ ಸಿಗದಿದ್ದಕ್ಕೆ ಇದೀಗ ಅಧಿಕಾರಿಗೆ ಪತ್ರ ಬರೆದು ಭೇಟಿಗೆ ಸಮಯ ಕೊಡುವಂತೆ ಮನವಿ ಸಲ್ಲಿಸಿದ್ದಾರೆ.

ಒಂದನೇ ಪುಟದಿಂದ

ಕಾಂಗ್ರೆಸ್ ವ್ಯರ್ಥ ಕಸರತ್ತು

ಇಲ್ಲದಿದ್ದರೆ ಅನ್ಯ ಪಕ್ಷದವರನ್ನು ಕರೆತಂದು ಕಣಕ್ಕಿಳಿಸಬಹುದೇ ಎಂದು ಪ್ರಶ್ನಿಸಿದ್ದಾರೆ. ನೀವು ಮಾಡಿದ ಶಿಫಾರಸ್ಸಿನ ಅಭ್ಯರ್ಥಿಗೆ ಟಿಕೆಟ್ ನೀಡಿದರೆ ಉಳಿದ ಆಕಾಂಕ್ಷಿಗಳನ್ನು ಮಣಿಸಲು ಏನು ಮಾಡಿದ್ದೀರಿ? ಎಂಬ ಬಗ್ಗೆ ನಾಯಕರು ಕ್ಷೇತ್ರವಾರು ಮಾಹಿತಿ ಪಡೆದರು. ನಂತರ ರಾಜ್ಯ ಉಸ್ತುವಾರಿ ಸುರ್ಜೆವಾಲ, ವರಿಷ್ಠರು, ರಾಜ್ಯ ಘಟಕ, ಮತ್ತು ಸ್ಥಳೀಯ ಹಿರಿಯ ನಾಯಕರು ಪ್ರತ್ಯೇಕವಾಗಿ ಚುನಾವಣಾ ಪೂರ್ವ ಸಮೀಕ್ಷೆ ನಡೆಸಿದ್ದಾರೆ. ನೀವು ಮಾಡಿರುವ ಶಿಫಾರಸ್ಸು ಹಾಗೂ ಪೂರ್ವ ಸಮೀಕ್ಷೆಯನ್ನು ಮುಂದಿಟ್ಟುಕೊಂಡು ರಾಜ್ಯ ಚುನಾವಣಾ ಸಮಿತಿ ಒಂದು ಕ್ಷೇತ್ರಕ್ಕೆ ಒಬ್ಬರು ಅಥವಾ ಇಬ್ಬರ ಹೆಸರನ್ನು ಅಂತಿಮಗೊಳಿಸಿ ವರಿಷ್ಠರಿಗೆ ಶಿಫಾರಸ್ಸು ಮಾಡುವುದಾಗಿ ಸಭೆಗೆ ತಿಳಿಸಿದ್ದಾರೆ. ಆಡಳಿತರೂಢ ಬಿಜೆಪಿ ಇದುವರೆವಿಗೂ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಿಲ್ಲ. ಆ ಬಗ್ಗೆ ಪ್ರಸ್ತಾಪ ಎತ್ತುತ್ತಿಲ್ಲ. ಜೆಡಿಎಸ್ 93 ಕ್ಷೇತ್ರಗಳಿಗೆ ಅಭ್ಯರ್ಥಿ ಘೋಷಣೆ ಮಾಡಿದೆ. ಅದರಲ್ಲಿ ಸಕ್ರಿಯವಾಗಿರದ ಕೆಲವು ಅಭ್ಯರ್ಥಿಗಳ ಬದಲಾವಣೆಯಾಗಲಿದೆ ಎಂಬ ಮಾಹಿತಿ ಇದೆ. ಬಿಜೆಪಿಯ ಮೊದಲ ಪಟ್ಟಿ ಬಿಡುಗಡೆ ನಂತರ ಸೂಕ್ತ ಸಮಯ ನೋಡಿಕೊಂಡು ನಾವು ಗೊಂದಲವಿಲ್ಲದ ಕ್ಷೇತ್ರಗಳ ಅಭ್ಯರ್ಥಿಗಳನ್ನು ಪ್ರಕಟಿಸುವುದಾಗಿ ತಿಳಿಸಿದರು. ಸಭೆಯ ಮಧ್ಯೆ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಪಕ್ಷದ ಅಭ್ಯರ್ಥಿಗಳ ಆಯ್ಕೆಯನ್ನು ಆದಷ್ಟು ಬೇಗ ಪ್ರಕಟಿಸಲಾಗುವುದು. ಹಾಲಿ ಪಕ್ಷದ ಶಾಸಕರಿಗೆಲ್ಲ ಮತ್ತೆ ಟಿಕೆಟ್ ಸಿಗಲಿದೆ ಎಂಬ ಸುಳಿವು ನೀಡಿದರು.

ಕ್ಷೇತ್ರಗಳ ಅಭ್ಯರ್ಥಿ ಆಯ್ಕೆ ನಮಗೆ ಬಿಡಿ

ಮುಖಂಡರು ಮಂಡನೆ ಮಾಡಿರುವ ವಿಚಾರ ಬಿಸಿ ತುಪ್ಪವಾಗಿ ಪರಿಣಮಿಸಿದೆ. ತಮ್ಮ ತಮ್ಮ ಬೆಂಬಲಿಗರಿಗೆ ಟಿಕೆಟ್ ಕೊಡಿಸುವ ಭರವಸೆ ನೀಡಿ, ಸಾಮರ್ಥ್ಯ ಹೆಚ್ಚಿಸಿಕೊಳ್ಳುವ ಯೋಜನೆ ರೂಪಿಸಿದ್ದ ಈ ನಾಯಕರ ಆಸೆಗೆ ತಣ್ಣೀರು ಎರಚಿದಂತಾಗಿದೆ.

ಅಭ್ಯರ್ಥಿಗಳ ಆಯ್ಕೆಯ ಹಕ್ಕು ಪ್ರತಿಪಾದನೆ ಮಾಡುವ ಮೂಲಕ ಮುಖ್ಯಮಂತ್ರಿ ಸ್ಪರ್ಧೆಯಲ್ಲಿ ನಾವು ಇದ್ದೇವೆ ಎಂಬ ಸಂದೇಶವನ್ನು ಪರೋಕ್ಷವಾಗಿ ರವಾನಿಸಿದ್ದಾರೆ.

ಎಸ್ಸಿ, ಎಸ್ಟಿ ಮೀಸಲು ಕ್ಷೇತ್ರದಲ್ಲಿ ಯಾರನ್ನು ಸ್ಪರ್ಧೆಗಿಳಿಸಿದರೆ ಗೆಲುವು ನಿಶ್ಚಿತ ಎಂಬುದು ನಮಗೆ ಚೆನ್ನಾಗಿ ಗೊತ್ತಿದೆ. ನಮ್ಮ ಸಮುದಾಯದ ನಾಡಿ ಮಿಡಿತ ನಿಮಗಿಂತ ನಮಗೆ ಚೆನ್ನಾಗಿ ಗೊತ್ತಿರುವ ಹಿನ್ನೆಲೆಯಲ್ಲಿ ನಾವೇ ಸಮರ್ಥ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುತ್ತೇವೆ ಎಂಬ ಹೊಸ ಹಕ್ಕು ಪ್ರತಿಪಾದಿಸಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮಾಜಿ ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್, ಕೇಂದ್ರ ಮಾಜಿ ಸಚಿವ ಕೆ.ಎಚ್.ಮುನಿಯಪ್ಪ, ಮಾಜಿ ಸಚಿವ ಡಾ.ಹೆಚ್.ಸಿ.ಮಹಾದೇವಪ್ಪ ಅವರಂತಹ ಪ್ರಮುಖ ನಾಯಕರು, ಮುಖಂಡರು ಇದ್ದು, ಎಲ್ಲಾ ರೀತಿಯಲ್ಲೂ ಅಳೆದು ತೂಗಿ ನೋಡಿ ಯೋಗ್ಯ ಅಭ್ಯರ್ಥಿಗಳನ್ನು ಅಂತಿಮಗೊಳಿಸುತ್ತೇವೆ ಎಂಬ ವಾದ ಮುಂದಿಟ್ಟಿದ್ದಾರೆ. ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಲ್ಲಿ 48 ಕ್ಷೇತ್ರಗಳು ಮೀಸಲು ಕ್ಷೇತ್ರಗಳಾಗಿವೆ. ಇವುಗಳಲ್ಲಿ 33 ಎಸ್ಸಿ, 15 ಎಸ್ಟಿ ಕ್ಷೇತ್ರಗಳಾಗಿವೆ. ಮೀಸಲು ಕ್ಷೇತ್ರದಲ್ಲಿ ಎಲ್ಲರಿಗೂ ಅವಕಾಶ ಸಿಗುತ್ತಿಲ್ಲ. ಕೆಲವೊಂದು ಪಂಗಡಕ್ಕೆ ಹೆಚ್ಚು ಸಿಗುತ್ತಿದೆ. ಅವಕಾಶ ವಂಚಿತ ಪಂಗಡಗಳು ಇವೆ. ಈ ತಾರತಮ್ಯ ಸರಿಪಡಿಸಬೇಕು. ನಮ್ಮ ಸಮುದಾಯಗಳ ಒಳ ಪಂಗಡದ ರೀತಿ, ನೀತಿಗಳ ಅರಿವು ಬಲ್ಲವರಾಗಿದ್ದೇವೆ. ಯಾವ ಕ್ಷೇತ್ರದಲ್ಲಿ ಯಾರು ಹೆಚ್ಚಿದ್ದಾರೆ. ಯಾರು ಕಡಿಮೆ ಇದ್ದಾರೆ. ಯಾವ ಪಂಗಡಕ್ಕೆ ಅವಕಾಶ ನೀಡಿದರೆ ಅನುಕೂಲ ಎಂಬ ಸಮಗ್ರ ಮಾಹಿತಿ ನಮ್ಮ ಬಳಿ ಇದೆ ಎಂದಿದ್ದಾರೆ.

ಲೋಕಾಯುಕ್ತದಲ್ಲಿ 10 ದೂರು ದಾಖಲು

ವರ್ತೂರು ನರಸೀಪುರ ಗ್ರಾಮದ ಸರ್ವೆ ನಂಬರ್ 1 ರಿಂದ 35.ಪೆದ್ದನಪಾಳ್ಯ ಗ್ರಾಮದ ಸರ್ವೆ ನಂಬರ್ 17, 18, 19, 20ರಲ್ಲಿರುವ ಸುಮಾರು 9,600 ಕೋಟಿ ರೂಪಾಯಿಗಳಿಗೂ ಹೆಚ್ಚು ಬೆಲೆಬಾಳುವ 1,100 ಎಕರೆ ಸರ್ಕಾರಿ ಸ್ವತ್ತುಗಳನ್ನು ಕಬಳಿಸಿರುವ ಬೆಂಗಳೂರಿನ ಬೃಹತ್ ಭೂ ಕಬಳಿಕೆ ಹಗರಣದಲ್ಲಿ ಭಾಗಿಯಾಗಿದ್ದಾರೆ ಎಂದು ಆರೋಪಿಸಿದರು.

ಬಿಬಿಎಂಪಿ ವ್ಯಾಪ್ತಿಯ 189 ಇಂದಿರಾ ಕ್ಯಾಂಟೀನ್‌ಗಳ ಗ್ರಾಹಕರ ಹೆಸರಿನಲ್ಲಿ ಪ್ರತೀ ತಿಂಗಳು 11,52,74,273 ರೂಪಾಯಿಗಳಂತೆ 560 ಕೋಟಿ ರೂಪಾಯಿ ಹಣ ಕಬಳಿಸಿರುವ ಹಗರಣದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ಧರಾಮಯ್ಯ, ಮಾಜಿ ಸಚಿವ ಕೆ.ಜೆ.ಜಾರ್ಜ್, ಪಾಲಿಕೆಯ ಹಣಕಾಸು ವಿಭಾಗದ ಹಿಂದಿನ ಜಂಟಿ ಆಯುಕ್ತ ಮನೋಜ್ ರಾಜನ್, ರಿವಾರ್ಡ್ ಸಂಸ್ಥೆಗಳು ಭಾಗಿಯಾಗಿವೆ. ಬಿಬಿಎಂಪಿ ವ್ಯಾಪ್ತಿಯ 439 ಬಸ್ ತಂಗುದಾಣಗಳಲ್ಲಿ ಕಾನೂನು ಬಾಹಿರವಾಗಿ ಮತ್ತು ಪಾಲಿಕೆಗೆ ನಿಯಮಾನುಸಾರ ಪಾವತಿಸಬೇಕಾಗಿದ್ದ 68.15 ಕೋಟಿ ರೂಪಾಯಿಗಳಷ್ಟು ಜಾಹೀರಾತು ಶುಲ್ಕವನ್ನು ಪಾವತಿಸದೇ ತಮ್ಮ ಸರ್ಕಾರದ ಸಾಧನೆಗಳ ಪ್ರಚಾರ ಕಾರ್ಯಗಳಿಗೆ ಬಳಸಿಕೊಂಡಿದ್ದ 68.15 ಕೋಟಿ ಜಾಹಿರಾತು ಶುಲ್ಕ ವಂಚನೆ ಹಗರಣದಲ್ಲೂ ಇವರ ಬಹುಮುಖ್ಯ ಪಾತ್ರ ಇದೆ ಎಂದು ಆಪಾದಿಸಿದರು. ಕೃಷಿ ಹೊಂಡಗಳನ್ನು ನಿರ್ಮಿಸಿ ರೈತರಿಗೆ ಸಹಾಯ ಮಾಡುವ "ಕೃಷಿ ಭಾಗ್ಯ" ಯೋಜನೆಯ ಹೆಸರಿನಲ್ಲಿ ನಡೆದಿರುವ 800 ಕೋಟಿ ರೂಪಾಯಿಗಳ ಹಗರಣದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಕೃಷಿ ಸಚಿವ ಕೃಷ್ಣ ಭೈರೇಗೌಡ, ಕೃಷಿ ಇಲಾಖೆಯ ಅಂದಿನ ಹಲವು ಅಧಿಕಾರಿಗಳು ಇದ್ದಾರೆ ಎಂದು ತಿಳಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಎಲ್ ಇಡಿ ಬೀದಿ ದೀಪಗಳ ಅಳವಡಿಕೆ ಯೋಜನೆಯ ಹೆಸರಿನಲ್ಲಿ ನಡೆದಿರುವ1,600 ಕೋಟಿ ರೂಪಾಯಿಗಳ ಹಗರಣದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ಧರಾಮಯ್ಯ, ಮಾಜಿ ಸಚಿವ ಕೆ.ಜೆ.ಜಾರ್ಜ್ ಕೈವಾಡ ಇದೆ. ಹೀಗೆ ಕೆಎಸ್, ಎಪಿಎಸ್ ಮೂಲಕ ನಡೆದಿರುವ ನೂರಾರು ಕೋಟಿ ಮೊತ್ತದ ಹಣ ದುರ್ಬಳಕೆ ಹಗರಣ ಮಾಜಿ ಆರೋಗ್ಯ ಸಚಿವ ಯು.ಟಿ.ಖಾದರ್, ಬಡ ರೋಗಿಗಳಿಗೆ ಉಚಿತವಾಗಿ ಚಿಕಿತ್ಸೆ ನೀಡುವ ಹೆಸರಿನಲ್ಲಿ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಹಗರಣ ಸೇರಿದಂತೆ ಒಟ್ಟು ನಾಲ್ಕು ರೀತಿಯ ವಿವಿಧ ಯೋಜನೆಗಳ ಹೆಸರಿನಲ್ಲಿ ನೂರಾರು ಕೋಟಿ ರೂಪಾಯಿಗಳನ್ನು ಲೂಟಿ ಮಾಡಲಾಗಿದೆ ಎಂದು ಟೀಕಿಸಿದರು.

ಬಿಬಿಎಂಪಿ ವ್ಯಾಪ್ತಿಯ ತ್ಯಾಜ್ಯ ವಿಲೇವಾರಿ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಒಳ ಡೆಸ್ಟ್ ಬೀನ್ ಹಗರಣ, ಸ್ವಚ್ಛ ಭಾರತ ಅಭಿಯಾನದ ಅನುಷ್ಠಾನದ ಹೆಸರಿನಲ್ಲಿ ಕಾನೂನುಬಾಹಿರವಾಗಿ ಅನುದಾನದ ದುರ್ಬಳಕೆ ಹಗರಣದಲ್ಲೂ ಮಾಜಿ ಸಚಿವರಾದ ಕೃಷ್ಣ ಭೈರೇಗೌಡ, ಎಂ.ಕೃಷ್ಣಪ್ಪ ಮತ್ತು ಅಂದಿನ ಶಾಸಕರಾದ ಪ್ರಿಯಾ ಕೃಷ್ಣ, ಎನ್.ಎ.ಹ್ಯಾರೀಸ್, ದಿನೇಶ್ ಗುಂಡೂರಾವ್, ಜಮೀರ್ ಅಹಮದ್ ಭಾಗಿಯಾಗಿದ್ದಾರೆ. ಅದೇ ರೀತಿ ವಿಶ್ವೇಶ್ವರಯ್ಯ ಜಲ ನಿಗಮದ ಕಾಮಗಾರಿಯೊಂದರ ಹೆಸರಿನಲ್ಲಿ 158 ಕೋಟಿ ಮೊತ್ತದ ಹಗರಣ ನಡೆದಿದ್ದು, ಇದರಲ್ಲಿ ಅಂದಿನ ಜಲ ಸಂಪನ್ಮೂಲ ಸಚಿವ ಎಂಬಿ ಪಾಟೀಲ್ ಅವರ ಪಾತ್ರವಿದೆ ಎಂದು ಎನ್.ಆರ್. ರಮೇಶ್ ಆರೋಪಿಸಿದರು.

ಒಟ್ಟಾರೆ, ಮಾಜಿ ಮುಖ್ಯಮಂತ್ರಿ ಸಿದ್ಧರಾಮಯ್ಯ ವಿರುದ್ಧ 7 ಪ್ರಕರಣಗಳು, ಮಾಜಿ ಸಚಿವ ಕೆ.ಜೆ.ಜಾರ್ಜ್ ವಿರುದ್ಧ 4 ದೂರುಗಳು, ಮಾಜಿ ಸಚಿವ ಯು. ಟಿ. ಖಾದರ್, ಜಮೀರ್ ಅಹಮದ್ ಹಾಗೂ ಕೃಷ್ಣ ಭೈರೇಗೌಡ ವಿರುದ್ಧ ತಲಾ 2 ದೂರುಗಳು ಮತ್ತು ಮಾಜಿ ಸಚಿವ ಎಂ.ಬಿ. ಪಾಟೀಲ್, ದಿನೇಶ್ ಗುಂಡೂರಾವ್, ಎಂ. ಕೃಷ್ಣಪ್ಪ, ಶಾಸಕರಾದ ಎನ್. ಎ. ಹ್ಯಾರೀಸ್ ಹಾಗೂ ಮಾಜಿ ಶಾಸಕ ಪ್ರಿಯಾ ಕೃಷ್ಣ ರವರುಗಳ ವಿರುದ್ಧ ತಲಾ 1 ದೂರುಗಳನ್ನು ದಾಖಲಿಸಲಾಗಿದೆ. ಈ ಸಂಬಂಧ ರಾಜ್ಯ ಸರ್ಕಾರ ಈ ಕೂಡಲೇ ಸಿಐಡಿ ತನಿಖೆ ನಡೆಸಬೇಕೆಂದು ಅವರು ಆಗ್ರಹಿಸಿದರು.

ಕಾಂಗ್ರೆಸ್ ಸದಸ್ಯರಿಂದ ಪ್ರತಿಭಟನೆ

ಮಧ್ಯಾಹ್ನದವರೆಗೂ ಪ್ರತಿಭಟನೆ ನಡೆಸಿದರು. ಈ ವೇಳೆ ಮಾಜಿ ಮೇಯರ್ ಅಯೂಬ್‌ಖಾನ್ ಪತ್ರಕರ್ತರೊಂದಿಗೆ ಮಾತನಾಡಿ, ಪಾಲಿಕೆ 2022ರ ಸೆ.6ರಂದು ಮೇಯರ್ ಚುನಾವಣೆ ನಡೆಯಿತು. ಅದೇ ದಿನ ಪ್ರಾದೇಶಿಕ ಆಯುಕ್ತರು ಪಾಲಿಕೆಯ ಎಲ್ಲಾ ಸ್ಥಾಯಿ ಸಮಿತಿಗಳಿಗೂ ತಲಾ 7 ಮಂದಿ ಸದಸ್ಯರನ್ನು ಆಯ್ಕೆ ಮಾಡಿದರು. ಅಂದೇ ಸ್ಥಾಯಿ ಸಮಿತಿಗಳ ಅಧ್ಯಕ್ಷರ ಚುನಾವಣೆ ನಡೆಯಬೇಕಾಗಿತ್ತು. ಸಮಯಾಭಾವದಿಂದ ಅಂದು ಚುನಾವಣೆ ನಡೆಯಲಿಲ್ಲ. ಅಲ್ಲದೆ, ಪ್ರಾದೇಶಿಕ ಆಯುಕ್ತರು ಮುಂದಿನ 4–5 ದಿನದೊಳಗೆ ಮೇಯರ್ ಅಧ್ಯಕ್ಷತೆಯಲ್ಲಿ ಸ್ಥಾಯಿ ಸಮಿತಿ ಅಧ್ಯಕ್ಷರ ಚುನಾವಣೆ ನಡೆಯಲಿದೆ ಎಂದು ತಿಳಿಸಿದ್ದರು. ಮೇಯರ್ ಆಯ್ಕೆಯಾಗಿ 4–5 ತಿಂಗಳಾದರೂ ಸ್ಥಾಯಿ ಸಮಿತಿಗಳಿಗೆ ಅಧ್ಯಕ್ಷರ ಆಯ್ಕೆ ಮಾಡಿಲ್ಲ. ಮೇಯರ್ ಶಿವಕುಮಾರ್ ಸರ್ವಾಧಿಕಾರಿ ಧೋರಣೆಯಿಂದ ಅಧಿಕಾರ ನಡೆಸುತ್ತಿದ್ದಾರೆ. ಇತರರ ಅಧಿಕಾರವನ್ನು ಕಿತ್ತುಕೊಂಡಿದ್ದಾರೆ. ನಾಲ್ಕು ಸ್ಥಾಯಿ ಸಮಿತಿಗಳ ಅಧ್ಯಕ್ಷರ ಅಧಿಕಾರವನ್ನು ತಾವೇ ಅನುಭವಿಸುತ್ತಿದ್ದಾರೆ ಎಂದು ಕಿಡಿಕಾರಿದರು.

ಭ್ರಷ್ಟಾಚಾರಕ್ಕೆ ನಾಂದಿ: ಸ್ಥಾಯಿ ಸಮಿತಿಗಳಿಲ್ಲದಿದ್ದರೆ, ಎಲ್ಲಾ ಬಿಲ್‌ಗಳನ್ನು ಸರಾಗವಾಗಿ ಪಾಸ್ ಮಾಡಿಕೊಳ್ಳಬಹುದಾಗಿದೆ. ಕಳೆದ ನಾಲ್ಕು ತಿಂಗಳಿಂದ ಅದೇ ನಡೆಯುತ್ತಿದೆ. ಎಲ್ಲಾ ಬಿಲ್‌ಗಳನ್ನು ಮೇಯರ್ ಅವರೇ ಖುದ್ದಾಗಿ ಸಹಿ ಮಾಡಿ ಪಾಸ್ ಮಾಡಿಕೊಳ್ಳುತ್ತಿದ್ದಾರೆ. ಸ್ಥಾಯಿ ಸಮಿತಿ ಅಧ್ಯಕ್ಷರಿದ್ದರೆ ಬಿಲ್‌ಗಳಿಗೆ ಕೊಕ್ಕೆ ಹಾಕುತ್ತಾರೆ ಎನ್ನುವ ಏಕೈಕ ಕಾರಣದಿಂದ ಅಧ್ಯಕ್ಷರ ಸ್ಥಾನಕ್ಕೆ ಚುನಾವಣೆ ನಡೆಸಿಲ್ಲ ಎಂದು ದೂರಿದರು. ಇಂದು ಬೆಳಗ್ಗೆ 11 ಗಂಟೆಗೆ ಫೈನಾನ್ಸ್ ಕಮಿಟಿ, 11.30 ಆರೋಗ್ಯ ಸ್ಥಾಯಿ ಸಮಿತಿ, ಮಧ್ಯಾಹ್ನ 12ಕ್ಕೆ ವರ್ಕ್ಸ್ ಕಮಿಟಿ, 12.30ಕ್ಕೆ ಆಡಿಟ್ ಕಮಿಟಿಗೆ ಚುನಾವಣೆ ನಡೆಸಲು ಸಮಯ ನಿಗದಿ ಮಾಡಲಾಗಿತ್ತು. ಬೆಳಗ್ಗೆ 10.30ರವರೆಗೆ ಕಚೇರಿಯಲ್ಲೇ ಮೇಯರ್ ಇದ್ದರು. ಸಭೆಗೆ ಬರದೆ 12 ಗಂಟೆಗೆ ಚುನಾವಣೆ ಮುಂದೂಡಿರುವುದಾಗಿ ಹೇಳಿದ್ದಾರೆ. ಇದು ಯಾವ ನ್ಯಾಯ ಎಂದು ಪ್ರಶ್ನಿಸಿದರು.

ಸ್ಥಾಯಿ ಸಮಿತಿಗಳಿಲ್ಲದೇ, ಮೈಸೂರಿನ ಅಭಿವೃದ್ಧಿ ಕಾರ್ಯ ಸ್ಥಗಿತಗೊಂಡಿದೆ. ಪಾಲಿಕೆ ಅಧಿಕಾರಿಗಳು ಬಿಜೆಪಿ ಕೈಗೊಂಬೆಯಾಗಿದ್ದಾರೆ. ಜೆಡಿಎಸ್ ಸದಸ್ಯರು ಸ್ಥಾಯಿ ಸಮಿತಿ ಚುನಾವಣೆಗೆ ಒತ್ತಾಯಿಸದೆ, ಬಿಜೆಪಿಯೊಂದಿಗೆ ಒಳ ಒಪ್ಪಂದ ಮಾಡಿಕೊಂಡಂತೆ ಕಾಣುತ್ತಿದೆ ಎಂದು ಕಿಡಿಕಾರಿದರು.

ಹೂವಿನ ಕುಂಡವೊಂದು ಛಿದ್ರ: ಪಾಲಿಕೆ ಹಳೆ ಕೌನ್ಸಿಲ್ ಸಭಾಂಗಣದಿಂದ ಹೊರ ಬಂದು ಆಯುಕ್ತರ ಕೊಠಡಿಗೆ ಬೀಗ ಹಾಕುವ ವೇಳೆ ಅಲ್ಲಿಯೇ ಇದ್ದ ಹೂವಿನ ಗಿಡವೊಂದರ ಪಾಟ್ ಪುಡಿಪುಡಿಯಾಗಿದೆ. ಗುಂಪಿನಲ್ಲಿ ಬರುವಾಗ ಕಾಲಿಗೆ ಸಿಕ್ಕಿ ಹೂವಿನ ಕುಂಡ ಪೀಸ್ ಪೀಸ್ ಆಗಿದೆ ಎಂದು ಕೆಲವರು ಹೇಳಿದರೆ, ಪಾಲಿಕೆ ಸದಸ್ಯರೊಬ್ಬರು ಅದನ್ನು ಒದ್ದಾಗ ಪುಡಿಯಾಯಿತು ಎಂದು ಕೆಲವರು ಹೇಳಿದರು.

ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಶ್ರೀಗಳ, ಭಕ್ತರ ಸಮ್ಮುಖದಲ್ಲಿ

ಎರಡನೇ ದಿನದ ಸಹಸ್ರ ಚಂದ್ರ ದರ್ಶನ ಶಾಂತಿ ಹೋಮ





ಮೈಸೂರು, ಫೆ.2(ಆರ್‌ಕೆಬಿ)– ಮೈಸೂರು–ನಂಜನಗೂಡು ರಸ್ತೆಯಲ್ಲಿರುವ ಶ್ರೀ ಅವಧೂತ ದತ್ತಪೀಠ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ವರ್ಷದ ಜನ್ಮ ದಿನೋತ್ಸವದ ಪ್ರಯುಕ್ತ ಆಶ್ರಮದಲ್ಲಿ ನಡೆಸಲಾಗುತ್ತಿರುವ ಐದು ದಿನಗಳ ಸಹಸ್ರ ಚಂದ್ರದರ್ಶನ ಶಾಂತಿ ಹೋಮದ ಎರಡನೇ ದಿನವಾದ ಗುರುವಾರ ಪವಮಾನ ಹೋಮ, ಏಕಾವರ ರುದ್ರಾಭಿಷೇಕ ಕಾರ್ಯಕ್ರಮಗಳು ನಡೆದವು.

ಗುರುವಾರ ಬೆಳಗ್ಗೆಯಿಂದಲೇ ಗಣಪತಿ ಶ್ರೀಗಳ ಸಮ್ಮುಖದಲ್ಲಿ ನೂರಾರು ಭಕ್ತರ ನಡುವೆ ಪವಮಾನ ಹೋಮ, ಸಕಲ ದೇವತಾ ಹೋಮ, ಶ್ರೀ ಸಚ್ಚಿದಾನಂದೇಶ್ವರ ಸ್ವಾಮಿಗೆ ಏಕಾವರ ರುದ್ರಾಭಿಷೇಕ, ಮಧ್ಯಾಹ್ನ ರುದ್ರ ಹೋಮ, ಸಂಜೆ ರುದ್ರ ಹೋಮ ಪೂರ್ಣಾಹುತಿ ನಡೆಸಲಾಯಿತು. ನಾಳೆ (ಫೆ.3) ಶುಕ್ರವಾರದ ತ್ರಯೋದಶಿಯಂದು ಬೆಳಗ್ಗೆ 7ಕ್ಕೆ ಆಯುಷ್ಯಾಮೇಷ್ಟಿ ನಡೆಯಲಿದೆ. 9 ಗಂಟೆಗೆ ಅಷ್ಟದ್ರವ್ಯ ಸಹಿತ ಸಹಸ್ರ ಮೋದಕ ಗಣಪತಿ ಹೋಮ, ಸಂಜೆ 4ಕ್ಕೆ ನಾರಾಯಣ ಹೋಮ, ಸಂಜೆ 7 ಗಂಟೆಗೆ ಪೂರ್ಣಾಹುತಿ ನಡೆಯಲಿದೆ.

ಬೆಲೆ ಏರಿಕೆಗೆ ತಕ್ಕಂತೆ ವೇತನ ಪರಿಷ್ಕರಣೆಯೂ ಸೇರಿದಂತೆ ನಾನಾ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ

ಫೆ.14ರಿಂದ ಬೆಂಗಳೂರಲ್ಲಿ ಗ್ರಾಪಂ ನೌಕರರ ಅನಿರ್ದಿಷ್ಟಾವಧಿ ಧರಣಿ



ಮೈಸೂರು,ಫೆ.2(ಪಿಎಂ)–ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದ (ಸಿಐಟಿಯು) ವತಿಯಿಂದ ಗ್ರಾಮ ಪಂಚಾಯಿತಿ ನೌಕರರಿಗೆ ಬೆಲೆ ಏರಿಕೆಗೆ ಅನುಗುಣವಾಗಿ ಕನಿಷ್ಠ ವೇತನ ಪರಿಷ್ಕರಿಸಬೇಕೆಂಬುದೂ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸಲು ಒತ್ತಾಯಿಸಿ ಫೆ14ರಿಂದ ಬೆಂಗಳೂರಿನಲ್ಲಿ ಅನಿರ್ದಿಷ್ಟಾವಧಿ ಅಹೋರಾತ್ರಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ರಾಮಕೃಷ್ಣ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಗ್ರಾಪಂಗಳ ಕರ ವಸೂಲಿಗಾರರು, ಕ್ಲರ್ಕ್‌ಗಳು, ಡೇಟಾ ಎಂಟ್ರಿ ಆಪರೇಟರ್ಸ್, ನೀರುಗಂಟಿಗಳು, ಜವಾನ, ಸ್ವಚ್ಛತಾ ಕೆಲಸಗಾರರನ್ನು ಏಕಕಾಲಕ್ಕೆ ಸರ್ಕಾರಿ ನೌಕರರೆಂದು ಘೋಷಣೆ ಮಾಡಬೇಕೆಂಬುದೂ ನಮ್ಮ ಪ್ರಮುಖ ಬೇಡಿಕೆ. ಇದಕ್ಕೂ ಪೂರ್ವದಲ್ಲಿ ಬೆಲೆ ಏರಿಕೆಗೆ ಅನುಗುಣವಾಗಿ ಕನಿಷ್ಠ ವೇತನ 25 ಸಾವಿರ ರೂ. ನಿಗದಿಪಡಿಸಲು ತುರ್ತು ಕ್ರಮ ವಹಿಸಬೇಕು ಎಂದರು.

ರಾಜ್ಯದಲ್ಲಿ ಸುಮಾರು 63 ಸಾವಿರ ಗ್ರಾಪಂ ನೌಕರರು ಇದ್ದು, ಬಹುತೇಕ ಎಲ್ಲರೂ ಹೋರಾಟದಲ್ಲಿ ಪಾಲ್ಗೊಳ್ಳಬೇಕೆಂದು ಕರೆ ನೀಡಲಾಗಿದೆ. ಭಾಗಶಃ ನೌಕರರು ಹೋರಾಟದಲ್ಲಿ ಭಾಗವಹಿಸಿದರೆ ಮುಷ್ಕರದ ವಾತಾವರಣ ನಿರ್ಮಾಣವಾಗಲಿದೆ. ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದ ಎದುರು ಅಂದು ಬೆಳಗ್ಗೆ 11ಕ್ಕೆ ನೌಕರರು ಸಮಾವೇಶಗೊಳ್ಳಲಿದ್ದೇವೆ. ಆ ಬಳಿಕ ಪೊಲೀಸರು ನಿಗದಿಪಡಿಸುವ ಸ್ಥಳದಲ್ಲಿ ಪ್ರತಿಭಟನೆ ಆರಂಭಿಸಲಿದ್ದೇವೆ. ಗ್ರಾಪಂ ನೌಕರರಿಗೆ 2016ರಲ್ಲಿ ಕನಿಷ್ಠ ವೇತನ ನಿಗದಿ ಮಾಡಲಾಗಿತ್ತು. ಐದು ವರ್ಷಕ್ಕೊಮ್ಮೆ ಪರಿಷ್ಕರಣೆ ಮಾಡಬೇಕೆಂಬ ನಿಯಮವಿದ್ದರೂ ಒಂದು ವರ್ಷ ತಡವಾಗಿ ಪರಿಷ್ಕರಣೆ ಮಾಡಲಾಯಿತು. ಆದರೆ ಅವೈಜ್ಞಾನಿಕವಾಗಿ ಪರಿಷ್ಕರಣೆ ಮಾಡಿದ್ದ ಹಿನ್ನೆಲೆಯಲ್ಲಿ ಹೋರಾಟ ಅನಿವಾರ್ಯವಾಗಿದೆ ಎಂದು ಹೇಳಿದರು. ಸಂಘದ ಜಿಲ್ಲಾಧ್ಯಕ್ಷ ಕೆ.ಬಸವರಾಜು, ಪ್ರಧಾನ ಕಾರ್ಯದರ್ಶಿ ದಿನೇಶ್, ಗ್ರಾಪಂ ನೌಕರರಾದ ವರುಣ ನಾಗರಾಜು, ನಂಜುಂಡಸ್ವಾಮಿ ಸುದ್ದಿಗೋಷ್ಠಿಯಲ್ಲಿದ್ದರು.


> ನೌಕರರು ನಿವೃತ್ತಿ ಹೊಂದಿದರೆ ಅವರಿಗೆ ಅಥವಾ ಅವರು ಮರಣ ಹೊಂದಿದರೆ ಅವರ ಕುಟುಂಬಕ್ಕೆ ಪ್ರತಿ ತಿಂಗಳು ಕನಿಷ್ಠ 6 ಸಾವಿರ ರೂ. ಪಿಂಚಣಿ ನೀಡಬೇಕು. 2017ರ ಅ.31ಕ್ಕಿಂತ ಮುಂಚಿತವಾಗಿ ನೇಮಕಗೊಂಡ ನೌಕರರಿಗೆ ಜಿಪಂಗಳಿಂದ ಏಕಕಾಲಕ್ಕೆ ಅನುಮೋದನೆ ನೀಡಬೇಕು. ನೌಕರರ ವರ್ಗಾವಣೆಗೆ ಅವಕಾಶ ಕಲ್ಪಿಸಬೇಕು. ಬಯೋಮೆಟ್ರಿಕ್ ಸಹಿ ಕಡ್ಡಾಯವೆಂಬುದನ್ನು ಕೈಬಿಡಬೇಕು. ನೀರುಗಂಟಿಗಳಿಗೆ 'ಮಲ್ಟಿ ಪರ್ಪಸ್' ಎಂದು ಇರುವುದನ್ನು ಕೈಬಿಟ್ಟು ನಿರ್ದಿಷ್ಟ ಕೆಲಸ ನಿಗದಿಪಡಿಸಬೇಕು. ಆದಾಯಕ್ಕೆ ಅನುಗುಣವಾಗಿ ಕರ ವಸೂಲಿಗಾರರ ಹುದ್ದೆಗಳನ್ನು ನಿಗದಿಪಡಿಸಬೇಕು. ಪ್ರತಿಯೊಂದು ಗ್ರಾಪಂನಲ್ಲಿ ಲೆಕ್ಕ ಸಹಾಯಕ ಹುದ್ದೆಗಳನ್ನು ಸೃಜಿಸಬೇಕು. **–ರಾಮಕೃಷ್ಣ, ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ**

ಪೊಂಬೊಳಕ್ ಕೊಡವ ಕೂಟದಿಂದ ಹುತ್ತರಿ ಒತ್ತೋರ್ಮೆ ಕೂಟ



ಮೈಸೂರು,ಫೆ.2–ಮೈಸೂರಿನ ವಿಜಯನಗರ 4ನೇ ಹಂತದಲ್ಲಿರುವ ಕೊಡವ ಸಮಾಜದಲ್ಲಿ ಪೊಂಬೊಳಕ್ ಕೊಡವ ಕೂಟದ ವತಿಯಿಂದ ಹುತ್ತರಿ ಒತ್ತೋರ್ಮೆ ಕೂಟ ನಡೆಯಿತು. ಸಂಘದ ಅಧ್ಯಕ್ಷ ಮುಂಡೋಟಿರ ಜಯ ಚಂಗಪ್ಪ ಸ್ವಾಗತಿಸಿದರು. ಗೌರವ ಕಾರ್ಯದರ್ಶಿ ಚೊಟ್ಟಂಡ ಚಂಗಪ್ಪ ಸಂಘದ ವರದಿ ಓದಿದರು. ಧನ ಸಹಾಯ ಮಾಡಿದ ದಾನಿಗಳ ವಿವರವನ್ನು ಉಪ ಕಾರ್ಯದರ್ಶಿ ಶ್ರೀಮತಿ ಗುಡ್ಡಂಡ ರಶ್ಮಿ ತಿಳಿಸಿದರು. ಖಜಾಂಚಿ ಶ್ರೀಮತಿ ಕುಲ್ಲಚಂಡ ವಿನುತ ಕೇಸರಿ ಖರ್ಚು–ವೆಚ್ಚದ ವಿವರ ಓದಿದರು.

ವೇದಿಕೆಯಲ್ಲಿ ಸಮಿತಿ ಸದಸ್ಯರಾದ ಬೊಪ್ಪಂಡ ಅಪ್ಪಾಜಿ, ಮಲ್ಲೇಂಗಡ ಶರಣು ಸೋಮಯ್ಯ, ಮುಳ್ಳಂಡ ವಿನು, ತೀತರಮಾಡ ದೇವಕಿ, ತೀತಿರ ಬೀನಾ, ಕ್ರೀಡಾ ಕಾರ್ಯದರ್ಶಿ ಅಡಿಕೇರ ಸಜನ್ ಕಾರ್ಯಪ್ಪ ಹಾಗೂ ಕೊಡವ ಸಮಾಜದ ಪ್ರತಿನಿಧಿ ಅಮ್ಮಂಡ ಸೋಮಯ್ಯ ಮತ್ತಿತರರು ಉಪಸ್ಥಿತರಿದ್ದರು. ಕುಲ್ಲಚಂಡ ಸಹನ ಕೇಸರಿ ನಿರೂಪಿಸಿದರು.



ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷರೂ ಆದ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಜಿ.ಡಿ.ಹರೀಶ್‌ಗೌಡರಿಗೆ ಮೈಮುಲ್ ಮಾಜಿ ಅಧ್ಯಕ್ಷ, ಹಾಲಿ ನಿರ್ದೇಶಕರಾದ ಕೆ.ಉಮಾಶಂಕರ್ ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ವೇಳೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕರಾದ ಜಿ.ಟಿ.ದೇವೇಗೌಡರು, ಮುಖಂಡರಾದ ಬೆಳವಾಡಿ ಶಿವಮೂರ್ತಿ, ಲೋಕೇಶ್, ಗೋಪಾಲಪುರ ಬಸವೇಗೌಡ, ರಾಜಶೇಖರ ಮೂರ್ತಿ ಮತ್ತಿತರರಿದ್ದರು.

ನಾಳೆ ಮೈಸೂರಲ್ಲಿ ತಮಿಳುನಾಡು ರಾಜ್ಯಪಾಲರಿಂದ ದತ್ತಿ ಉಪನ್ಯಾಸ



ಮೈಸೂರು, ಫೆ. 2– ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವದ 12ನೇ ದತ್ತಿ ಉಪನ್ಯಾಸವನ್ನು ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ **'ಜಿ 20 ನಾಯಕತ್ವ : ಭಾರತದ ಅವಕಾಶಗಳು'** ವಿಷಯ ಕುರಿತು ಫೆ. **4ರಂದು ಬೆಳಗ್ಗೆ 11 ಘಂಟೆಗೆ** ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ನೀಡಲಿದ್ದಾರೆ.

ಸುತ್ತೂರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಆರ್.ಎನ್. ರವಿಯವರು ಮೂಲತಃ ಬಿಹಾರದ ಪಾಟ್ನಾದವರು. 1976ರಲ್ಲಿ ಭಾರತೀಯ ಪೊಲೀಸ್ ಸೇವೆಗೆ (ಐಪಿಎಸ್) ಸೇರ್ಪಡೆಯಾಗಿ, ಕೇರಳದಲ್ಲಿ ಸೇವೆ ಆರಂಭಿಸಿದರು. ದೇಶದ ಹಲವು ಭಾಗಗಳಲ್ಲಿ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದರು. ಪ್ರಧಾನಮಂತ್ರಿಗಳ ಕಚೇರಿಯಲ್ಲಿ ಜಂಟಿ ಗುಪ್ತಚರ ಸಮಿತಿಯ ಅಧ್ಯಕ್ಷರಾಗಿ, ಕೇಂದ್ರ ಗುಪ್ತಚರ ದಳದ ಮುಖ್ಯಸ್ಥರಾಗಿ, ರಾಷ್ಟ್ರೀಯ ಭದ್ರತಾ ಮಂಡಳಿಯ ಉಪ ಸಲಹೆಗಾರರಾಗಿ ಕಾರ್ಯನಿರ್ವಹಿಸಿದ್ದಾರೆ. ಗುಪ್ತಚರ ದಳದಲ್ಲಿದ್ದಾಗ ಜಮ್ಮು ಮತ್ತು ಕಾಶ್ಮೀರ, ಈಶಾನ್ಯ ರಾಜ್ಯಗಳು ಮತ್ತು ಮಾವೋವಾದಿಗಳಿದ್ದ ಪ್ರದೇಶಗಳಲ್ಲಿ ಹಿಂಸಾತ್ಮಕ ದಾಳಿಗಳ ವಿರುದ್ಧ ದಿಟ್ಟ ಕ್ರಮ ಕೈಗೊಂಡಿದ್ದರು.

2014ರಲ್ಲಿ ನಾಗಾಲ್ಯಾಂಡ್‌ನ ಜನರೊಂದಿಗೆ ಶಾಂತಿ ಮಾತುಕತೆಗಾಗಿ ಕೇಂದ್ರ ಸರ್ಕಾರದ ಸಂಧಾನಕಾರರಾಗಿ ಕಾರ್ಯನಿರ್ವಹಿಸಿ, ಅಲ್ಪಾವಧಿಯಲ್ಲಿಯೇ ಶಾಂತಿ ಒಪ್ಪಂದ ಏರ್ಪಡುವಂತೆ ಮಾಡಿದರು. 2019ರಿಂದ 2021ರವರೆಗೆ ನಾಗಾಲ್ಯಾಂಡ್‌ನ ರಾಜ್ಯಪಾಲರಾಗಿ ಕಾರ್ಯನಿರ್ವಹಿಸಿರುವರು. ಪ್ರಸ್ತುತ ತಮಿಳುನಾಡಿನ ರಾಜ್ಯಪಾಲರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವದ ನೆನಪಿಗಾಗಿ 2004ರಲ್ಲಿ ದತ್ತಿಯನ್ನು ಸ್ಥಾಪಿಸಲಾಯಿತು. ಇದರ ಆಶ್ರಯದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಅಪೂರ್ವ ಸಾಧನೆ ಮಾಡಿರುವ ವ್ಯಕ್ತಿಗಳಿಂದ ಪ್ರಚಲಿತ ಸಾಮಾಜಿಕ ವಿಷಯಗಳನ್ನು ಕುರಿತಂತೆ ವಿಶೇಷ ಉಪನ್ಯಾಸ ಏರ್ಪಡಿಸಿದೆ. ಈ ಮಾಲೆಯ 12ನೇ ಉಪನ್ಯಾಸವನ್ನು ಈಗ ಹಮ್ಮಿಕೊಳ್ಳಲಾಗಿದೆ. ಉಪನ್ಯಾಸದ ನಂತರ ಪ್ರಶ್ನೋತ್ತರಕ್ಕೆ ಅವಕಾಶವಿರುತ್ತದೆ.

ನಾಳೆ ವಿದ್ಯುತ್ ವ್ಯತ್ಯಯ

ಮೈಸೂರು,ಫೆ.2– ಫೆ.4ರ ಶನಿವಾರ ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿದ್ದು, ಈ ಸಂಬಂಧ ಜಲಪುರಿ, ಗಾಯತ್ರಿಪುರಂ, ಜ್ಯೋತಿನಗರ, ಉದಯಗಿರಿ, ಕ್ಯಾತಮಾರನಹಳ್ಳಿ, ಶಾಂತಿನಗರ 1 ಮತ್ತು 2ನೇ ಹಂತ, ಗಣೇಶ್‌ನಗರ, ಸತ್ಯನಗರ, ಮಹದೇವಪುರ ರಸ್ತೆ ಜರ್ಮನ್ ಪ್ರೆಸ್, ಉಸ್ಮಾನಿಯಾ ಬ್ಲಾಕ್, ಗೌಸಿಯಾ ನಗರ, ರಾಘವೇಂದ್ರನಗರ, ಗಿರಿಯಾ ಬೋವಿ ಪಾಳ್ಯ, ಯರಗನಹಳ್ಳಿ, ಬನ್ನೂರು ರಸ್ತೆ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.



ಮೈಸೂರು ತಾಲೂಕು ಸಾಗರಕಟ್ಟೆಯ ರಾಮನಹಳ್ಳಿಯ ರುಕ್ಮಿಣಮ್ಮ ಮತ್ತು ಈಶ್ವರ ನಾಯಕ ದಂಪತಿ ಪುತ್ರ ಸಂಜಯ್ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡು ಶಸ್ತ್ರಚಿಕಿತ್ಸೆಗೆ ಒಳಗಾಗಿರುವ ವಿಷಯ ತಿಳಿದ ಮೈಮುಲ್ ಹಾಗೂ ಎಪಿಎಂಸಿ ಮಾಜಿ ಅಧ್ಯಕ್ಷರೂ ಆದ ಕಾಂಗ್ರೆಸ್ ಮುಖಂಡ ಮಾವಿನಹಳ್ಳಿ ಎಸ್.ಸಿದ್ದೇಗೌಡರು ನೆರವಾಗಿದ್ದು, ಅವರ ಪತ್ನಿ ಕಮಲಮ್ಮ ಸಿದ್ದೇಗೌಡರ ಮೂಲಕ 1 ಲಕ್ಷ ರೂ. ಧನಸಹಾಯ ಮಾಡಿದ್ದಾರೆ. ಈ ವೇಳೆ ರಾಜ್ಯ ನಾಯಕರ ಯುವಸೇನೆ ರಾಜ್ಯಾಧ್ಯಕ್ಷ ದೇವರಾಜು, ರಾಜು, ಮದನ್, ಶಿವಣ್ಣ, ಸಿದ್ದರಾಜು, ಮಹದೇವಸ್ವಾಮಿ, ಮಹೇಂದ್ರ ಇದ್ದರು.

ರಾಸಾಯನಿಕ ಬಳಕೆಯಿಂದ ಮಣ್ಣಿನ ಫಲವತ್ತತೆ ನಾಶ; ಹೆಚ್ಚುತ್ತಿರುವ ಕ್ಯಾನ್ಸರ್ ಪೀಡಿತರ ಸಂಖ್ಯೆ

● ಕೇಂದ್ರ ವಿಜ್ಞಾನ, ತಂತ್ರಜ್ಞಾನ ಇಲಾಖೆ ಕಾರ್ಯದರ್ಶಿ ಡಾ.ಶ್ರೀವಾರಿ ಚಂದ್ರಶೇಖರ್ ಆತಂಕ ● ಮಣ್ಣಿನ ಆರೋಗ್ಯ ರಕ್ಷಣೆ ತುರ್ತು ಅಗತ್ಯತೆಗೆ ಸಲಹೆ

ಮೈಸೂರು,ಫೆ.2(ಆರ್‌ಕೆಬಿ)–ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕಗಳ ಬಳಕೆಯಿಂದ ಪಂಜಾಬ್ ಸೇರಿದಂತೆ ಉತ್ತರ ಭಾರತದ ಪ್ರಮುಖ ನದಿ ಪ್ರದೇಶದಲ್ಲಿ ಮಣ್ಣಿನ ಫಲವತ್ತತೆ ನಾಶವಾಗಿ, ಕ್ಯಾನ್ಸರ್‌ಕಾರಕಗಳು ಮಾನವನ ದೇಹವನ್ನು ಪ್ರವೇಶಿಸಿ, ಕ್ಯಾನ್ಸರ್ ಪೀಡಿತರ ಸಂಖ್ಯೆ ಹೆಚ್ಚುತ್ತಿದೆ ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಕಾರ್ಯದರ್ಶಿ ಡಾ. ಶ್ರೀವಾರಿ ಚಂದ್ರಶೇಖರ್ ಆತಂಕ ವ್ಯಕ್ತಪಡಿಸಿದರು.

ಮೈಸೂರು ವಿಶ್ವ ವಿದ್ಯಾನಿಲಯ ಹಾಗೂ ಕರ್ನಾಟಕ ಮುಕ್ತ ವಿಶ್ವ ವಿದ್ಯಾನಿಲಯದ ಸಹಯೋಗದಲ್ಲಿ ಇಂಡಿಯನ್ ಫೈಟೋಪೆಥಾಲಜಿಕಲ್ ಸೊಸೈಟಿಯು ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಗುರುವಾರ ಆಯೋಜಿಸಿದ್ದ ಸೊಸೈಟಿಯ ಅಮೃತ ಮಹೋತ್ಸವ ಸಮ್ಮೇಳನದಲ್ಲಿ ವರ್ಚುವಲ್ ಮೂಲಕ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಹೀಗಾಗಿ ಸದ್ಯದ ಪರಿಸ್ಥಿತಿಯಲ್ಲಿ ಮಣ್ಣಿನ ಆರೋಗ್ಯ ಕಾಯ್ದುಕೊಳ್ಳಲು ಸಾವಯವ ಕೃಷಿ ಪದ್ಧತಿ ಅನುಸರಿಸುವ ತುರ್ತು ಅಗತ್ಯವಿರುವ ಬಗ್ಗೆ ಒತ್ತಿ ಹೇಳಿದರು. ಇದಕ್ಕೆ ವಿಜ್ಞಾನ ಮತ್ತು ತಂತ್ರಜ್ಞಾನದ ನೆರವು ಪಡೆದುಕೊಳ್ಳಬೇಕು. ಮಣ್ಣಿನ ಆರೋಗ್ಯ ಹಾಗೂ ಬೆಳೆ ಇಳುವರಿಯನ್ನೂ ಹೆಚ್ಚಿಸುವ ಸಾವಯವ ಕೃಷಿ ಪದ್ಧತಿಯನ್ನು ವಿಜ್ಞಾನ ಹಾಗೂ ತಂತ್ರಜ್ಞಾನದ ನೆರವಿನೊಂದಿಗೆ ಕೃಷಿಕರು ಅನುಸರಿಸಬೇಕು. ಇದಕ್ಕಾಗಿ ಕೇಂದ್ರ ಸರ್ಕಾರವು ಬಜೆಟ್‌ನಲ್ಲಿ ಕೃತಕ ಬುದ್ಧಿಮತ್ತೆ ಸೇರಿದಂತೆ ಹೊಸ ತಂತ್ರಜ್ಞಾನವನ್ನು ಕೃಷಿ ಕ್ಷೇತ್ರಕ್ಕೆ ಪರಿಚಯಿಸುತ್ತಿದೆ ಎಂದು ತಿಳಿಸಿದರು.



ಮೈಸೂರು ವಿಶ್ವವಿದ್ಯಾನಿಲಯ, ಕರ್ನಾಟಕ ಮುಕ್ತ ವಿಶ್ವ ವಿದ್ಯಾನಿಲಯದ ಸಹಯೋಗದಲ್ಲಿ ಇಂಡಿಯನ್ ಫೈಟೊಪೆಥಾಲಜಿಕಲ್ ಸೊಸೈಟಿಯು ಮೈಸೂರಿನಲ್ಲಿ ಆಯೋಜಿಸಿದ್ದ ಸೊಸೈಟಿಯ ಅಮೃತ ಮಹೋತ್ಸವ ಸಮ್ಮೇಳನದಲ್ಲಿ ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಕಾರ್ಯದರ್ಶಿ ಡಾ.ಶ್ರೀವಾರಿ ಚಂದ್ರಶೇಖರ್ ವರ್ಚುವಲ್ ಮೂಲಕ ಉದ್ಘಾಟಿಸಿ, ಮಾತನಾಡಿದರು. ಚಿತ್ರದಲ್ಲಿ ಕೆಎಸ್‌ಓಯು ಕುಲಪತಿ ಡಾ.ಶರಣಪ್ಪ ವಿ.ಹಲಸೆ, ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ, ಮೈಸೂರು ವಿವಿ ಪ್ರಭಾರ ಕುಲಪತಿ ಪ್ರೊ.ಹೆಚ್. ರಾಜಶೇಖರ್, ಇಂಡಿಯನ್ ಫೈಟೊಪೆಥಾಲಜಿಕಲ್ ಸೊಸೈಟಿ ಅಧ್ಯಕ್ಷ ಡಾ.ರಾಕೇಶ್ ಪಾಂಡೆ, ಕಾರ್ಯದರ್ಶಿ ಡಾ.ರಾಬಿನ್ ಗೋಗೋಯ್, ಡಾ.ಚಂದ್ರನಾಯಕ್, ಡಾಎಸ್.ನಿರಂಜನರಾಜ್ ಅವರನ್ನು ಕಾಣಬಹುದು.

ಸಾವಯವ ಕೃಷಿ ಆಯ್ಕೆ ಮಾಡಿಕೊಂಡು ದೇಶದ ಪರಿಸರ ಕಾಯ್ದುಕೊಳ್ಳುವತ್ತ ಸುಸ್ಥಿರ ಅಭಿವೃದ್ಧಿ ಸಾಧಿಸಬೇಕಾಗಿದೆ. ಪರಂಪರಾಗತ ಜ್ಞಾನದ ನೆರವಿನೊಂದಿಗೆ ಭಾರತವನ್ನು ಮತ್ತೆ ಆರೋಗ್ಯಯುತ ದೇಶವಾಗಿಸಲು ರೈತರು ಹಾಗೂ ವಿಜ್ಞಾನಿಗಳು ಪ್ರಯತ್ನಿಸಬೇಕಿದೆ ಎಂದರು.

ದೇಶದಲ್ಲಿ ಶೇ.60ರಷ್ಟು ಮಂದಿ ಕೃಷಿ ಅವಲಂಬಿಸಿದ್ದು, ದೇಶದ ಒಟ್ಟು ಆಂತರಿಕ ಉತ್ಪಾದನೆಯಲ್ಲಿ ಶೇ.20ರಷ್ಟು ಮಾತ್ರ ಕೃಷಿ ಕೊಡುಗೆ ಇದೆ. ಕೃಷಿ ಭೂಮಿ ಬಳಕೆಯಲ್ಲಿ ನಾವು ಚೀನಾಗಿಂತ ಹೆಚ್ಚಿದ್ದರೂ ಕೃಷಿ ಉತ್ಪಾದನೆಯಲ್ಲಿ ಚೀನಾಗಿಂತ ಹಿಂದಿದ್ದೇವೆ. ಹೀಗಾಗಿ ನಾವು ಪರಿಹಾರದ ಕುರಿತು ಕೃಷಿ ವಿಜ್ಞಾನಿಗಳು ಆಲೋಚಿಸಬೇಕು. ಸಂಶೋಧನೆಗೆ ಹೆಚ್ಚು ಒತ್ತು ನೀಡಬೇಕು ಎಂದು ಸಲಹೆ ನೀಡಿದರು.

ಎಪ್ಪತ್ತೈದು ವರ್ಷಗಳ ಹಿಂದೆ ಆಹಾರ ಧಾನ್ಯಗಳಿಗೆ ಬೇರೆ ದೇಶಗಳನ್ನು ಅವಲಂಬಿಸಬೇಕಿದ್ದ ನಮ್ಮ ದೇಶ ಇಂದು ಸ್ವಾವಲಂಬನೆ ಸಾಧಿಸಿದೆ. ಇತರೆ ದೇಶಗಳಿಗೆ ಆಹಾರದ ಉತ್ಪನ್ನಗಳನ್ನು ರಫ್ತು ಮಾಡುತ್ತಿದೆ. ರೈತರ ಆದಾಯ ದ್ವಿಗುಣಗೊಳಿಸಿ, ಆರ್ಥಿಕತೆಗೆ ವೇಗ ನೀಡಬೇಕಿದೆ ಎಂದರು.

ಬಾಗಲಕೋಟೆ ತೋಟಗಾರಿಕೆ ವಿಜ್ಞಾನ ವಿವಿ ಕುಲಪತಿ ಪ್ರೊ.ಕೆ.ಎಂ.ಇಂದಿರೇಶ್ ಮಾತನಾಡಿ, ಮಲೆನಾಡು ಜಿಲ್ಲೆಗಳಲ್ಲಿ ಅಡಿಕೆ, ಉತ್ತರ ಕರ್ನಾಟಕದಲ್ಲಿ ದಾಳಿಂಬೆ, ಕೋಲಾರ, ಬೆಂಗಳೂರು ಭಾಗದಲ್ಲಿ ಟೊಮೆಟೋ ಕೃಷಿಗಳಿಗೆ ಹೊಸ ವೈರಸ್ ಕಾಡುತ್ತಿದೆ. ಹೀಗಾಗಿ ಇಳುವರಿ ಕುಂಠಿತಗೊಂಡಿದೆ. ವಿಜಯಪುರ, ಗದಗ ಇನ್ನಿತರೆ ಜಿಲ್ಲೆಗಳ ಹವಾಮಾನವೂ ವ್ಯತ್ಯಾಸವಾಗಿ, ಕೃಷಿ ಮೇಲೆ ಪರಿಣಾಮ ಉಂಟಾಗಿದೆ. ಕೃಷಿಯಲ್ಲಿ ಶೇ.65ರಷ್ಟು ಉತ್ಪನ್ನಗಳಲ್ಲಿ ರಾಸಾಯನಿಕಗಳಿದ್ದು, ಹೀಗಾಗಿ ಮಣ್ಣಿನ ಆರೋಗ್ಯದ ಜೊತೆಗೆ ಮಾನವನ ಆರೋಗ್ಯ, ಆಯುಸ್ಸನ್ನು ಕಡಿಮೆ ಮಾಡುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಮುಕ್ತ ವಿವಿ ಕುಲಪತಿ ಡಾ.ಶರಣಪ್ಪ ವಿ.ಹಲಸೆ, ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್. ರಂಗಪ್ಪ ಮೈಸೂರು ವಿವಿ ಪ್ರಭಾರ ಕುಲಪತಿ ಪ್ರೊ.ಹೆಚ್. ರಾಜಶೇಖರ್, ಇಂಡಿಯನ್ ಫೈಟೊಪೆಥಾಲಜಿಕಲ್ ಸೊಸೈಟಿ ಅಧ್ಯಕ್ಷ ಡಾ.ರಾಕೇಶ್ ಪಾಂಡೆ, ಕಾರ್ಯದರ್ಶಿ ಡಾ.ರಾಬಿನ್ ಗೊಗೊಯ್, ಡಾ.ಚಂದ್ರಾಯಕ್, ಡಾ.ಎಸ್.ನಿರಂಜನರಾಜ್ ಉಪಸ್ಥಿತರಿದ್ದರು.



ಈ ವಾರ 'ನಟ ಭಯಂಕರ'ನ ಆರ್ಭಟ

ಒಳ್ಳೇ ಹುಡುಗ ಪ್ರಥಮ್ ನಾಯಕನಾಗಿ ನಟಿಸಿ, ನಿರ್ದೇಶಿಸಿರುವ ಹಾರರ್, ಆಕ್ಷನ್, ಕಾಮಿಡಿ ಕಥೆ ಹೊಂದಿದ ಚಿತ್ರ 'ನಟ ಭಯಂಕರ' ಚಿತ್ರ ಇಂದಿನಿಂದ ತೆರೆ ಕಾಣುತ್ತಿದೆ. ನಿಹಾರಿಕಾ ಶೆಣೈ, ಸುಶ್ಮಿತಾ ಜೋಶಿ ಹಾಗೂ ಚಂದನಾ ನಾಯಕಿಯರಾಗಿ ನಟಿಸಿರುವ ಈ ಚಿತ್ರಕ್ಕೆ 'ಜಾತಸ್ಯ ಮರಣಂ ಧ್ರುವಂ' ಎಂಬ ಟ್ಯಾಗ್‌ಲೈನ್ ಇದೆ. ಇತ್ತೀಚೆಗೆ ಈ ಚಿತ್ರದ ವಿಡಿಯೋ ಹಾಡನ್ನು ಅಶ್ವಿನಿ ಪುನೀತ್ ರಾಜ್‌ಕುಮಾರ್ ಬಿಡುಗಡೆಗೊಳಿಸಿ ಶುಭ ಹಾರೈಸಿದರು. ಈ ಹಿಂದೆ ಧ್ರುವ ಸರ್ಜಾ ಬಿಡುಗಡೆ ಮಾಡಿದ ಟ್ರೈಲರ್ ಅತ್ಯಧಿಕ ಸಂಖ್ಯೆಯಲ್ಲಿ ವೀಕ್ಷಣೆಯಾಗಿದೆ. ನಿರ್ದೇಶಕ ಪ್ರಥಮ್ ಮಾತನಾಡುತ್ತಾ ಪುನೀತ್ ರಾಜ್‌ಕುಮಾರ್ ಅವರು ಪವರ್ ಸ್ಟಾರ್ ಆದರೆ, ಅಶ್ವಿನಿ ಮೇಡಂ ನಮಗೆಲ್ಲ ಪವರ್‌ಹೌಸ್ ಆಗಿದ್ದಾರೆ. ಅಣ್ಣಾವ್ರೆಂದರೆ ಅವರ ಸರಳತೆ ನೆನಪಾಗುತ್ತೆ, ಅಪ್ಪು ಎಂದರೆ ಅವರ ಸ್ಮೈಲ್ ನೆನಪಾಗುತ್ತೆ. ಅಪ್ಪು ನಮಗೆ ಪ್ರೀತಿಸುವುದು ಹೇಗೆಂದು ಹೇಳಿಕೊಟ್ಟಿದ್ದಾರೆ. ಇದೊಂದು ಕಂಪ್ಲೀಟ್ ಹಾರರ್, ಕಾಮಿಡಿ, ಆಕ್ಷನ್ ಚಿತ್ರ ಎಂದು ಹೇಳಿದರು. ನಿರ್ಮಾಪಕ ಒಡೆಯರ್ ಮಾತನಾಡಿ, ಪ್ರಥಮ್ ಈ ಚಿತ್ರಕ್ಕೆ ತುಂಬಾ ಎಫರ್ಟ್ ಹಾಕಿದ್ದಾರೆ. ಪ್ರೇಕ್ಷಕರು ಚಿತ್ರ ನೋಡಿ ಹರಸುವ ಮೂಲಕ ಇನ್ನೂ ಒಳ್ಳೊಳ್ಳೇ ಚಿತ್ರಗಳನ್ನು ಮಾಡುವಂತಾಗಲಿ ಎಂದರು. ಚಿತ್ರದಲ್ಲಿ ಪ್ರಥಮ್ ಪಾತ್ರಕ್ಕೆ ವಿವಿಧ ಅವತಾರಗಳಿದ್ದು, ಆತ ತನ್ನ ಕೈಲಿ ತ್ರಿಶೂಲ ಹಿಡಿದು ಉಗ್ರರೂಪಿಯಾಗಲು ಕಾರಣವೇನು ಎಂಬುದಕ್ಕೆ ಚಿತ್ರದಲ್ಲಿ ಉತ್ತರವಿದೆ. ಹಿರಿಯ ನಟ ಸಾಯಿಕುಮಾರ್ ಇದೇ ಮೊದಲ ಬಾರಿಗೆ ಪ್ರಥಮ್ ಜೊತೆ ನಟಿಸಿದ್ದಾರೆ. ಹಿರಿಯ ನಿರ್ದೇಶಕ ಓಂಪ್ರಕಾಶ್‌ರಾವ್, ಶೋಭರಾಜ್, ಕುರಿ ಪ್ರತಾಪ್, ಶಂಕರ್ ಅಶ್ವತ್ಥ್, ಮೋಹನ್ ಜುನೇಜಾ, ರಮಾ, ಬಿರಾದಾರ್, ಎಂ.ಎಸ್. ಉಮೇಶ್ ಇತರರು ಚಿತ್ರದಲ್ಲಿದ್ದಾರೆ.



ಹೈದರಾಬಾದ್‌ನಲ್ಲಿ 'ಕಬ್ಜ' ಲಿರಿಕಲ್ ಹಾಡು ಬಿಡುಗಡೆ

ಕನ್ನಡ ಚಿತ್ರರಂಗ ಅಲ್ಲದೆ ಇಡೀ ಭಾರತೀಯ ಚಿತ್ರೋದ್ಯಮದಲ್ಲೇ ದೊಡ್ಡಮಟ್ಟದ ನಿರೀಕ್ಷೆ, ಕುತೂಹಲವನ್ನು ಹುಟ್ಟು ಹಾಕಿರುವ ಕಬ್ಜ ಮಾ.17ರಂದು ಪುನೀತ್ ಹುಟ್ಟುಹಬ್ಬದಂದು ಬಿಡುಗಡೆಯಾಗಲಿದೆ. ಕೆಜಿಎಫ್ ಚಿತ್ರವನ್ನು ಸ್ಫೂರ್ತಿಯಾಗಿ ತೆಗೆದುಕೊಂಡು ನಿರ್ದೇಶಕ ಆರ್.ಚಂದ್ರು ಅವರು ಈ ಪ್ಯಾನ್ ಇಂಡಿಯಾ ಚಿತ್ರವನ್ನು ಹೊರ ತರುತ್ತಿದ್ದಾರೆ. ಸೂಪರ್‌ಸ್ಟಾರ್ ಉಪೇಂದ್ರ ಹಾಗೂ ಕಿಚ್ಚ ಸುದೀಪ್ ಪ್ರಮುಖ ಪಾತ್ರಗಳಲ್ಲಿ ನಟಿಸಿರುವ ಈ ಚಿತ್ರದ ಪ್ರಥಮ ಲಿರಿಕಲ್ ಹಾಡು ಫೆ.4ರಂದು ಹೈದರಾಬಾದ್‌ನಲ್ಲಿ ಅದ್ದೂರಿಯಾಗಿ ಬಿಡುಗಡೆಯಾಗಲಿದೆ. ಈ ಬಗ್ಗೆ ಮೊನ್ನೆ ನಡೆದ ಪತ್ರಿಕಾಗೋಷ್ಠಿಯಲ್ಲಿ ಆರ್.ಚಂದ್ರು ಅವರೇ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಪುನೀತ್‌ರ ಸಹಕಾರವನ್ನು ನೆನೆದ ಚಂದ್ರು, ಅವರು ನಮ್ಮ ಚಿತ್ರದ ಮೇಕಿಂಗ್ ನೋಡಿ ಮೆಚ್ಚಿಕೊಂಡು ಅದ್ಭುತವಾಗಿ ಮಾಡಿದ್ದೀರಿ, ನಾನು ನಿಮ್ಮ ಜೊತೆ ಇರುತ್ತೇನೆ ಎಂದು ಹೇಳಿದ್ದನ್ನು ವಿವರಿಸಿದ ಚಂದ್ರು, ತಮ್ಮ ಕಬ್ಜ ಚಿತ್ರವನ್ನು ಪುನೀತ್ ರಾಜಕುಮಾರ್ ಅವರಿಗೆ ಅರ್ಪಿಸುವುದಾಗಿ ಹೇಳಿದ್ದಾರೆ. ಅಪ್ಪು ಸರ್, ಸುಮಾರು ಸಲ ನಮ್ಮ ಸೆಟ್‌ಗೆ ಬಂದು ಶೂಟಿಂಗ್ ವೀಕ್ಷಿಸಿ, ಏನು, ಇಷ್ಟೊಂದು ಖರ್ಚು ಮಾಡ್ತಾ ಇದ್ದೀರಾ, ಹೇಗೆ ರಿಕವರಿ ಮಾಡ್ತೀರಾ, ಹುಷಾರಾಗಿರಿ, ಇಷ್ಟು ಜನ, ಇಂಥ ಅದ್ಭುತ ಸೆಟ್ ಎಂದು ತುಂಬಾ ಎಕ್ಸೈಟ್ ಆಗಿ ಮಾತನಾಡುತ್ತಿದ್ದರು ಎಂದು ಹೇಳಿದರು. ಮುಂದುವರಿದು ಮಾತನಾಡಿದ ಚಂದ್ರು, ಅಪ್ಪು ಸರ್, ನಿಧನರಾಗುವ ವಾರದ ಹಿಂದಷ್ಟೇ ನನಗೆ ಕರೆ ಮಾಡಿ ಚಿತ್ರದ ಮೋಷನ್ ಪೋಸ್ಟರ್ ಬಗ್ಗೆ ಮೆಚ್ಚಿ ಮಾತಾಡಿದ್ದರು, ಅಷ್ಟೇ ಅಲ್ಲದೆ ತಲೆ ಕೆಡಿಸಿಕೊಳ್ಳಬೇಡ, ಪ್ರಮೋಷನ್ ಸಮಯದಲ್ಲಿ ನನಗೆ ಹೇಳಿ, ನಾನು ನಿಮ್ಮ ಜೊತೆ ಇರುತ್ತೇನೆ, ಟೀಸರನ್ನು ನಾನೇ ಬಿಡುಗಡೆ ಮಾಡುತ್ತೇನೆ ಎಂದಿದ್ದರು, ಆದರೆ ಈ ದಿನ ಅವರಿಲ್ಲ, ನನ್ನ ಈ ಚಿತ್ರವನ್ನು ಅವರಿಗೆ ಅರ್ಪಿಸುತ್ತಿದ್ದೇನೆ, ಅವರು ನಮ್ಮ ಚಿತ್ರದಲ್ಲಿ ನಟಿಸದಿದ್ದರೂ ಚಿತ್ರದ ಕ್ವಾಲಿಟಿ ಹಾಗೂ ಕಂಟೆಂಟ್ ನೋಡಿ ಮೆಚ್ಚಿಕೊಂಡು ಬೆನ್ನುತಟ್ಟಿದ್ದರು. ಅವರ ರೀತಿ ನನ್ನನ್ನು ಈವರೆಗೆ ಯಾರೂ ಸಹ ಹುರಿದುಂಬಿಸಿಲ್ಲ, ಹೀಗಾಗಿ ಅವರ ಹುಟ್ಟುಹಬ್ಬದ ದಿನವೇ ಚಿತ್ರವನ್ನು ಬಿಡುಗಡೆ ಮಾಡುತ್ತಿದ್ದು, ಅದರ ಬಗ್ಗೆ ನನಗೆ ಹೆಮ್ಮೆಯಿದೆ ಎಂದು ಚಂದ್ರು ತಿಳಿಸಿದರು.

ಬೋರೇಗೌಡನಿಗೆ ಹಾಡಿದ ಮೆಹಬೂಬ್ ಸಾಬ್-ಅನನ್ಯಭಟ್



ಗ್ರಾಮೀಣ ಸೊಗಡಿನ ಕಥಾಹಂದರ ಹೊಂದಿರುವ ದೊಡ್ಡಹಟ್ಟಿ ಬೋರೇಗೌಡ ಚಿತ್ರದ ಟ್ರೇಲರ್ ಅತೀ ಹೆಚ್ಚು ವೀಕ್ಷಣೆಯಾಗುವ ಮೂಲಕ ಸಾಕಷ್ಟು ಕುತೂಹಲ ಹುಟ್ಟು ಹಾಕಿದೆ. ಕಳೆದ ಬಾರಿ ನಡೆದ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರಥಮ ಅತ್ಯುತ್ತಮ ಚಿತ್ರವಾಗಿ ಹೊರಹೊಮ್ಮಿರುವ ಈ ಚಿತ್ರದಲ್ಲಿ ಸರಿಗಮಪ ಖ್ಯಾತಿಯ ಮೆಹಬೂಬ್ ಸಾಬ್ ಹಾಡಿದ ಹಾಡೊಂದು ಮೈಸೂರಿನಲ್ಲಿ ಬಿಡುಗಡೆಯಾಗಿದೆ.

ತಿಥಿ ಸಿನಿಮಾದ ಬಳಿಕ ಅಪ್ಪಟ ಗ್ರಾಮೀಣ ಪ್ರತಿಭೆಗಳನ್ನೇ ಇಟ್ಟುಕೊಂಡು ನಿರ್ಮಿಸಲಾಗಿರುವ ಮತ್ತೊಂದು ಚಿತ್ರ ಇದಾಗಿದೆ. ಈ ಚಿತ್ರದಲ್ಲಿ ಗಾಯಕಿ ಅನನ್ಯಭಟ್ ಕೂಡ ಹಾಡಿದ್ದಾರೆ. ಸದ್ಯದಲ್ಲೇ ಈ ಹಾಡನ್ನು ಬಿಡುಗಡೆಗೊಳಿಸಲು ಚಿತ್ರ ತಂಡ ಸಜ್ಜಾಗಿದೆ, ಇದೇ ತಿಂಗಳಲ್ಲಿ ದೊಡ್ಡಹಟ್ಟಿ ಬೋರೇಗೌಡ ಚಿತ್ರವನ್ನು ಬಿಡುಗಡೆ ಮಾಡಲು ಸಜ್ಜಾಗಿರುವ ಚಿತ್ರತಂಡ ಈಗಾಗಲೇ ವಿಭಿನ್ನ ಟೀಸರ್ ಮೂಲಕ ಜನಮನ ಗೆದ್ದಿದೆ.

ಹಲವು ವಿಶೇಷತೆಗಳಿಂದ ಕೂಡಿರುವ ಈ ಸಿನಿಮಾದಲ್ಲಿ ಗ್ರಾಮೀಣ ಭಾಗದಲ್ಲಿ ಮುಗ್ಧ ಜನ ಒಂದು ಸೂರು ಕಟ್ಟಿಕೊಳ್ಳಲು ಯಾವ ರೀತಿ ಕಷ್ಟಗಳನ್ನು ಎದುರಿಸುತ್ತಾರೆ ಎಂಬುದನ್ನು ನೈಜತೆಗೆ ಹತ್ತಿರವಾದ ಘಟನೆಗಳೊಂದಿಗೆ ನಿರೂಪಿಸುವ ಪ್ರಯತ್ನವನ್ನು ನಿರ್ದೇಶಕ ರಘು ಮಾಡಿದ್ದಾರೆ, ನೋಡುಗರಿಗೆ ಒಂದು ಹೊಸ ಅನುಭವವನ್ನು ನೀಡುವ ಮೂಲಕ ಈ ಚಿತ್ರ ಇಷ್ಟವಾಗುತ್ತದೆ ಎಂದು ಚಿತ್ರತಂಡ ಹೇಳಿಕೊಂಡಿದೆ. ರಾಜರಾಜೇಶ್ವರಿ ಕಂಬೈನ್ಸ್ ಲಾಂಛನದಲ್ಲಿ ಬಿ.ಸಿ. ಶಶಿಕುಮಾರ್ ಹಾಗೂ ಕೆ.ಎಂ. ಲೋಕೇಶ್ ನಿರ್ಮಾಣದ ಈ ಚಿತ್ರಕ್ಕೆ 'ತರ್ಲೆವಿಲೇಜ್', 'ಪರಸಂಗ' ಖ್ಯಾತಿಯ ಕೆ.ಎಂ.ರಘು ಕಥೆ. ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ಮೈಸೂರು ಸುತ್ತಮುತ್ತಲ ಹಲವಾರು ಗ್ರಾಮೀಣ ಪ್ರತಿಭೆಗಳಾದ ಶಿವಣ್ಣ ಬೀರಿಹುಂಡಿ, ಗೀತಾ, ಲಾವಣ್ಯ, ಕಲಾರತಿ ಮಹದೇವ್, ಕಾತ್ಯಾಯಿನಿ, ಯೋಗೇಶ್ ಸೇರಿದಂತೆ ಸಾಕಷ್ಟು ಕಲಾವಿದರು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. ವೀನಸ್ ನಾಗರಾಜ್ ಅವರ ಛಾಯಾಗ್ರಹಣವಿರುವ ಈ ಚಿತ್ರಕ್ಕೆ ಹರ್ಷವರ್ಧನ ರಾಜ್ ಸಂಗೀತವಿದೆ.

ಶ್ರೀ ರಾಘವೇಂದ್ರ ಚಿತ್ರವಾಣಿ ಪ್ರಶಸ್ತಿ ಸಮಾರಂಭ



ಕಳೆದ ನಾಲ್ಕೂವರೆ ದಶಕಗಳಿಂದ ಕನ್ನಡ ಚಿತ್ರರಂಗ ಮತ್ತು ಪತ್ರಕರ್ತರ ನಡುವೆ ಸೇತುವೆಯಂತೆ ಕೆಲಸ ಮಾಡುತ್ತಾ ಬಂದಿರುವ ರಾಘವೇಂದ್ರ ಚಿತ್ರವಾಣಿ ಸಂಸ್ಥೆಯ ವಾರ್ಷಿಕೋತ್ಸವ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ಡಿ.ವಿ.ಸುಧೀಂದ್ರರ ಹುಟ್ಟುಹಬ್ಬದ ದಿನವಾದ ಜ.25ರಂದು ನೆರವೇರಿತು. ಈ ಸಂದರ್ಭದಲ್ಲಿ 'ಕೆಜಿಎಫ್', 'ಕಾಂತಾರಾ' ನಿರ್ಮಾಪಕ ವಿಜಯ ಕಿರಗಂದೂರು, 'ಗಂಧದಗುಡಿ' ನಿರ್ಮಾಪಕಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಹಾಗೂ ಶ್ರೀಮತಿ ತಾರಾ ಅವರಿಗೆ ವಿಶೇಷ ಪ್ರಶಸ್ತಿ ನೀಡಲಾಯಿತು. ನಿರ್ಮಾಪಕ ವಿಜಯ ಕಿರಗಂದೂರು ಅವರ ಅನುಪಸ್ಥಿತಿಯಲ್ಲಿ ಅವರ ಪತ್ನಿ ಶೈಲಜಾ ವಿಜಯಕುಮಾರ್ ಪ್ರಶಸ್ತಿ ಸ್ವೀಕರಿಸಿದರು. ಕೋವಿಡ್ ಕಾರಣದಿಂದ ಕಳೆದ ಬಾರಿ ಪ್ರಶಸ್ತಿ ಸಮಾರಂಭ ಆಯೋಜಿಸಲಾಗಿರಲಿಲ್ಲ. ಹಾಗಾಗಿ, ಈ ವರ್ಷ ಎರಡು ವರ್ಷಗಳ ಪ್ರಶಸ್ತಿಯನ್ನು ಒಟ್ಟಿಗೇ ನೀಡಲಾಯಿತು, ಸಂಸ್ಥೆಯ 47ನೇ ವಾರ್ಷಿಕೋತ್ಸವ ಹಾಗೂ 21 ಮತ್ತು 22ನೇ ಪ್ರಶಸ್ತಿ ವಿತರಣಾ ಕಾರ್ಯಕ್ರಮ ನಡೆಯಿತು. ಈ ಸಮಯದಲ್ಲಿ ಚೇಂಬರ್ ಅಧ್ಯಕ್ಷ ಭಾ.ಮಾ. ಹರೀಶ್, ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್ ಮುಖ್ಯ ಅತಿಥಿಗಳಾಗಿದ್ದರು.

ರಾಜ್‌ಕುಮಾರ್ ಪ್ರಶಸ್ತಿ ಸ್ವೀಕರಿಸಿದ ಗಾಯಕ ರಾಜೇಶ್ ಕೃಷ್ಣನ್ ಮಾತನಾಡಿ 'ಮಣ್ಣಿನ ದೋಣಿ' ಚಿತ್ರದಿಂದ ಅಣ್ಣನವರಿಗೆ ಟ್ರ್ಯಾಕ್ ಹಾಡುತ್ತಾ ಬಂದೆ. ಇಂದು ಅವರ ಹೆಸರಿನಲ್ಲೇ ಪ್ರಶಸ್ತಿ ಪಡೆಯುತ್ತಿರುವುದಕ್ಕೆ ಖುಷಿಯಾಗ್ತಿದೆ ಎಂದರು. ನಟ, ನಿರ್ಮಾಪಕ ಕುಮಾರ್ ಗೋವಿಂದ್ ಅವರು ತಮಗೆ ಬಂದ ರಾಘವೇಂದ್ರ ಚಿತ್ರವಾಣಿ ಪ್ರಶಸ್ತಿಯನ್ನು ತಮ್ಮ ಸಹೋದರನಿಗೆ ಕೊಡಿಸುವ ಮೂಲಕ ನನ್ನ ಎಲ್ಲಾ ಸಾಧನೆಗಳ ಹಿಂದೆ ತಮ್ಮನ ಶ್ರಮ ಇದೆ ಎಂದರು. ನಂತರ ತಮ್ಮ ಸಾಧನೆಯ ಹಾದಿ ಬಿಚ್ಚಿಡುತ್ತಾ ನನಗೆ 'ಶ್..' ಚಿತ್ರ ಹೆಸರನ್ನು ತಂದು ಕೊಟ್ಟಿತು. ಆದರೆ, ಲಾಭ ವಿತರಕರಿಗೆ ಹೋಯಿತು, ಇನ್ನು ಅನುರಾಗ ಸಂಗಮ ಯಶಸ್ಸು, ಹಣ ಎರಡನ್ನೂ ತಂದುಕೊಟ್ಟಿತು ಎಂದು ನೆನಪು ಮಾಡಿಕೊಂಡರು.

ಭೋಜನ ಪ್ರಿಯರಿಗಾಗಿ ಬೊಂಬಾಟ್ ಭೋಜನ-3

ನಟನಾಗಿ ಬಂದು ನಂತರ 'ಪಾಪ ಪಾಂಡು', 'ಸಿಲ್ಲಿ ಲಲ್ಲಿ' ಸೇರಿದಂತೆ ಅನೇಕ ಕಾಮಿಡಿ ಸೀರಿಯಲ್‌ಗಳನ್ನು ನಿರ್ಮಿಸಿದ ಸಿಹಿಕಹಿ ಚಂದ್ರು, ಬೊಂಬಾಟ್ ಭೋಜನ ಎಂಬ ವಿನೂತನ ಅಡುಗೆ ಕಾರ್ಯಕ್ರಮ ಆರಂಭಿಸಿದರು. ಆ ಮೂಲಕ ಹೊಸ ಬಗೆಯ ಅಡುಗೆಯನ್ನು ಭೋಜನ ಪ್ರಿಯರಿಗಾಗಿ ಪರಿಚಯಿಸಿದರು. ಈಗಾಗಲೇ ಸುವರ್ಣ ವಾಹಿನಿಯಲ್ಲಿ ಈ ಕಾರ್ಯಕ್ರಮದ ಎರಡು ಸೀಸನ್‌ಗಳನ್ನು ಪೂರ್ಣಗೊಳಿಸಿರುವ ಚಂದ್ರು, ಬಹಳ ದಿನಗಳ ನಂತರ ಮತ್ತೊಮ್ಮೆ ಬೊಂಬಾಟ್ ಭೋಜನ ಕಾರ್ಯಕ್ರಮದ ಮೂರನೇ ಸೀಸನ್ನು ಆರಂಭಿಸಿದ್ದಾರೆ. ಇದು ಹಿಂದಿನ ಎರಡು ಸೀಜನ್‌ಗಳಿಗಿಂತ ಕೊಂಚ ವಿಭಿನ್ನವಾಗಿದೆ. ಈ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಲು ಕರೆಯಲಾದ ಪತ್ರಿಕಾಗೋಷ್ಠಿಯಲ್ಲಿ ಸಿಹಿಕಹಿ ಚಂದ್ರು ಈ ಕಾರ್ಯಕ್ರಮದ ವಿಶೇಷತೆಗಳ ಬಗ್ಗೆ ಮಾತನಾಡಿದರು. ಸುವರ್ಣ ವಾಹಿನಿಯಲ್ಲಿ 2019ರಲ್ಲಿ ಮೊದಲ ಸೀಸನ್ ಶುರು ಮಾಡಿದ್ದೆ. ಎರಡನೇ ಸೀಸನ್ ಕೂಡ ಯಶಸ್ವಿಯಾಗಿತ್ತು. ಈಗ ಮೂರನೇ ಸೀಸನ್ ಸ್ವಲ್ಪ ವಿಶೇಷವಾಗಿ ತಂದಿದ್ದೇನೆ. ಇಲ್ಲಿ ಬಯಲೂಟ, ಸವಿಯೂಟ, ಮನೆ ಊಟ, ಅಂದ ಚಂದ, ಅಂಗೈಯಲ್ಲಿ ಆರೋಗ್ಯ, ಟಿಪ್ ಟಿಪ್ ಟಿಪ್ ಹಾಗೂ ಅತಿಥಿ ದೇವೋಭವ ಹೀಗೆ ಹಲವಾರು ವಿಶೇಷ ಸೆಗ್ಮೆಂಟ್‌ಗಳು ಬರಲಿದೆ. ಇನ್ನೂ ವಿಶೇಷ ವೆಂದರೆ ಆರೋಗ್ಯದ ಕುರಿತು ಮನೆಮದ್ದುಗಳ ಟಿಪ್ಸ್‌ನ್ನು ಡಾ॥ಗೌರಿ ಸುಬ್ರಹ್ಮಣ್ಯ ತಿಳಿಸುತ್ತಾರೆ. ಕಾರ್ಯಕ್ರಮದ ಕೊನೆಯಲ್ಲಿ ದುಂಡಿರಾಜ್ ಅವರ ಹನಿಗವನ ಒಂದನ್ನು ಹೇಳುತ್ತೇನೆ. ಸೋಮವಾರದಿಂದ ಶನಿವಾರದವರೆಗೆ ಮ.12ಗಂಟೆಗೆ ಬೊಂಬಾಟ್ ಭೋಜನ ಸೀಸನ್-3 ಪ್ರಸಾರವಾಗಲಿದೆ.


ತನುಷ್ ಈಗ 'ನಟ್ವರ್‌ಲಾಲ್'

ಈ ಹಿಂದೆ "ನಂಜುಂಡಿ ಕಲ್ಯಾಣ", "ಮಡಮಕ್ಕಿ" ಚಿತ್ರಗಳಲ್ಲಿ ಅಭಿನಯಿಸಿದ್ದ ನಟ, ನಿರ್ಮಾಪಕ ತನುಷ್ ಶಿವಣ್ಣ ಈಗ "ನಟ್ವರ್‌ಲಾಲ್" ಚಿತ್ರದ ಮೂಲಕ ಮತ್ತೆ ಬಂದಿದ್ದಾರೆ. ವಿ.ಲವ ಅವರ ಕಥೆ, ಚಿತ್ರಕಥೆ ಹಾಗೂ ನಿರ್ದೇಶನವಿರುವ ಈ ಚಿತ್ರದ ಟೀಸರ್ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ಕುಣಿಗಲ್ ಶಾಸಕ ಡಾ. ರಂಗನಾಥ್, ವಾಣಿಜ್ಯ ಮಂಡಳಿ ಅಧ್ಯಕ್ಷ ಭಾ.ಮಾ. ಹರೀಶ್ ಸಮಾರಂಭದಲ್ಲಿ ಹಾಜರಿದ್ದು, ತಂಡಕ್ಕೆ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ನಿರ್ದೇಶಕ ಲವ ಮಾತನಾಡಿ, 'ನಟ್ವರ್‌ಲಾಲ್' ಕನ್ನಡ ಸೇರಿದಂತೆ 5 ಭಾಷೆಗಳಲ್ಲಿ ನಿರ್ಮಾಣವಾಗಿದೆ. ಇದೊಂದು ಕ್ರೈಂ, ಥ್ರಿಲ್ಲರ್ ಹಾಗೂ ಆಕ್ಷನ್ ಜಾನರ್ ಚಿತ್ರವಾಗಿದ್ದು, ನಮ್ಮ ಸುತ್ತಮುತ್ತ ನಡೆಯುವ ನೈಜ ಘಟನೆಗಳನ್ನೇ ಇಟ್ಟುಕೊಂಡೆ ಈ ಕಥೆ ಮಾಡಿದ್ದೇನೆ. ಬೆಂಗಳೂರು, ಮೈಸೂರು, ಸಕಲೇಶಪುರ, ಮಂಗಳೂರು, ಸುತ್ತಮುತ್ತ 95 ದಿನಗಳ ಕಾಲ ಚಿತ್ರೀಕರಿಸಿದ್ದೇವೆ ಎಂದು ಹೇಳಿದರು. ನಿರ್ದೇಶಕ ಲವ ಬಂದು ಈ ಕಥೆ ಹೇಳಿದಾಗ, ಕಂಟೆಂಟ್ ನನಗೆ ತುಂಬಾ ಇಂಪ್ರೆಸ್ ಆಯ್ತು. ಇಡೀ ತಂಡದ ಸಹಕಾರದಿಂದ ಒಂದೊಳ್ಳೆ ಸಿನಿಮಾ ಮಾಡಿದ್ದೇವೆ. ಧರ್ಮವಿಶ್ ಅವರ ಸಾರಥ್ಯದಲ್ಲಿ ರೀ ರೆಕಾರ್ಡಿಂಗ್ ಅದ್ಭುತವಾಗಿ ಬಂದಿದೆ. ಛಾಯಾಗ್ರಾಹಕ ವಿಲಿಯಂ ಡೇವಿಡ್ ಅವರ ಕ್ಯಾಮರಾ ವರ್ಕ್ ಸುಂದರವಾಗಿದೆ. ನಿರ್ದೇಶಕ ಲವ ಅವರಂತೂ ಬ್ಯೂಟಿಫುಲ್ ಫಿಲಂ ಮೇಕರ್. ತಾನು ಅಂದುಕೊಂಡದ್ದು ಸಿಗುವವರೆಗೂ ಬಿಡುವವರಲ್ಲ ಎಂದು ನಾಯಕ ತನುಷ್ ಶಿವಣ್ಣ ಹೇಳಿದರು. ಸಂಗೀತ ನಿರ್ದೇಶಕ ಧರ್ಮವಿಶ್ ಮಾತನಾಡಿ, ಚಿತ್ರದಲ್ಲಿ ಸಂದರ್ಭಕ್ಕೆ ತಕ್ಕಂತೆ ಕೇವಲ 2 ಹಾಡುಗಳಿವೆ ಎಂದು ಹೇಳಿದರು. ನಾಯಕಿ ಸೋನಾಲ್ ಮೊಂತೆರೊ ಮಾತನಾಡಿ ಇದೇ ಮೊದಲ ಬಾರಿಗೆ ನಾನು ಸೋಷಿಯಲ್ ವರ್ಕರ್ ಪಾತ್ರ ಮಾಡಿದ್ದೇನೆ.

ಸಿನಿಪದಬಂಧ-459

ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ________

ವಿಳಾಸ ________

ದೂರವಾಣಿ ಸಂಖ್ಯೆ ________

ಎಡದಿಂದ ಬಲಕ್ಕೆ

1.ರಾಕಿಂಗ್ ಸ್ಟಾರ್‌ನ ಚಿತ್ತ ಎಳೆಯದು !? 6
4.ರಮೇಶ್ – ಚಾರುಲತಾ ಅಭಿನಯಕ್ಕೆ ಎ. ಬಾಲಕೃಷ್ಣ ನಿರ್ದೇಶಕ 4
7.ಸುಮಂತ್ – ರುಚಿತಾ ಪ್ರಸಾದ್ ಬಿಡಿಸಿದ "ಚಿತ್ತಾರ" 3
9.ಈ ನಟಿಯ ಹೆಸರಿನ ಕೊನೆಯಲ್ಲಿ ವಿದ್ವಾಂಸ ಸೇರಿಕೊಂಡಿದ್ದಾನೆ 6
12.ಸುನಿಲ್ ಜೊತೆಗೂಡಿ ನೇತೃತ್ವ ವಹಿಸಿದವರು ಶಹರಿನಲ್ಲಿ ಪ್ರತ್ಯಕ್ಷ ! 9
14.ಡೈಲಾಗ್ ಕಿಂಗ್ ಪಠಿಸಿದ ಮಂತ್ರ 6
16.ಆಸೆಯ ಬಲೆ ಎಣೆದ ನಟಿ 3
19. 'ಸ್ವಾಭಿಮಾನ'ದ ಹಮ್ಮೀರ ತಂದ ಸೀರೆ 4
20.ತ್ರಿಲೋಕ ಸಂಚಾರಿಯ ಗೆಲುವು 6

ಮೇಲಿನಿಂದ ಕೆಳಕ್ಕೆ

1.ನವ ದಂಪತಿಗಳು ಸಂಧಿಸಿದ ಇರುಳು 5
2.ನಕಾಶೆ ನೋಡಿದವನಿಗೆ ಏರಿದ ಅಮಲು 2
3.ಹೃದಯವಂತನ ಹೀರೋಯಿನ್ ಬೆತ್ತಲೆ ಎನ್ನಬೇಡಿ 2
5.ದಿಕ್ಕಿಲ್ಲದ "ಅನಾಥ" 3
6.ಹೆಣ್ಣು – ಗಂಡು ರಾಶಿಯಲ್ಲಿ ಮಿಲನಗೊಂಡಿದ್ದಾರೆ 3
8.ಕೋಮಲ್ ಕುಮಾರ್ ಮಂತ್ರ ಪಠಿಸಲು ಪಾರೂಲ್ ಯಾದವ್ ನಾಯಕಿ 6
10.ಶುಭ ನುಡಿಯುವ ಪಕ್ಷಿಗೂ ಸ್ವತಂತ್ರ್ಯವಿಲ್ಲದಾಗಿದೆ 6
11.ಉಡುಗೊರೆ ನೀಡಿದ ತಾಯಿಯ ಮನೆ 3
12.ನಯ ವಂಚಕ ಪ್ರಾಣಿ ಬಾರಿಸಿದ ವಾದ್ಯ 3
13.ವೈಕುಂಠದ ದ್ವಾರಪಾಲಕರು ಗೆಲುವು ಕಂಡಿದ್ದಾರೆ 5
15.ನೀರಿನಲ್ಲಿ ಹುಟ್ಟಿದ ಪುಷ್ಪ 3
16.ನಯವಿರುವ ಈಕೆ ಇಲ್ಲಿ ಶಿರೊಡ್ಕರ್ ಕಳೆದು ಕೊಂಡಿದ್ದಾಳೆ 3
17. _ _ ಸಾಗರ 2
18.ಕವಿತೆ ಬರೆದವನು 2

ವಿಜೇತರು: ಟಿ.ಸಿ.ಫಣಿರಾಜ್, ನಂ.150, ಸಿದ್ದಲಿಂಗೇಶ್ವರ ನಗರ, ಬೋಗಾದಿ 2ನೇ ಹಂತ (ಉತ್ತರ), ಮೈಸೂರು 570026.

ಸಿನಿ ಪದಬಂಧ 458ರ ಸರಿ ಉತ್ತರ

ಚಿ	ನ್ನ	ನೀ	ನ	ಗು	ತಿ	ರು	■	ಶು	ಭಾ	■
■	■	ಲಾ	■	ಣ	■	■	■	ಕ್ರ	■	ನೆಂ
ಉಂ	■	■	■	ಶಿಂ	■	ಎಂ	ಟೆ	ದೆ	ಭಂ	ಟ
ಡು	ಯೆ	ಟ್	ಸಾಂ	ಗ್	■	ಫೈ	■	ಸೆ	■	ರೋ
ಹೋ	■	■	■	■	ಫೇ	ರ್	■	■	■	ಗಂ
ದ	ಳ	ವಾ	ಯಿ	■	■	■	ಬ್ರ	ಹ್ಮ	ಗಂ	ಟು
ಕೊಂ	■	■	■	ಭೂ	ತ	■	■	■	■	ಕ
ಡು	■	ಸ್ನೇ	■	ದಾ	■	ಕೌ	ಬಾ	ಯ್	ಕು	ಳ್ಳ
ಹೋ	ಮ	ಹ	ವ	ನ	■	ಟುಂ	■	■	■	ರೋ
ದ	■	ಲೋ	■	■	■	ಬಿ	■	ನೀ	■	■
■	ಅಂ	ಕ	■	ಮ	ದ	ಕ	ರಿ	ನಾ	ಯ	ಕ

ರಸಗೊಬ್ಬರ ಮಾರಾಟಗಾರರಿಂದ ಅಸಮರ್ಪಕ ಗೊಬ್ಬರ ವಿತರಣೆ ಖಂಡಿಸಿ

ತಿ.ನರಸೀಪುರದಲ್ಲಿ ರೈತ ಸಂಘದಿಂದ ಪ್ರತಿಭಟನೆ



ತಿ.ನರಸೀಪುರ, ಫೆ2– ತಾಲೂಕಿನ ತಲಕಾಡು ಹೋಬಳಿ ವ್ಯಾಪ್ತಿಯ ರಸಗೊಬ್ಬರ ಮಾರಾಟಗಾರರಿಂದ ರೈತರಿಗೆ ಅಸಮರ್ಪಕ ಗೊಬ್ಬರ ವಿತರಣೆ ಖಂಡಿಸಿ ರೈತ ಸಂಘದ ಮುಖಂಡರು ಪಟ್ಟಣದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ಪಟ್ಟಣದ ಕೃಷಿ ಇಲಾಖೆ ಕಚೇರಿ ಎದುರು ಜಮಾಯಿಸಿದ ರಾಜ್ಯ ರೈತ ಸಂಘದ ತಾಲೂಕು ಘಟಕದ ಮುಖಂಡರು ಮೊದಲು ಸಹಾಯಕ ಕೃಷಿ ಅಧಿಕಾರಿ ಸುಹಾಸಿನಿ ಅವರೊಂದಿಗೆ ಚರ್ಚಿಸಿ, ಪ್ರತಿಭಟನೆ ನಿರ್ಧಾರ ಕೈಗೊಂಡರು. ಬಳಿಕ ಕಚೇರಿ ಎದುರು ಧರಣಿ ಕುಳಿತ ಪ್ರತಿಭಟನಾಕಾರರು, ಕೃಷಿ ಅಧಿಕಾರಿ ಸೇರಿದಂತೆ ರಸಗೊಬ್ಬರ ಮಾರಾಟಗಾರರ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಮುಖಂಡರು, ತಲಕಾಡು ಹೋಬಳಿಯಲ್ಲಿ ನಾಲ್ಕೈದು ರಸಗೊಬ್ಬರ ಮಾರಾಟ ಕೇಂದ್ರಗಳಿದ್ದು, ಇಲ್ಲಿನ ಸಿದ್ದಲಿಂಗೇಶ್ವರ ಟ್ರೇಡರ್ಸ್ ಮಾಲೀಕ ಇತರೆ ಮಾರಾಟ ಕೇಂದ್ರಗಳಿಗೆ ರಸಗೊಬ್ಬರ ಸರಬರಾಜು ಮಾಡುತ್ತಿದ್ದಾರೆ. ಮುಖ್ಯ ಡೀಲರ್ ತನ್ನ ಅಂಗಡಿಯಲ್ಲಿ ರೈತರಿಗೆ ಸಮರ್ಪಕವಾಗಿ ರಸಗೊಬ್ಬರ ವಿತರಿಸದೇ ಉಡಾಫೆಯಿಂದ ವರ್ತಿಸುತ್ತಿದ್ದಾನೆ. ರೈತರು ರಸಗೊಬ್ಬರ ಕೊಡುವಂತೆ ಮನವಿ ಮಾಡಿದರೂ, ಒಬ್ಬ ರೈತನಿಗೆ ಒಂದೇ ಬಾರಿ ಗೊಬ್ಬರ ನೀಡಲಾಗುತ್ತಿದೆ. ಕೋಟಾ ಮುಗಿದ ನಂತರ ಗೊಬ್ಬರ ಖರೀದಿಸಬೇಕಾದರೆ ಕಾಂಪ್ಲೆಕ್ಸ್, ಫ್ಯಾಕ್ಟಂ ಫಾಸ್ ಸೇರಿದಂತೆ ಲಿಂಕ್ ಗೊಬ್ಬರಗಳನ್ನು ಖರೀದಿಸಿದರೆ ಮಾತ್ರ ಹೆಚ್ಚುವರಿ ಗೊಬ್ಬರ ನೀಡುತ್ತೇನೆ ಎನ್ನುತ್ತಾನೆ. ಹೀಗಾಗಿ ರೈತರಿಗೆ ಸಮರ್ಪಕವಾಗಿ ಗೊಬ್ಬರ ವಿತರಿಸದೇ ತೊಂದರೆ ನೀಡುತ್ತಿರುವ ಈತನ ಅಂಗಡಿ ಪರವಾನಗಿ ರದ್ದು ಪಡಿಸುವಂತೆ ಒತ್ತಾಯಿಸಿದರು.

ಸಂಘಟನೆ ಅಧ್ಯಕ್ಷ ಕರೋಹಟ್ಟಿ ಕುಮಾರಸ್ವಾಮಿ ಮಾತನಾಡಿ, ಮುಖ್ಯ ಡೀಲರ್ ವಿರುದ್ಧ ಕೃಷಿ ಅಧಿಕಾರಿಗೆ ದೂರು ನೀಡಿದ್ದು, ಅವರ ಪರಿಶೀಲನೆ ನಂತರವೂ ಆತ ತನ್ನ ಚಾಳಿ ಮುಂದುವರೆಸಿದ್ದಾನೆ. ಗೊಬ್ಬರ ಕೇಳಲು ಹೋಗುವ ರೈತರಿಗೆ ಧಮ್ಕಿ ಹಾಕುತ್ತಾನೆ. ಹಾಗಾಗಿ ಈತನ ಅಂಗಡಿ ಲೈಸೆನ್ಸ್ ರದ್ದುಪಡಿಸಿ ರೈತರಿಗೆ ಬೇಕಾಗುವ ರಸಗೊಬ್ಬರವನ್ನು ಸಮರ್ಪಕವಾಗಿ ವಿತರಣೆ ಮಾಡಿ ರೈತರ ಹಿತ ಕಾಪಾಡುವಂತೆ ಒತ್ತಾಯಿಸಿದರು.

ರೈತ ಸಂಘಟನೆ ಹೋಬಳಿ ಅಧ್ಯಕ್ಷ ಚೆಲುವರಾಜು ಮಾತನಾಡಿ, ಬೇಕಾದಷ್ಟು ಗೊಬ್ಬರ ಕೊಡದ ರಸಗೊಬ್ಬರ ಅಂಗಡಿ ಮಾಲೀಕ ಲಿಂಕ್ ಗೊಬ್ಬರ ಖರೀದಿಸಿದರೆ ಮಾತ್ರ ಹೆಚ್ಚುವರಿ ಗೊಬ್ಬರ ಕೊಡುವ ಮೂಲಕ ರಸಗೊಬ್ಬರವನ್ನು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದಾನೆಂಬ ಸಂಶಯ ಮೂಡಿದೆ. ಎಂಆರ್‌ಪಿ ಮೇಲೆ ಯಾವುದೇ ಕಾರಣಕ್ಕೂ ಹೆಚ್ಚು ಬೆಲೆ ನೀಡುವಂತಿಲ್ಲ ಎಂಬ ನಿಯಮವಿದ್ದರೂ, ಹೆಚ್ಚಿನ ಹಣ ಪಡೆದು ರೈತರನ್ನು ವಂಚಿಸುತ್ತಿದ್ದಾನೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ಸಹ ಕಾರ್ಯದರ್ಶಿ ಅತ್ತಹಳ್ಳಿ ಶಿವನಂಜು, ಗೌರವಾಧ್ಯಕ್ಷ ಮುಡುಕನಪುರ ಮೂರ್ತಿ, ಟೌನ್ ಅಧ್ಯಕ್ಷ ಈ.ರಾಜು, ಹೋಬಳಿ ಅಧ್ಯಕ್ಷ ದಿನೇಶ್, ಅಬ್ದುಲ್ ಸಾದಿಕ್, ನರಸಿಂಹ, ವಿಜಯ ಕುಮಾರ್, ಮಹೇಂದ್ರ, ಸುಜ್ಜಲೂರು ಚಂದ್ರು ಮತ್ತಿತರರಿದ್ದರು.

ಲಿಖಿತ ದೂರು ನೀಡಿದರೆ ಕ್ರಮ!

ಪ್ರತಿಭಟನಾ ಸ್ಥಳಕ್ಕಾಗಮಿಸಿದ ಸಹಾಯಕ ಕೃಷಿ ನಿರ್ದೇಶಕಿ ಸುಹಾಸಿನಿ ಮಾತನಾಡಿ, ಇಲಾಖೆ ವಿರುದ್ಧ ಧಿಕ್ಕಾರ ಕೂಗಿದ ರೈತರ ನಡೆಗೆ ಬೇಸರ ವ್ಯಕ್ತಪಡಿಸಿದರು. ರೈತರ ಪರ ಕೆಲಸ ಮಾಡಲು ಇಲ್ಲಿಗೆ ಬಂದಿದ್ದೇನೆ. ನಿಮ್ಮ ಸಮಸ್ಯೆಗೆ ಸ್ಪಂದಿಸದಿದ್ದರೆ ಇಲಾಖೆ ಮೇಲೆ ಆರೋಪ ಮಾಡಿ. ಆದರೆ ದೂರು ಬಂದ ಗಂಟೆಯೊಳಗೆ ಸ್ಥಳ ಪರಿಶೀಲಿಸುತ್ತಿದ್ದೇನೆ. ತಲಕಾಡಿನ ರಾಘವೇಂದ್ರ ಟ್ರೇಡರ್ಸ್ ವಿರುದ್ಧ ದೂರು ಬಂದಾಗ ನೋಟೀಸ್ ಜಾರಿ ಮಾಡಿದ್ದೇನೆ. ಯಾವುದೇ ಅಂಗಡಿ ಮೇಲೆ ಆರೋಪ ಮಾಡಲು ಲಿಖಿತ ದೂರು ನೀಡಬೇಕು. ಹಾಗಾದರೆ ಕ್ರಮಕೈಗೊಳ್ಳಲು ಸಾಧ್ಯ. ಹಾಗಾಗಿ ಸಮಸ್ಯೆಗೆ ಸ್ಪಂದಿಸುತ್ತಿದ್ದರೂ ಭ್ರಷ್ಟ ಇಲಾಖೆ, ಭ್ರಷ್ಟ ಅಧಿಕಾರಿ ಎನ್ನುವುದನ್ನು ಸಹಿಸಲಾಗದು ಎಂದರು.

ಗ್ರಾಮೀಣಾಭಿವೃದ್ಧಿಗೆ ನರೇಗಾ ಯೋಜನೆ ಸಹಕಾರಿ



ಮಲ್ಕುಂಡಿ, ಫೆ.2– ಗ್ರಾಮೀಣಾಭಿವೃದ್ಧಿಗೆ ನರೇಗಾ ಯೋಜನೆ ಸಹಕಾರಿ ಎಂದು ತಾಪಂ ಇಓ ಶ್ರೀನಿವಾಸ್ ತಿಳಿಸಿದರು.

ಇಲ್ಲಿಗೆ ಸಮೀಪದ ಹಲ್ಲರೆ ಗ್ರಾಪಂನಲ್ಲಿ ನಡೆದ ನರೇಗಾ ದಿವಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರ ಗ್ರಾಮೀಣ ಜನತೆ ಕೂಲಿಗಾಗಿ ವಲಸೆ ಹೋಗುವುದನ್ನು ತಪ್ಪಿಸುವ ನಿಟ್ಟಿನಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಜಾರಿಗೆ ತಂದಿದ್ದು, ಪ್ರತಿಯೊಬ್ಬರು ಸದುಪಯೋಗ ಪಡಿಸಿಕೊಳ್ಳಬೇಕು ಎಂದ ಅವರು, ಸರ್ಕಾರ ಸ್ವಚ್ಛತೆಗೆ ಹೆಚ್ಚು ಒತ್ತು ನೀಡುತ್ತಿದೆ. ಹೀಗಾಗಿ ಪ್ರತಿಯೊಬ್ಬರೂ ತಮ್ಮ ಮನೆ ಮುಂದೆ ಸ್ವಚ್ಛತೆ ಕಾಪಾಡಿಕೊಳ್ಳಬೇಕು ಎಂದರು.

ಈ ವೇಳೆ ಗ್ರಾಪಂ ಅಧ್ಯಕ್ಷ ಮಹದೇವಸ್ವಾಮಿ, ಗುರು ಮಹದೇವು, ಗ್ರಾಪಂ ಸದಸ್ಯರಾದ ಲಕ್ಷ್ಮಿ, ರೆಹಮತ್, ಮುಖಂಡರಾದ ಚನ್ನನಾಯಕ, ಶಿವಬುದ್ದಿ, ಸಣ್ಣಮಾದಪ್ಪ, ಇಂಜಿನಿಯರ್ ಚಂದ್ರಕಾಂತ್, ಪಿಡಿಓ ವರದರಾಜ್ ಸೇರಿದಂತೆ ಇತರರಿದ್ದರು.

ಕೋಟೆಯಲ್ಲಿ ಮಡಿವಾಳ ಮಾಚಿದೇವರ ಜಯಂತಿ



ಹೆಚ್.ಡಿ.ಕೋಟೆ, ಫೆ.2– ಹನ್ನೊಂದನೇ ಶತಮಾನ ಸಾಮರಸ್ಯದಿಂದ ಬದುಕುವ ಯುಗವಾಗಿತ್ತು ಎಂದು ಶಾಸಕ ಅನಿಲ್ ಚಿಕ್ಕಮಾದು ಅಭಿಪ್ರಾಯಪಟ್ಟರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ತಾಲೂಕು ಆಡಳಿತದಿಂದ ನಡೆದ ಮಡಿವಾಳ ಮಾಚಿದೇವರ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಹಿಂದುಳಿದ ಸಮಾಜದಲ್ಲಿ ಹುಟ್ಟಿದ ಮಡಿವಾಳ ಮಾಚಯ್ಯ ಶಿಕ್ಷಣದಿಂದ ವಂಚಿತರಾಗಿದ್ದರು. ಆದರೂ ಅವರಲ್ಲಿದ್ದ ಭಕ್ತಿ, ಶ್ರದ್ಧೆ ಹಾಗೂ ವ್ಯಕ್ತಿತ್ವ ಮನಗಂಡ ಮಲ್ಲಿಕಾರ್ಜುನಸ್ವಾಮಿಗಳು ವೇದ ಶಾಸ್ತ್ರ ಕಲಿಸುವ ಜೊತೆಗೆ ಗುರು ದೀಕ್ಷೆ ನೀಡಿದರು. ಬಸವಣ್ಣನವರ ಭಕ್ತಿ ಕಾಯಕ ತತ್ವ ದಾಸೋಹ ಇವುಗಳನ್ನು ಕೇಳಿ ಆಕರ್ಷಿತರಾದ ಮಾಚಯ್ಯನವರು ಬಸವಕಲ್ಯಾಣಕ್ಕೆ ಬಂದು ಬಸವಣ್ಣನವರ ಜೊತೆಯಾದವರು. ಮಡಿವಾಳ ಮಾಚಯ್ಯರವರು ಸಮಾಜದಲ್ಲಿದ್ದ ಅಸಮತೋಲನ ಹೋಗಲಾಡಿಸಲು ನೂರಾರು ವಚನಗಳನ್ನು ರಚಿಸಿದ್ದಾರೆ ಎಂದರು.

ಇದೇ ಸಂದರ್ಭ ತಾಲೂಕು ಆಡಳಿತ ಭವನದಲ್ಲಿ ಮಡಿವಾಳ ಮಾಚಿದೇವರ ಜಯಂತಿ ಆಚರಿಸದ ಹಿನ್ನೆಲೆಯಲ್ಲಿ ಶಾಸಕ ಅನಿಲ್ ಚಿಕ್ಕಮಾದು ತಾಲೂಕು ದಂಡಾಧಿಕಾರಿ ಹಾಗೂ ಇತರ ಅಧಿಕಾರಿಗಳ ವಿರುದ್ಧ ನೋಟಿಸ್ ಜಾರಿ ಮಾಡುವಂತೆ ತಾಪಂ ಇಓಗೆ ಸೂಚಿಸಿದರು.

ಸರ್ಕಾರದಿಂದ ಮಡಿವಾಳ ಮಾಚಿದೇವರ ಜಯಂತಿ ಆಚರಿಸಲು ಸುತ್ತೋಲೆ ಇದ್ದರೂ, ನಿರ್ಲಕ್ಷಿಸಲಾಗಿದೆ. ಆದ್ದರಿಂದ ಅವರ ವಿರುದ್ಧ ಜಿಲ್ಲಾಧಿಕಾರಿಗಳಿಗೂ ಲಿಖಿತ ರೂಪದಲ್ಲಿ ದೂರು ನೀಡಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಪುರಸಭಾ ಸದಸ್ಯ ರಾಜು ವಿಶ್ವಕರ್ಮ, ಇಓ ರಾಜೇಶ್ ಜೆರಾಲ್ಡ್, ಸರಗೂರು ಇಓ ಸುಷ್ಮಾ, ಬಿಇಓ ಉದಯ ಕುಮಾರ್, ಎಇಓ ರಂಗಸ್ವಾಮಿ, ಅಧಿಕಾರಿಗಳಾದ ನಾರಾಯಣಸ್ವಾಮಿ, ರಾಮಸ್ವಾಮಿ, ಆಶಾ, ಶಶಿಕಲಾ, ಬೋರಯ್ಯ, ನಾಗರಾಜು, ಗೋಪಾಲಕೃಷ್ಣಮೂರ್ತಿ, ಮಡಿವಾಳ ಸಮಾಜದ ಮಹೇಶ್, ಟೈಲರ್ ರಂಗಸ್ವಾಮಿ, ರಮೇಶ್, ಪರಶಿವಮೂರ್ತಿ ಇದ್ದರು.

ಚುಂಚನಕಟ್ಟೆ ಶಾಲೆಯಲ್ಲಿ 4 ಹೆಚ್ಚುವರಿ ಕೊಠಡಿ ಉದ್ಘಾಟನೆ



ಚುಂಚನಕಟ್ಟೆ ಫೆ2– ತಾಲೂಕಿನ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದೆಂದು ಶಿಕ್ಷಣ ಕ್ಷೇತ್ರ ಅಭಿವೃದ್ಧಿಗೊಳಿಸಲಾಗಿದೆ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆ ಸರ್ಕಾರಿ ಪ್ರೌಢಶಾಲೆಯಲ್ಲಿ ನಬಾರ್ಡ್‌ನ ಆರ್‌ಡಿಐಎಫ್ ಅಡಿ 62.80 ಲಕ್ಷ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿರುವ 4 ಹೆಚ್ಚುವರಿ ಕೊಠಡಿ ಉದ್ಘಾಟಿಸಿ ಮಾತನಾಡಿದ ಅವರು, ಕ್ಷೇತ್ರದಲ್ಲಿ ಅವಶ್ಯಕತೆ ಇರುವ ಎಲ್ಲಾ ಕಡೆ ಪ್ರೌಢಶಾಲೆಗಳನ್ನು ತೆರೆಯಲಾಗಿದ್ದು, ಇಲ್ಲಿ ಶಿಕ್ಷಣ ಪಡೆಯುವ ಮಕ್ಕಳು ಸುಸಂಸ್ಕೃತರಾಗಿ ಹೊರಬಂದು ಸಮಾಜದಲ್ಲಿ ಉನ್ನತಿ ಹೊಂದಬೇಕು ಎಂದರು.

ಸಾಲಿಗ್ರಾಮ, ಕೆ.ಆರ್.ನಗರ ತಾಲೂಕಿನಲ್ಲಿ 8 ವಸತಿ ಶಾಲೆಗಳಿದ್ದು, ಪೋಷಕರು ತಮ್ಮ ಮಕ್ಕಳನ್ನು ದಾಖಲಿಸುವ ಮೂಲಕ ಗುಣಮಟ್ಟದ ಶಿಕ್ಷಣ ಕೊಡಿಸುವಂತೆ ಸಲಹೆ ನೀಡಿದರು. ಈ ವೇಳೆ 2 ಲಕ್ಷ ರೂ. ವೆಚ್ಚದ ಶಾಲಾ ಹಿಂಭಾಗದ ಕಾಂಪೌಂಡ್ ನಿರ್ಮಾಣ ಕಾಮಗಾರಿಗೆ ಶಾಸಕರು ಗುದ್ದಲಿ ಪೂಜೆ ನೆರವೇರಿಸಿದರು.

ಕಾರ್ಯಕ್ರಮದಲ್ಲಿ ಬಿಇಓ ಗಾಯತ್ರಿ, ಗ್ರಾಪಂ ಅಧ್ಯಕ್ಷೆ ಗೌರಮ್ಮ, ಎಸ್‌ಡಿಎಂಸಿ ಅಧ್ಯಕ್ಷೆ ಶಿಲ್ಪ, ಸದಸ್ಯರಾದ ಗೋವಿಂದೇಗೌಡ, ಧರ್ಮ, ಮುಖ್ಯೋಪಾಧ್ಯಾಯ ಅಂಬರೀಶ್, ಮಾಜಿ ಸದಸ್ಯ ನಾಗಣ್ಣ, ಯುವ ಜೆಡಿಎಸ್ ಅಧ್ಯಕ್ಷ ಮಧು, ಪ್ರಸನ್ನ, ಭದ್ರೇಗೌಡ, ಪಿಡಿಓ ಸುನೀಲ್, ಇಂಜಿನಿಯರ್ ಗುತ್ತಿಗೆದಾರ ನಾಗರಾಜು ಹಾಗೂ ಗ್ರಾಮಸ್ಥರು ಸಿ.ಟಿ.ಚಂದ್ರೇಗೌಡ, ಸಿ.ಜಿ.ಬಾಬು, ಮಂಜು, ಬಲರಾಮ್ ಇನ್ನಿತರರಿದ್ದರು.



ಪಿರಿಯಾಪಟ್ಟಣ ತಾಲೂಕು ಆಡಳಿತದಿಂದ ಮಡಿವಾಳ ಮಾಚಿದೇವರ ಜಯಂತಿ ಆಚರಿಸಲಾಯಿತು. ಈ ವೇಳೆ ಶಾಸಕ ಕೆ.ಮಹದೇವ್, ಇಓ ಕೃಷ್ಣಕುಮಾರ್, ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಪಶು ವೈದ್ಯಾಧಿಕಾರಿ ಡಾ.ಸೋಮಯ್ಯ, ವಲಯ ಅರಣ್ಯಾಧಿಕಾರಿ ಕಿರಣ್ ಕುಮಾರ್ ಸೇರಿದಂತೆ ಇನ್ನಿತರರಿದ್ದರು.



ಮೂಗೂರು ಸಮೀಪದ ಕನ್ನಹಳ್ಳಿ ಡೈರಿ ಅಧ್ಯಕ್ಷೆಯಾಗಿ ವಿಜಯಲಕ್ಷ್ಮಿ, ಉಪಾಧ್ಯಕ್ಷೆಯಾಗಿ ಶಾರದ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ವೇಳೆ ಚುನಾವಣಾಧಿಕಾರಿ ಪಿ.ಆರ್.ವಾಗೇಶ್, ಸಂಘದ ಕಾರ್ಯದರ್ಶಿ ಕೋಮಲ, ಶಿವಣ್ಣ, ಮಹದೇವ, ಶಿವಕುಮಾರ್, ಬಸವರಾಜು, ಪ್ರಸಾದ್, ಬಸವಣ್ಣ, ಪ್ರಮೋದ್, ನಂಜುಂಡಸ್ವಾಮಿ, ಶಾಂತರಾಜು, ಸಂಘದ ಮಹಿಳಾ ನಿರ್ದೇಶಕರು, ಗ್ರಾಮಸ್ಥರು ಉಪಸ್ಥಿತರಿದ್ದರು.

ಆಕಸ್ಮಿಕ ಬೆಂಕಿ ಹುಲ್ಲಿನ ಮೆದೆ ಭಸ್ಮ

ಹಿರೀಕ್ಯಾತನಹಳ್ಳಿ, ಫೆ.2– ಹುಲ್ಲಿನ ಮೆದೆಗೆ ಆಕಸ್ಮಿಕ ಬೆಂಕಿ ತಗುಲಿ ಸಂಪೂರ್ಣ ಭಸ್ಮವಾಗಿರುವ ಘಟನೆ ಹುಣಸೂರು ತಾಲೂಕಿನ ಹಿರೀಕ್ಯಾತನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಚಂದ್ರೇಗೌಡ ಎಂಬುವರಿಗೆ ಸೇರಿದ ಹುಲ್ಲಿನ ಮೆದೆ ಭಸ್ಮವಾಗಿರುವುದು. ಇವರು 50 ಸಾವಿರ ರೂ. ಮೌಲ್ಯದ ಭತ್ತದ ಹುಲ್ಲನ್ನು ಖರೀದಿಸಿದ್ದರು. ಅಲ್ಲದೇ ತಮ್ಮ ಜಮೀನಿನಲ್ಲಿದ್ದ ಹುಲ್ಲನ್ನು ಸಂಗ್ರಹಿಸಿ ಮೆದೆ ಹಾಕಿದ್ದರು. ಆದರೆ ಹುಲ್ಲಿನ ಮೆದೆಗೆ ಆಕಸ್ಮಿಕ ಬೆಂಕಿ ಬಿದ್ದು, ಸಂಪೂರ್ಣ ಭಸ್ಮವಾಗಿದೆ. ಇದರಿಂದ ಸಾವಿರಾರು ರೂ. ನಷ್ಟ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ.

ರಾಜ್ಯ ಬಿಜೆಪಿ ನಾಯಕರ ಆಶಯ ಈಡೇರಿಸಲು ಶ್ರಮಿಸಿ

ಕಾರ್ಯಕರ್ತರಿಗೆ ರಾಜ್ಯ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಡಾ.ಸಂದೀಪ್ ಕುಮಾರ್ ಕರೆ



ತಿ.ನರಸೀಪುರ, ಫೆ.2– ಮುಂಬರುವ ಚುನಾವಣೆಯಲ್ಲಿ 150 ಕ್ಷೇತ್ರ ಗೆಲ್ಲುವ ಗುರಿ ಹೊಂದಿರುವ ರಾಜ್ಯ ಬಿಜೆಪಿ ನಾಯಕರ ಆಶಯ ಈಡೇರಿಸಲು ಕಾರ್ಯಕರ್ತರು ಶ್ರಮಿಸಬೇಕು ಎಂದು ರಾಜ್ಯ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಡಾ.ಸಂದೀಪ್ ಕುಮಾರ್ ಕರೆ ನೀಡಿದರು.

ಪಟ್ಟಣದ ಶ್ರೀಗುಂಜಾನರಸಿಂಹಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ವಿಜಯ ಸಂಕಲ್ಪ ಅಭಿಯಾನಕ್ಕೆ ಚಾಲನೆ ನೀಡಿ ಬಿಜೆಪಿ ಸಾಧನೆಯ ಭಿತ್ತಿಪತ್ರ, ಗೋಡೆಬರಹ ಬರೆದು, ಮನೆ–ಮನೆ ಬಾಗಿಲಿಗೆ ತೆರಳಿ ಮತದಾರರಿಗೆ ಸರ್ಕಾರದ ಸಾಧನೆಗಳ ಬಗ್ಗೆ ಅರಿವು ಮೂಡಿಸಿ ಮಾತನಾಡಿದ ಅವರು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜನಪರ ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ಚುನಾವಣಾ ಪೂರ್ವ ನೀಡಿದ್ದ ಭರವಸೆ ಈಡೇರಿಸಿವೆ. ಪ.ಜಾತಿ ಮತ್ತು ಪಂಗಡದವರಿಗೆ 75 ಯೂನಿಟ್ ಉಚಿತ ವಿದ್ಯುತ್, ನೇಕಾರ ಸಮ್ಮಾನ್ ನೆರವಿನ ಮೊತ್ತವನ್ನು 2 ಸಾವಿರದಿಂದ 5 ಸಾವಿರಕ್ಕೆ ಹೆಚ್ಚಳ ಸೇರಿದಂತೆ ಪ.ಜಾತಿ ಮತ್ತು ವರ್ಗದವರಿಗೆ ಮೀಸಲಾತಿಯಲ್ಲಿ ಹೆಚ್ಚಳ ಮಾಡುವ ಮೂಲಕ ಹಿಂದುಳಿದವರ ಆಸರೆಗೆ ಸರ್ಕಾರ ನಿಂತಿದೆ. ಹಾಗಾಗಿ ಕೇಂದ್ರ ಮತ್ತು ರಾಜ್ಯದಲ್ಲಿ ಮತ್ತೆ ಬಿಜೆಪಿ ಸರ್ಕಾರವನ್ನೇ ಅಧಿಕಾರಕ್ಕೆ ತರಲು ಎಲ್ಲರೂ ಶ್ರಮಸಬೇಕೆಂದು ಕರೆ ನೀಡಿದರು.

ನಮಗೆ ಯಾವುದೇ ಪಕ್ಷ ಎದುರಾಳಿ ಅಲ್ಲ. 150 ಮಿಷನ್ ನಮ್ಮ ಗುರಿ. ಯಾವುದೇ ಪಕ್ಷದ ವ್ಯಕ್ತಿಯನ್ನು ನಾವು ಎದುರಾಳಿ ಎಂದು ಪರಿಗಣಿಸುವುದಿಲ್ಲ. ಬದಲಾಗಿ ಬಿಜೆಪಿ ಪಕ್ಷವನ್ನು ರಾಜ್ಯದಲ್ಲಿ ಅಧಿಕಾರಕ್ಕೆ ತರುವುದಷ್ಟೇ ನಮ್ಮ ಮುಖ್ಯೋದ್ದೇಯ ಎಂದರು.

ತಾಲೂಕು ಯುವ ಮೋರ್ಚಾ ಅಧ್ಯಕ್ಷ ಕುರುಬೂರು ಶಿವು ಮಾತನಾಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಸಂಜಯ್ ಶರ್ಮಾ, ಪುರಸಭೆ ಸದಸ್ಯ ಕಿರಣ್, ಬಿಜೆಪಿ ಟಿಕೆಟ್ ಆಕಾಂಕ್ಷಿ ಯಶೋಧಮ್ಮ, ತಾಲೂಕು ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಹರೀಶ್, ಮೋಹನ್, ಚೌಹಳ್ಳಿ ಸಿದ್ದರಾಜು, ಸಿ.ಬಿ.ಹುಂಡಿ ಸಿದ್ದು, ಕೆಬ್ಬೆಹುಂಡಿ ಶಿವಕುಮಾರ್, ಜಿಲ್ಲಾ ಬಿಜೆಪಿ ವಕ್ತಾರ ಶಿವಕುಮಾರ್, ಮಧುರಾಜ್, ಸಿದ್ದೇಶ, ಕಾರ್ಯದರ್ಶಿ ನಂದನ್ ಕುಮಾರ್, ಪುಟ್ಟಸ್ವಾಮಿ, ಮೂಗೂರು ಹೋಬಳಿ ಶಕ್ತಿ ಕೇಂದ್ರ ಅಧ್ಯಕ್ಷ ಮಹದೇವಸ್ವಾಮಿ, ಜಿಲ್ಲಾ ಕಾರ್ಯದರ್ಶಿ ಶಿವಪ್ರಸಾದ್, ಕೃಷ್ಣಯ್ಯ ಇತರರಿದ್ದರು.

ನಂ.ಗೂಡಲ್ಲಿ ಜೆಡಿಎಸ್ ಸದೃಢವಾಗಿದೆ: ಆರ್.ಮಾದೇಶ್



ನಂಜನಗೂಡು, ಫೆ.2– ನಿಷ್ಠಾವಂತ ಕಾರ್ಯಕರ್ತರ ಪರಿಶ್ರಮದಿಂದ ನಂಜನಗೂಡು ಕ್ಷೇತ್ರದಲ್ಲಿ ಜೆಡಿಎಸ್ ಪಕ್ಷ ಸದೃಢವಾಗಿದೆ ಎಂದು ಜೆಡಿಎಸ್ ಟಿಕೆಟ್ ಆಕಾಂಕ್ಷಿ ಆರ್.ಮಾದೇಶ್ ತಿಳಿಸಿದರು.

ನಗರದ ಮಹದೇಶ್ವರ ಭವನದಲ್ಲಿ ನಡೆದ ಕಾಂಗ್ರೆಸ್ ಕಾರ್ಯಕರ್ತರು ಜೆಡಿಎಸ್ ಸೇರ್ಪಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಂಜನಗೂಡು ಕ್ಷೇತ್ರ ಜೆಡಿಎಸ್ ಭದ್ರಕೋಟೆ. ಡಿ.ಟಿ.ಜಯಕುಮಾರ್ ಬಳಿಕ ಕಳಲೆ ಕೇಶವಮೂರ್ತಿ ಮತ್ತು ದಯಾನಂದ ಮೂರ್ತಿ ಪಕ್ಷವನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡು ಬಲಿಕೊಟ್ಟರು. ಆದರೂ ಕ್ಷೇತ್ರದಲ್ಲಿ ಜೆಡಿಎಸ್‌ನ ನಿಷ್ಠಾವಂತ ಕಾರ್ಯಕರ್ತರಿಂದ ಪಕ್ಷ ಸದೃಢವಾಗಿದ್ದು, ತಾಲೂಕಿನ ಬೇರೆ ಪಕ್ಷಗಳ ಕಾರ್ಯಕರ್ತರು ಸ್ವ ಇಚ್ಛೆಯಿಂದ ಜೆಡಿಎಸ್ ಸೇರ್ಪಡೆಗೊಳ್ಳುತ್ತಿದ್ದಾರೆ ಎಂದರು.

ಬಿಜೆಪಿ ಸರ್ಕಾರದ ಬೆಲೆ ಏರಿಕೆ, ಭ್ರಷ್ಟಾಚಾರದಿಂದ ಜನ ಬೇಸತ್ತಿದ್ದಾರೆ. ಕಾಂಗ್ರೆಸ್ ಕೂಡ ಬಡವರಿಗೆ, ರೈತರಿಗೆ ನೆರವಾಗುವ ಕಾರ್ಯಕ್ರಮ ರೂಪಿಸುವಲ್ಲಿ ವಿಫಲವಾಗಿದೆ. ಆದ್ದರಿಂದಲೇ ರೈತ ಬೆಂಬಲ ಬೆಲೆ ಸಿಗದೆ ಒದ್ದಾಡುವಂತಾಗಿದೆ. ರಾಜ್ಯದಲ್ಲಿ ಜನ ಸಾಮಾನ್ಯರ, ರೈತರ ಬದುಕು ಹಸನಾಗಲು ಪ್ರಾದೇಶಿಕ ಪಕ್ಷದಿಂದ ಮಾತ್ರ ಸಾಧ್ಯ. ಹೀಗಾಗಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಪಂಚರತ್ನ ಕಾರ್ಯಕ್ರಮ ರೂಪಿಸಿ ಪಕ್ಷ ಸಂಘಟನೆಗಾಗಿ ರಾಜ್ಯಾದ್ಯಂತ ಸಂಚರಿಸುತ್ತಿದ್ದಾರೆ. ಅವರು ಈ ಬಾರಿ ಮುಖ್ಯಮಂತ್ರಿಯಾಗುವುದು ಖಚಿತ. ಅವರ ಕೈ ಬಲಪಡಿಸಲು ಕಾರ್ಯಕರ್ತರು ಕ್ಷೇತ್ರದಲ್ಲಿ ಪಕ್ಷ ಸಂಘಟಿಸಿ ಚುನಾವಣೆಗೆ ಸಿದ್ಧರಾಗಬೇಕೆಂದು ಕರೆನೀಡಿದರು.

ಮುಖಂಡ ಸುರೇಶ್ ಮಾತನಾಡಿ, ಆರ್.ಮಾದೇಶ್ ಕ್ಷೇತ್ರದಲ್ಲಿ ಜನರ ನೋವು ನಲಿವಿಗೆ ಸ್ಪಂದಿಸುತ್ತಿದ್ದಾರೆ. ತಾಲೂಕಿನ ಹಲವು ಮಠಗಳಿಗೆ ವೈಯಕ್ತಿಕವಾಗಿ ಬೋರ್‌ವೆಲ್ ಕೊರೆಸುವ ಮೂಲಕ ಸಮಾಜ ಸೇವೆಯಲ್ಲಿ ನಿರತರಾಗಿದ್ದಾರೆ. ಅವರನ್ನು ಈ ಬಾರಿ ಬೆಂಬಲಿಸುವ ಮೂಲಕ ಕುಮಾರಸ್ವಾಮಿ ಕೈ ಬಲಪಡಿಸಬೇಕು ಎಂದರು.

ಈ ವೇಳೆ ಮಾದಾಪುರ, ಬಸಾಪುರ, ಹಗಿನವಾಳು, ಕಪ್ಪಸೋಗೆ ಗ್ರಾಮಗಳ ಕಾರ್ಯಕರ್ತರು ಬಿಜೆಪಿ, ಕಾಂಗ್ರೆಸ್ ತೊರೆದು ಜೆಡಿಎಸ್ ಸೇರ್ಪಡೆಗೊಂಡರು. ಸಮಾರಂಭದಲ್ಲಿ ಜೆಡಿಎಸ್ ತಾಲೂಕು ಅಧ್ಯಕ್ಷ ಆರ್.ವಿ.ಮಹದೇವಸ್ವಾಮಿ, ರೈತ ಸಂಘದ ರೇಣುಕಾ ಪ್ರಸಾದ್, ಮುಜಾಹಿದ್, ಪುನೀತ್‌ಗೌಡ, ನಾಗೇಂದ್ರ, ನಾಗೇಗೌಡ, ಶ್ರೀಧರ್, ಪಾಪಣ್ಣ, ವಿಶ್ವಾಸ್‌ಗೌಡ ಸೇರಿದಂತೆ ಜೆಡಿಎಸ್ ಕಾರ್ಯಕರ್ತರು ಇದ್ದರು.

ಕುಡಿಯುವ ನೀರು ಪೂರೈಸುವ ಕಾಮಗಾರಿ ಶೀಘ್ರ ಆರಂಭ



ಹುಣಸೂರು, ಫೆ.2– 277 ಕಂದಾಯ ಗ್ರಾಮಗಳೂ ಸೇರಿದಂತೆ ತಾಲೂಕಿನ 315 ಗ್ರಾಮಗಳಿಗೆ ಕಾವೇರಿ ನದಿಯಿಂದ ಶುದ್ಧ ಕುಡಿಯುವ ನೀರು ಪೂರೈಸುವ 317 ಕೋಟಿ ರೂ. ವೆಚ್ಚದ ಕಾಮಗಾರಿ ಶೀಘ್ರದಲ್ಲೇ ಆರಂಭವಾಗಲಿದೆ ಎಂದು ಶಾಸಕ ಹೆಚ್.ಪಿ.ಮಂಜುನಾಥ್ ತಿಳಿಸಿದರು.

ನಗರದಲ್ಲಿ ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಕಾಮಗಾರಿಗೆ ಟೆಂಡರ್ ಸಲ್ಲಿಸುವ ಪ್ರಕ್ರಿಯೆ ಫೆ.4ರಿಂದ ಪ್ರಾರಂಭವಾಗಲಿದ್ದು, ಫೆ.17ಕ್ಕೆ ಮುಕ್ತಾಯವಾಗಲಿದೆ. ಫೆ.20ಕ್ಕೆ ತಾಂತ್ರಿಕ ಪ್ರಕ್ರಿಯೆ ನಡೆಯಲಿದ್ದು, ಫೆ.24 ರಂದು ಟೆಂಡರ್ ತೆರೆಯಲಾಗುವುದು. ನಂತರ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದರು. ತಾಲೂಕಿನಲ್ಲಿ ಲಕ್ಷ್ಮಣತೀರ್ಥ ನದಿ ಹಾದು ಹೋಗಿದ್ದರೂ, ಅದರ ಉಪಯೋಗ ನಮಗೆ ಇಲ್ಲವಾಗಿದೆ. ಹೀಗಾಗಿ ತಾಲೂಕಿನ ಜನತೆಗೆ ಕಾವೇರಿ ನದಿಯ ಶುದ್ಧ ಕುಡಿಯುವ ನೀರು ದೊರಕಿಸಿಕೊಡಬೇಕು ಎಂಬ ಸದುದ್ದೇಶದಿಂದ ಈ ಕಾಮಗಾರಿ ಕೈಗೊಳ್ಳಲಾಗಿದ್ದು, 2023–24ರ ಡಿಸೆಂಬರ್ ಅಂತ್ಯಕ್ಕೆ ತಾಲೂಕಿನ ಪ್ರತಿ ಮನೆಗೂ ಶುದ್ಧ ಕಾವೇರಿ ನೀರು ಪೂರೈಕೆಯಾಗಲಿದೆ ಎಂದರು.

ಈಗಾಗಲೇ 20, 15 ಲಕ್ಷ ಸಾಮರ್ಥ್ಯದ 15 ನೀರಿನ ಟ್ಯಾಂಕ್ ನಿರ್ಮಿಸುವ ಕಾಮಗಾರಿ ಆರಂಭವಾಗಿದೆ. ಇವುಗಳಿಂದ ಗ್ರಾಮ ಮಟ್ಟದಲ್ಲಿ ನೀರು ತುಂಬಿಸಲು 400 ಟ್ಯಾಂಕ್‌ಗಳನ್ನು ನಿರ್ಮಿಸಲು ಸೂಚಿಸಲಾಗಿದ್ದು, ಅದಕ್ಕೆ ಬೇಕಾದ ಅಗತ್ಯ ಅನುದಾನ ಲಭ್ಯವಿದೆ ಎಂದರು. ಈ ಸಂದರ್ಭ ಜೆಜೆಎಂನ ಎಇಇ ಕಲಿಂ ಅಹಮದ್ ಉಪಸ್ಥಿತರಿದ್ದರು.



ಪಿರಿಯಾಪಟ್ಟಣದ 6ನೇ ವಾರ್ಡ್ ಮೇದರ್ ಬ್ಲಾಕ್‌ನಲ್ಲಿ 50 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಮಹದೇವ್ ಗುದ್ದಲಿ ಪೂಜೆ ನೆರವೇರಿಸಿದರು. ಈ ವೇಳೆ ಕೊಳಚೆ ನಿರ್ಮೂಲನಾ ಮಂಡಳಿ ಅಧಿಕಾರಿ ತೇಜಸ್ವಿನಿ, ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಪುರಸಭಾಧ್ಯಕ್ಷ ಮಹೇಶ್, ಉಪಾಧ್ಯಕ್ಷೆ ಆಶಾ, ಮಾಜಿ ಅಧ್ಯಕ್ಷ ಮಂಜುನಾಥ್ ಸಿಂಗ್, ಸದಸ್ಯರಾದ ರವಿ, ಬಗರ್‌ಹುಕುಂ ಮಂಡಳಿ ಸದಸ್ಯೆ ನಿರ್ಮಲ, ಪುರಸಭಾ ಮುಖ್ಯಾಧಿಕಾರಿ ಮಹೇಂದ್ರ ಸೇರಿದಂತೆ ಇನ್ನಿತರರಿದ್ದರು.

ಎಸ್.ಅಪ್ಪಾಜಿಗೌಡ ನಿಧನ



ಕಂಪಲಾಪುರ, ಫೆ.2– ಗ್ರಾಮದ ನಿವಾಸಿ, ನಿವೃತ್ತ ಶಿಕ್ಷಕ ಎಸ್.ಅಪ್ಪಾಜಿಗೌಡ (82) ಬುಧವಾರ ರಾತ್ರಿ ನಿಧನರಾದರು. ಮೃತರು ಓರ್ವ ಪುತ್ರಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮ ಕೆಳಗನಹಳ್ಳಿಯಲ್ಲಿ ಗುರುವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

9ನೇ ವರ್ಷದ ಪುಣ್ಯಸ್ಮರಣೆ



ನಿಮ್ಮ ನೆನಪು ನಮ್ಮ ಜೀವನದಲ್ಲಿ ಸದಾ ಹಸಿರಾಗಿರುತ್ತದೆ. ನಮ್ಮ ದಾರಿಯಲ್ಲಿ ನಿಮ್ಮ ಆಶೀರ್ವಾದದ ಬೆಳಕು ಸದಾ ಹರಿಯುತ್ತಿದೆ. ಸದಾ ನಿಮ್ಮ ಸ್ಮರಿಸುತ್ತಾ

ದಿ॥ ಮರಿಯಮ್ಮನವರು
(ಲೇ॥ ಶ್ರೀ ಜೋಗಯ್ಯನವರ ಧರ್ಮಪತ್ನಿ)
ಅಶೋಕನಗರ, ಮಳವಳ್ಳಿ
ನಿಧನ : 03.02.2014

ದುಃಖತಪ್ತರು: ಮಕ್ಕಳು, ಸೊಸೆಯಂದಿರು, ಮತ್ತು ಮೊಮ್ಮಕ್ಕಳು, ಕುಟುಂಬವರ್ಗದವರು

4ನೇ ವರ್ಷದ ಸವಿನೆನಪು



ಕೆ.ಮುತ್ತಯ್ಯರವರು (Rtd.KEB)

ಸದಾ ನಿಮ್ಮ ನೆನಪಿನಲ್ಲಿರುವ: ಮಕ್ಕಳು–ಎಂ.ಎಸ್. ಸತೀಶ್ & ಎಂ.ಹರೀಶ್, ಸೊಸೆಯಂದಿರು, ಮೊಮ್ಮಕ್ಕಳು, ಕುಟುಂಬವರ್ಗ, ಸಿದ್ದನಹುಂಡಿ. ಟಿ.ನರಸೀಪುರ ತಾಲ್ಲೂಕು

ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯ ಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ ಮೈಸೂರು ಸಿಟಿ – 570021, ಮಂಡಿಮೊಹಲ್ಲಾ, ಮಿಷನ್ ಆಸ್ಪತ್ರೆ ರಸ್ತೆ, ಮನೆ ನಂ. 3347 ರಲ್ಲಿ ವಾಸವಾಗಿರುವ ಲೇಟ್ ಅಲ್ತಾಫ್ ಪಾಷ ರವರ ಧರ್ಮಪತ್ನಿ ಶ್ರೀಮತಿ ಮುನೀರ ತಾಜ್ **(Aadhaar No. 5399 8449 0349)**, ಲೇಟ್ ಅಲ್ತಾಫ್ ಪಾಷ ರವರ ಮಗ ಶ್ರೀ. ಮುದಾಸಿರ್ ಪಾಷ **(Aadhaar No. 7345 7169 2171)** ಮತ್ತು ಲೇಟ್ ಅಲ್ತಾಫ್ ಪಾಷ ರವರ ಮಗಳು ಹಾಗೂ ಶ್ರೀ ಮೊಹಮ್ಮದ್ ಶಾಹೀದ್ ರವರ ಧರ್ಮಪತ್ನಿ ಶ್ರೀಮತಿ ನಯೀಮ ಫೀರ್ದೋಸ್ **(Aadhaar No. 2672 4774 9405)** ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ವಿಚಾರದಲ್ಲಿ ಮೇಲೆ ಕಾಣಿಸಿದ ವ್ಯಕ್ತಿಗಳಿಗಲ್ಲದೆ ಬೇರೆ ಯಾರಿಗಾದರು, ಯಾವುದೇ ರೀತಿಯ ಹಕ್ಕಾಗಲೀ, ಹಿತಾಸಕ್ತಿಯಾಗಲೀ, ಭಾಗಾಂಶವಾಗಲೀ ಅಥವಾ ಋಣಗಳಾಗಲೀ ಇದ್ದಲ್ಲಿ ಈ ಕೆಳಕಂಡವರನ್ನು ಈ ದಿನದಿಂದ ಏಳು (7) ದಿನಗಳ ಒಳಗಾಗಿ ಸಂಬಂಧಪಟ್ಟ ದಾಖಲಾತಿಗಳೊಡನೆ ಸಂಪರ್ಕಿಸುವುದು. ಇಲ್ಲವಾದಲ್ಲಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಮೇಲೆ ಕಾಣಿಸಿದವರಿಗಲ್ಲದೆ ಬೇರೆ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿಯಾಗಲೀ ಇಲ್ಲವೆಂದೇ ಪರಿಗಣಿಸಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸುವರು.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ಎನ್.ಆರ್.ಮೊಹಲ್ಲಾ, ಸುಭಾಷ್ ನಗರ, ಈಸ್ಟ್ ಆಫ್ ಓಲ್ಡ್ ಮೈಸೂರು ಬೆಂಗಳೂರು ರಸ್ತೆ, ನಿವೇಶನ ಸಂಖ್ಯೆ 46/1 ಮತ್ತು ಮೈಸೂರು ಮಹಾನಗರ ಪಾಲಿಕೆಯಿಂದ ನೀಡಿರುವ ಫಾರಂ–2 ರ ಪ್ರಕಾರ ಸ್ವತ್ತಿನ ಸಂಖ್ಯೆ 46–2–516–48, ವಿಸ್ತೀರ್ಣ ಪೂರ್ವ ಪಶ್ಚಿಮ 50.00 ಅಡಿ, ದಕ್ಷಿಣೋತ್ತರ 50.00 ಅಡಿ, ಒಟ್ಟು ವಿಸ್ತೀರ್ಣ 2500.00 ಚದರ ಅಡಿಗಳ ನಿವೇಶನ ಮತ್ತು ಈ ಸ್ವತ್ತಿಗೆ ಚಕ್ಕುಬಂದಿ : ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ನಿವೇಶನ ಸಂಖ್ಯೆ 46, ಉತ್ತರಕ್ಕೆ : ನಿವೇಶನ ಸಂಖ್ಯೆ 47 ಮತ್ತು ದಕ್ಷಿಣಕ್ಕೆ : ನಿವೇಶನ ಸಂಖ್ಯೆ 45.

ಸಹಿ/– **ಕೆ.ಎನ್.ಮಹಾದೇವಸ್ವಾಮಿ,**
ಬಿ.ಎಸ್‌ಸಿ., ಎಲ್.ಎಲ್.ಬಿ., ವಕೀಲರು ಮತ್ತು ನೋಟರಿ,
ನಂ.725, 727, ರೂಂ ನಂ. ಎಫ್–1 ಮತ್ತು 2, ಒಂದನೇ ಮಹಡಿ, 5ನೇ ಕ್ರಾಸ್, ಅಲ್ಲಮ ಪ್ರಭು ಕಾಂಪ್ಲೆಕ್ಸ್,
ರಾಮಾನುಜ ರಸ್ತೆ, ಮೈಸೂರು – 570004.
Mob.No.: 9448222522, Office No. 0821-4287998
ದಿನಾಂಕ: 01–02–2023



FOR SALE

Prime location Site 10,800 sqft., in Mysore. Best suitable for commercial, residential purpose on main road - 80ft., surrounded by Brigade & Sankalp Appts., opp. Mittal Panorama Appts., close to city, few minutes from K R Circle, Palace and Zoo.

Contact Genuine Buyers Only
Call: **SHYAMA PRASAD**
9448076193 / 8197824490

ಬೇಕಾಗಿದ್ದಾರೆ

ಫ್ಯಾಷನ್ ಜ್ಯುವೆಲರಿ ಶೋರೂಂನಲ್ಲಿ ಕೆಲಸ ಮಾಡಲು ಸೇಲ್ಸ್ ಎಕ್ಸಿಕ್ಯುಟಿವ್ (ಗರ್ಲ್ಸ್) ಕನ್ನಡ ಮತ್ತು ಇಂಗ್ಲೀಷ್ ವಾಕ್‌ಚಾತುರ್ಯ ವಿರಬೇಕು. ಉತ್ತಮ ಸಂಬಳ + ಇನ್‌ಸೆಂಟಿವ್ಸ್

NPG Lucky Stones — Ashoka Road, Mysore

ಫೋನ್ : **93 42 42 42 41**

ಕಳೆದಿದೆ

ಮೇಜರ್ ಎನ್.ಕೆ. ಅನಂತ ಪದ್ಮನಾಭರಾವ್, ಮನೆ ನಂ. 897, ಬನ್ನಿಮಂಟಪ 'ಬಿ' ಲೇಔಟ್, 5ನೇ ಮೇನ್, ಮೈಸೂರು, ಈ ಮೇಲ್ಕಂಡ ಸ್ವತ್ತಿನ ಅಲಾಟ್‌ಮೆಂಟ್ ಲೆಟರ್, ಪೊಸೆಷನ್ ಸರ್ಟಿಫಿಕೇಟ್, ಖಾತೆ ಟೈಟಲ್ ಡೀಡ್ ಮತ್ತಿತರ ಮನೆಯ ಮೂಲ ದಾಖಲಾತಿಗಳು ಮನೆಯನ್ನು ಬದಲಾಯಿಸುವ ಸಂದರ್ಭದಲ್ಲಿ ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:

Mob: 9449076845

ಸವಿನೆನಪು



ಶ್ರೀ ಶ್ರೀಕಂಠಪ್ಪ — ನಿಧನ: 03.02.1993
ಶ್ರೀಮತಿ ಲಿಂಗಮ್ಮಣ್ಣಿ — ನಿಧನ: 24.08.2022

ನೀವು ನಮ್ಮನ್ನಗಲಿದ್ದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿ ಹಸಿರಾಗಿದೆ. ನಿಮ್ಮ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರಾರ್ಥಿಸುವ

ದುಃಖತಪ್ತರು: ಕುಟುಂಬವರ್ಗ, ದೇವಯ್ಯನಹುಂಡಿ, ಮೈಸೂರು

ಸವಿನೆನಪು



ಇಂದಿಗೆ ನೀವು ನಮ್ಮನ್ನಗಲಿ 10 ವರ್ಷವಾಯಿತು ಇಂದಿಗೂ ಸದಾ ನಿಮ್ಮ ನೆನಪಿನಲ್ಲಿರುವ. ನೀವು ಹಾಕಿಕೊಟ್ಟ ದಾರಿಯಲ್ಲಿ ನಡೆಯುತ್ತಿರುವ.

ಶ್ರೀಮತಿ ಮಂಜುಳ, ಹೆಚ್.ಹೇಮಂತ್ ಕುಮಾರ್, ಅನುಪಮ, ರಿಷಿಕ್ ನಿಹಾನ್, ಹೆಚ್.ಶಶಿಕುಮಾರ್ ಜ್ಯೋತಿ, ನಿಹಾನಿ ರಾಮಾನುಜ ರಸ್ತೆ, ಮೈಸೂರು ಮತ್ತು ಬಡಗಲಹುಂಡಿ ಗ್ರಾಮಸ್ಥರು

ಶ್ರೀ ಹುಚ್ಚಯ್ಯರವರು
(ಆರೋಗ್ಯ ಇಲಾಖೆ)



STAR OF MYSORE

SPECIAL ISSUE

Star of Mysore is completing **45** years of service on **16th February 2023** and entering **46th** year of publication. As in the past, this year too we will be publishing a Special Issue.

We request our advertisers and patrons to release their advertisements before **10th February** to facilitate printing as per schedule.

HEAD OFFICE

0821-2496520 (5-LINES)
0821-2496522 / 23
Email : ad@starofmysore.com

Maria G. Fernandes
Advt. Manager: **94485-25060**

Joy Anthony Dove
Sr. Executive-Ad Sales
89516-68960

Prema
Sr. Executive Advertising
98805-49879

K.R. Circle Office : 0821-2431774
D.D. Urs Road Office : 0821-2428695
Kodagu Office : 97314-69871
Mandya Office : 87629-60325
Chamarajanagar : 92422-65657
Nanjangud : 99016-02226
Hassan : 94484-01175
Bengaluru : 98440-46761

ಸಾರ್ವಜನಿಕ ಪ್ರಕಟಣೆ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣ ಹೋಬಳಿ, ಹಾರೋಹಳ್ಳಿ ಅಂಚೆ, ಮೆಲ್ಲಹಳ್ಳಿ ಗ್ರಾಮ, ನಾಯಕರ ಬೀದಿ ಇಲ್ಲಿಯ ನಿವಾಸಿಗಳಾದ ಲೇಟ್ ವೈರಮುಡಿ ರವರ ಧರ್ಮಪತ್ನಿ ಶ್ರೀಮತಿ ಬೋರಮ್ಮ ಮತ್ತು ಸದರಿ ಲೇಟ್ ವೈರಮುಡಿ ರವರ ಮೊಮ್ಮಕ್ಕಳುಗಳಾದ ಶ್ರೀಮತಿ ಜಯಮ್ಮ ಮತ್ತು ಶ್ರೀ ನಾಗರಾಜು ರವರುಗಳಿಂದ ನನ್ನ ಕಕ್ಷಿಗಾರರು ಅಂದರೆ ಮೈಸೂರು ನಗರ, ಚಾಮರಾಜ ಮೊಹಲ್ಲಾ, ಸೋನಾರ್ ಬೀದಿ, ಗೀತಾನಿಕೇತನ, ನಂ.36 ರಲ್ಲಿರುವ ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕಾ ಸೇವಾ ಟ್ರಸ್ಟ್ (ರಿ) ಇದನ್ನು ಪ್ರತಿನಿಧಿಸುವವರು ಇದರ ಕಾರ್ಯದರ್ಶಿಯಾದ ಶ್ರೀಮತಿ ರಂಗಲಕ್ಷ್ಮಿ ಕೋಂ ಆನಂದ್ ರವರು ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಇಚ್ಛಿಸಿದ್ದು, ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ವಿಧವಾದ ಹಕ್ಕುಭಾಧ್ಯತೆ ಇದ್ದಲ್ಲಿ ಈ ದಿನದಿಂದ 7 (ಏಳು) ದಿನದೊಳಗೆ ತಮ್ಮ ಲಿಖಿತ ತಕರಾರಗಳನ್ನು ದಾಖಲೆ ಸಮೇತ ಈ ಕೆಳಕಂಡ ನನಗೆ ಸಲ್ಲಿಸಬೇಕಾಗಿ ಪ್ರಕಟಿಸಲಾಗಿದೆ. ಒಂದು ವೇಳೆ 07 (ಏಳು) ದಿನಗಳ ಒಳಗೆ ಯಾವುದೇ ತಕರಾರು ಬಾರದಿದ್ದಲ್ಲಿ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರು ಯಾವುದೇ ತಕರಾರು ಇಲ್ಲ ಎಂದು ಪರಿಗಣಿಸಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಕ್ರಯದ ಮುಂದಿನ ಪ್ರಕ್ರಿಯೆಗಳನ್ನು ಮೇಲೆ ತಿಳಿಸಿದ ವ್ಯಕ್ತಿಗಳೊಡನೆ ನಡೆಸುತ್ತಾರೆ ಎಂದು ತಿಳಿಯುವುದು. 07 (ಏಳು) ದಿನಗಳ ನಂತರ ಬರುವ ಯಾವುದೇ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣ ಹೋಬಳಿ, ಹಾರೋಹಳ್ಳಿ ಗ್ರಾಮದ ಸರ್ವೆ ನಂ.645/2 ರ ವಿಸ್ತೀರ್ಣ 0–27 ಗುಂಟೆ (ಇಪ್ಪತ್ತೇಳು) ಜಮೀನಿಗೆ ಚೆಕ್ಕುಬಂದಿ:– ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ : ಬೋಗಯ್ಯ ರವರ ಸ್ವತ್ತು, ಉತ್ತರಕ್ಕೆ : ಸೈಕಲ್ ಶಾಪ್ ಮಾರಯ್ಯ ರವರ ಸ್ವತ್ತು, ದಕ್ಷಿಣಕ್ಕೆ : ಕುಂದಾಸಿ ಮಂಚಯ್ಯ ರವರ ಸ್ವತ್ತು.

Sd/- **Pradeepkumar,**
M.B.A., LLB, Advocate,
Enrolment No. KAR/1332/2012,
#2917/A, 1st Floor, Opp. TTL College, Kantharaja Urs Road,
Saraswathipuram, Mysore - 570 009.
Mob.: 9740315184
Date: 02.02.2023

ಹಕೊಬಾ ಕಂಪನಿಯ ಎಂಬ್ರಾಡಿಯರಿ ಉತ್ಪನ್ನಗಳು

ಭಾರಿ ರಿಯಾಯಿತಿ ಮಾರಾಟ
ಕಡೆಯ 3 ದಿನಗಳು ಮಾತ್ರ : ಶುಕ್ರವಾರ, ಶನಿವಾರ ಮತ್ತು ಭಾನುವಾರ
ಎಲ್ಲಾ 2023ರ ಹೊಸ ಸ್ಟಾಕ್‌ನ ಸಂಗ್ರಹ ಮಿಲ್‌ನ ಬೆಲೆಯಲ್ಲಿ



SINCE 1960 hakoba
ನಿಮ್ಮ ಊಹೆಗೂ ನಿಲುಕದ ಎಂಬ್ರಾಯಿಡರಿ ಉತ್ಪನ್ನಗಳು

ಹಕೊಬಾ ಉತ್ಪನ್ನಗಳು – ಚಿಕಾನ್ ಎಂಬ್ರಾಯಿಡರೀಸ್

- ಒಮ್ಮೆ ಪರೀಕ್ಷಿಸಿ ಎಕ್ಸ್‌ಪೋರ್ಟ್ ಡ್ರೆಸ್ ಮೆಟಿರಿಯಲ್ಸ್ • ಪಂಜಾಬಿ ಸೂಟ್ ಫ್ಯಾಬ್ರಿಕ್ಸ್
- ಸೀರೆಗಳು • ಆರ್ಗಾಂಡಿ ಸೀರೆ • ವಾಯಿಲ್ ಸೀರೆ • ಟೆರ‍್ರಿನ್ ಸೀರೆ • ಶಿಫಾನ್ ಸೀರೆ
- ತಸ್ವಾ ಸೀರೆ • ಸ್ವಿಸ್ ವಾಯಿಲ್ ಸೀರೆ • ರೆಡಿಮೆಡ್ ಪಲಾಜೋ ಪ್ಯಾಂಟ್
- ಕುರ್ತೀಸ್ • ಎಂಬ್ರಾಯಿಡರಿ ಲೆಗ್ಗಿಂಗ್ಸ್ ಮತ್ತು ದುಪ್ಪಟ್ಟಗಳು

ಭಾರಿ ರಿಯಾಯಿತಿ 50% ರವರೆಗೆ
Shop online at www.hakoba.in

ಸ್ಥಳ : ದಿ ಇನ್ಸ್‌ಟ್ಯೂಷನ್ ಆಫ್ ಇಂಜಿನಿಯರ್ಸ್
ಜೆ.ಎಲ್.ಬಿ. ರಸ್ತೆ, ಮುಡಾ ಕಛೇರಿ ಪಕ್ಕ, ಮೈಸೂರು 570005

